ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೭ ಫೆಬ್ರವರಿ ೧೨, ೧೯೮೯ ರೂ. ೧-೦೦



ಕಾಂಗ್ರೆಸ್(ಐ) ಮತದಾರರ ವಿಶ್ವಾಸಕ್ಕೆ ಸಂಪೂರ್ಣ ಅನರ್ಹ

ಕಾಂಗ್ರೆಸ್(ಐ)ನ ಅವನತಿಗೆ ಮಿತಿಯೇ ಇಲ್ಲ. ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯಾಗಲಿ, ನಮ್ಮ ಜನಗಳ ಐಕ್ಯತೆಯ ಪ್ರಶ್ನೆಯಾಗಲೀ ಇವು ಯಾವುವು ಅಧಿಕಾರ ಪಡೆಯುವಲ್ಲಿ ಅಸಹ್ಯಕರ ಮತ್ತು ಪ್ರತಿಗಾಮಿ ವಿಧಾನಗಳನ್ನು ಬಳಸದಂತೆ ಕಾಂಗ್ರೆಸ್(ಐ)ನ್ನು ತಡೆಯಲಾರದು ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಖಂಡಿಸಿದೆ.

ಜನವರಿ 31 ಮತ್ತು ಫೆ. 1ರಂದು ನವದೆಹಲಿಯಲ್ಲಿ ಸಭೆ ಸೇರಿದ ಪಾಲಿಟ್‌ಬ್ಯೂರೋ ಪಕ್ಷದ 13ನೇ ಮಹಾಧಿವೇಶನದ ನಂತರದ ರಾಜಕೀಯ ಬೆಳವಣಿಗೆಗಳನ್ನು ಪರಿಶೀಲಿಸಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಆಂಧ್ರ ಪ್ರದೇಶದಲ್ಲಿ ಕಾಂಗ್ರೆ ಎಂ.ಎಲ್.ಎ.ಯ ಅಮಾನುಷ ಕೊಲೆಯನ್ನು ಬಳಸಿಕೊಂಡು ಕಹಿ ಜಾತಿ ಭಾವನೆಗಳನ್ನು ಎಬ್ಬಿಸಲು ಅದು ಪ್ರಯತ್ನಿಸಿದ್ದನ್ನು ನಾಗಾಲ್ಯಾಂಡ್ ಮತ್ತು ಮಿಝೋರಾಂಗಳಲ್ಲಿ ಚುನಾವಣೆ ಗೆಲ್ಲಲು ಬಳಸಿದ ಅನೀತಿಯುತ ಮಾರ್ಗಗಳನ್ನು ಪ್ರಸ್ತಾಪಿಸುತ್ತಾ ಅದರ ಸಮಯ ಸಾಧಕತೆಯನ್ನು ಈ ರೀತಿ ಖಂಡಿಸಿದೆ.

ತಮಿಳನಾಡಿನ ಮುಖಭಂಗವನ್ನು ಮರೆಮಾಚಲು ಕಾಂಗ್ರೆ ನಾಗಾಲ್ಯಾಂಡ್ ಮತ್ತು ಮಿಝೋರಂನ ಗೆಲುವಿನ ಪ್ರದರ್ಶನ ನಡೆಸುತ್ತಿದೆ ಈ ಎರಡು ರಾಜ್ಯಗಳಲ್ಲಿ ಅದು ಅಧಿಕಾರ ಪಡೆಯಲು ಚುನಾವಣಾ ಅನೀತಿ ನಡೆಸಿದೆ ಎಂಬುದು ಈಗ ಸ್ಪಷ್ಟ. ಮಿಜೋರಂನಲ್ಲಂತೂ ಅದು ಬಹಿರಂಗ ವಾಗಿಯೇ ಕ್ರಿಶ್ಚಿಯನ್ ಧರ್ಮದ ಹೆಸರಿನಲ್ಲೇ ಮತದಾರರ ಮೊರೆ ಹೊಕ್ಕಿತು. ತಾನೊಂದು ಕೋಮುವಾದಿ ಪಕ್ಷವೆಂಬಂತೆಯೇ ವರ್ತಿಸಿತು. ಆದ್ದರಿಂದ ಅದು ಮತದಾರರ ವಿಶ್ವಾಸ ಪಡೆಯಲು ಪೂರ್ಣವಾಗಿ ಅನರ್ಹವೆಂದು ಪಾಲಿಟ್‌ಬ್ಯೂರೋ ಹೇಳಿದೆ.

ಸಮರ್ಥ ಪರ್ಯಾಯ ಹೇಗೆ?

ತಮಿಳುನಾಡಿನಲ್ಲಿ ಡಿ.ಎಂ.ಕೆ.ಯ ವಿಜಯ ಕಾಂಗ್ರೆಸ್(ಐ)ನ ಜನ-ವಿರೋಧಿ ನೀತಿಗಳ ನೇರ ನಿರಾಕರಣೆ. ಯಾಕೆಂದರೆ ಈ ಬಾರಿ ಅಲ್ಲಿನ ಚುನಾವಣೆ ಕೇವಲ ಅಲ್ಲಿಯ ಪಕ್ಷಗಳಿಗೆ ಸೀಮಿತವಾಗಿರಲಿಲ್ಲ. ಬದಲಿಗೆ ಕಾಂಗ್ರೆಸ್(ಐ)ನ ವಿರುದ್ಧ ಅಖಿಲ ಭಾರತ ಚಳುವಳಿಯ ಭಾಗವಾಗಿ ಈ ಚುನಾವಣಾ ಹೋರಾಟ ನಡೆಯಿತು. ಸ್ವತಃ ಡಿ.ಎಂ.ಕೆ. ರಾಷ್ಟ್ರೀಯ ರಂಗದ ಅಂಗವಾಗಿ ಚುನಾವಣಾ ಹೋರಾಟ ನಡೆಸಿತು. ರಾಷ್ಟ್ರೀಯರಂಗ ಹಾಗೂ ಸಿ.ಪಿ.ಐ.(ಎಂ)ನ ಅಖಿಲ ಭಾರತ ಮುಖಂಡರು ರಾಷ್ಟ್ರೀಯ ಪ್ರಶ್ನೆಗಳನ್ನೆತ್ತಿ ಚುನಾವಣಾ ತೀರ್ಪನ್ನು ರೂಪಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು.

ಡಿ.ಎಂ.ಕೆ.ಯನ್ನು ಈ ವಿಜಯಕ್ಕಾಗಿ ಅಭಿನಂದಿಸುತ್ತಾ ಪಾಲಿಟ್‌ಬ್ಯೂರೋ ಈ ವಿಜಯವನ್ನು ಕ್ರೋಢೀಕರಿಸಲು ಡಿ.ಎಂ.ಕೆ. ಸರ್ಕಾರ ಈಗ ರಾಜಕೀಯ ಬೇಧ-ಭಾವವಿಲ್ಲದೆ ಸಮಸ್ತ ತಮಿಳುನಾಡು ಜನತೆಯ ಪ್ರತಿನಿಧಿಯಾಗಿ ವರ್ತಿಸುವುದು ಅಗತ್ಯ ಎಂದು ಹೇಳಿದೆ.

ತಮಿಳುನಾಡಿನಲ್ಲಿ ಕಾಂಗ್ರೆಸ್(ಐ) ಸೋಲು ದೇಶಾದ್ಯಂತ ಪ್ರಜಾಪ್ರಭುತ್ವ ಶಕ್ತಿಗಳನ್ನು ಮತ್ತು ವಿರೋಧಿ ಶಕ್ತಿಗಳನ್ನು ಬಲಪಡಿಸಬೇಕೆಂದಿರುವ ಪಾಲಿಟ್‌ಬ್ಯೂರೋ ಎಲ್ಲೆಲ್ಲಿ ವಿರೋಧಿ ಜಾತ್ಯಾತೀತ ಶಕ್ತಿಗಳು ಎಡ ಪಕ್ಷಗಳ ಬೆಂಬಲದಿಂದ ಒಂದು ಸಮರ್ಥ ಪರ್ಯಾಯವಾಗಿ ಜನರ ಮುಂದೆ ಬರಲು ಸಾಧ್ಯವೋ ಅಲ್ಲೆಲ್ಲಾ ಈ ಪರ್‍ಯಾಯದತ್ತ ದೊಡ್ಡ ಪ್ರಮಾಣದಲ್ಲಿ ಜನತೆ ತಿರುಗುತ್ತಾರೆ. ಕಾಂಗ್ರೆಸ್(ಐ)ಗೆ ಸೋಲುಣಿಸುತ್ತಾರೆ ಎಂಬುದನ್ನು ಈ ಚುನಾವಣೆ ತೋರಿಸಿಕೊಟ್ಟಿದೆ ಎಂದು ಈ ಹೇಳಿಕೆ ತಿಳಿಸಿದೆ. ಆದರೆ ಸಿ.ಪಿ.ಐ. ಈ ಸರ್ವ ಸಾಮಾನ್ಯ ವಿಜಯದಿಂದ ದೂರ ನಿಂತಿರುವುದು ಖೇದಕರ. ಇಂತಹ ಚಂಚಲತೆಗಳು ಜನರಲ್ಲಿ ಪರ್‍ಯಾಯದ ಸಾಮರ್ಥ್ಯದ ಬಗ್ಗೆ ಅನುಮಾನ ಹುಟ್ಟಿಸುತ್ತದೆಯಾದ್ದರಿಂದ ಯಾವುದೇ ಸಂದರ್ಭದಲ್ಲಿ ಅದಕ್ಕೆ ಅವಕಾಶವಿರಬಾರದೆಂದು ಪಾಲಿಟ್‌ಬ್ಯೂರೋ ಎಚ್ಚರಿಸಿದೆ.


ಪುಟ 8

ಜಾತೀಯ ಅಸಮಾನತೆಗೆ ಮುಟ್ಟುಗೋಲು ಹಾಕಲೇಬೇಕು

ಜನವರಿ 14ರಂದು ಸಂಕ್ರಮಣದ ದಿವಸ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ ದಲಿತರ ಮನೆಗಳಿಗೆಲ್ಲ ಬೆಂಕಿ ಹಚ್ಚಿ ನೂರಾರು ಜನರನ್ನು ನಿರ್ಗತಿಕರನ್ನಾಗಿ ಮಾಡಿದ ಘಟನೆಯನ್ನು ಅಭ್ಯಾಸ ಮಾಡಿ ವರದಿ ಮಾಡಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಆದೇಶ ನೀಡಿದಂತೆ ನಾನು ಮತ್ತು ಮಾರುತಿ ಮಾನ್ಪಡೆಯವರು ಫೆ. 1ರಂದು ಚಿಂಚೋಳಿಗೆ ಸಂದರ್ಶನವಿತ್ತು ನೊಂದವರನ್ನೂ ದಲಿತರ ಹಾಗೆಯೇ ಮೇಲ್ಜಾತಿಯ ಕೆಲವರಿಗೆಲ್ಲ ಭೇಟಿಯಾಗಿ ಚರ್ಚಿಸಿದಾಗ ಕೆಲವು ಮುಖ್ಯ ಅಂಶಗಳು ಕಾಣಬಂದವು.

ಶಕ್ತಿಗಳಿಗೆಲ್ಲ ಸ್ವಾಭಾವಿಕವಾಗಿಯೇ ಕಣ್ಣು ಕೆಂಪಾಗುವಂತೆ ಮಾಡಿದೆ. ಸಮಾಜದಲ್ಲಿಯ ತಮ್ಮ ಸ್ಥಾನಕ್ಕೆ ಧಕ್ಕೆ ಉಂಟಾಗುತ್ತದೆಂಬ ಭೀತಿ ಉಂಟು ಮಾಡಿದಂತೆ ಕಂಡು ಬರುತ್ತದೆ.

"ನೀವೂ ನಮ್ಮ ಹಾಗೆಯೇ ಚಲೋ ಸೀರೆ ಉಡುತ್ತೀರಲ್ಲವ್ವಾ" "ನಿಮ್ಮ ಮಕ್ಕಳೂ ನಮ್ಮ ಮಕ್ಕಳ ಜೋಡಿ ಶಾಲೇ ಕಾಲೇಜುಗಳಲ್ಲಿ ಕಲಿಯುತ್ತಾರಲ್ಲವ್ವಾ" "ನಿಮ್ಮ ಮಕ್ಕಳಿಗೆಲ್ಲ ಬೇಗ ನೌಕರಿ ಸಿಗುತ್ತದೆ. ಆಫೀಸರುಗಳಾಗುತ್ತಾರೆ. ನಮ್ಮವರು ನಿಮ್ಮವರೆದುರು ಕೈ ಜೋಡಿಸಿ ನಿಲ್ಲಬೇಕಲ್ಲವ್ವಾ ಅಂತೂ ನೀವು ಸುಧಾರಿಸ್ತೀರಿ. ಮುಂದೆ ಹೋಗುತ್ತಿದ್ದೀರಿ'



-ಎನ್.ಕೆ.ಉಪಾಧ್ಯಾಯ

ಇಷ್ಟು ವರ್ಷ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ, ಅತ್ಯಂತ ಕೀಳ್ಮಟ್ಟದಲ್ಲಿದ್ದ ಹರಿಜನ, ಗಿರಿಜನ, ದಲಿತ ವರ್ಗ ಇತ್ತೀಚಿಗಿನ ವರ್ಷಗಳಲ್ಲಿ ಶಾಲೆ-ಕಾಲೇಜುಗಳ ಕಟ್ಟೆಯನ್ನೇರಿ, ಶಿಕ್ಷಣ ಪಡೆದು, ನೌಕರಿ ಸೇರಿ ಅಧಿಕಾರಿಗಳಾಗುತ್ತಿದ್ದಾರೆ. ಆ ಕಾರಣದಿಂದ ಅವರ ಆರ್ಥಿಕ-ಸಾಮಾಜಿಕ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸುತ್ತಿದೆ. ಚಿಕ್ಕಪುಟ್ಟ ವ್ಯಾಪಾರ-ಕೈಗಾರಿಕೆಗಳಲ್ಲಿಯೂ ಆ ಜನ ತೊಡಗಿದ್ದಾರೆ. ಹೀಗಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಇವರು ಮೇಲ್ಜಾತಿಯವರ ಮಟ್ಟಕ್ಕಿಲ್ಲದಿದ್ದರೂ, ಅವರ ಜೊತೆಯಲ್ಲಿ ತಿರುಗಾಡುವಂತಾಗಿದೆ. ಆಟ-ಪಾಟ, ಸಾಮಾಜಿಕ-ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಿದೆ. ಇದನ್ನು ನೋಡಿ ಮೇಲ್ಜಾತಿಯ ಕೆಲವು ಅಭಿಮಾನಿಗಳಿಗೆ, ಪರಂಪರಾವಾದಿಗಳಿಗೆ, ಜಾತೀಯ ಮತೀಯ

ಎಂದೆಲ್ಲ ಚರ್ಚೆ ನಡೆಯುತ್ತಿವೆಂದು, ಮೇಲ್ಜಾತಿಯ ಹೆಣ್ಣು ಮಕ್ಕಳು ಪ್ರತಿಕ್ರಿಯಿಸುತ್ತಿದ್ದಾರೆಂದು ಹೊಲದ ಕೆಲಸಕೇ ಹೋಗುವ ಹರಿಜನ ಮಹಿಳೆಯರು ಉದ್ಗಾರ ತೆಗೆದರು. ಈ ಘಟನೆಯ ನಂತರ ತಮ್ಮನ್ನೆಲ್ಲ ಕೆಲಸಕ್ಕೆ ಕರೆಯುವುದನ್ನೂ ಬಿಟ್ಟೇಬಿಟ್ಟರೆಂದು ದುಃಖದಿಂದ ಉದ್ಗಾರ ತೆಗೆದರು.

ಹಿಂದುಳಿದವರು ಸುಧಾರಿಸುತ್ತಿರುವುದನ್ನು, ಓದು ಬರಹ ಕಲಿಯುತ್ತಿರುವುದನ್ನು, ಸಾರ್ವಜನಿಕ ಜೀವನದಲ್ಲಿ ಸಮಾನತೆಯಲ್ಲಿ ವರ್ತಿಸುತ್ತಿರುವುದನ್ನು ಕಂಡು ಸಹಿಸಲಾರದೆ ಅಸೂಯೆ ಪಡುತ್ತಿರುವ ಜನರಿಗೆ ಆರ್.ಎಸ್.ಎಸ್. ಸುಲಭ ಆಶ್ರಯ ನೀಡಿದೆ. ಪವಿತ್ರ ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಮೇಲ್ಜಾತಿಯವರನ್ನೆಲ್ಲ ಪ್ರಚೋದಿಸಿ

ಪುಟ 8ಕ್ಕೆ

ಫೆಬ್ರುವರಿ 18; ಕೇರಳ ದಿನ

ಕೇರಳದ ಎಲ್.ಡಿ.ಎಫ್. ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರು ಪಕ್ಷಪಾತಪೂರ್ಣ ಹಾಗೂ ಹಗೆಸಾಧಕ ನಿಲುವು ತಳೆಯುತ್ತಿದ್ದಾರೆ. ಚುನಾಯಿತ ಸರ್ಕಾರವನ್ನು ಬುಡಮೇಲು ಮಾಡಲು ರಾಜ್ಯಪಾಲರು ಬಹಿರಂಗವಾಗಿಯೇ ಸಂವಿಧಾನ ಬಾಹಿರ ವಿಧಾನದಲ್ಲಿ ವರ್ತಿಸುತ್ತಿದ್ದಾರೆ. ರಾಜಭವನವನ್ನು ಕಾಂಗ್ರೆಸ್(ಐ) ನೇತೃತ್ವದ ಯು.ಡಿ.ಎಫ್.ನ ಮುಖ್ಯ ಕಛೇರಿಯಾಗಿ ಪರಿವರ್ತನೆಗೊಂಡಿದೆ. ಅಷ್ಟೇ ಅಲ್ಲ ರಾಜ್ಯಪಾಲರು ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಯ ಸ್ಥಾನವನ್ನು ಕಾನೂನು ಬಾಹಿರವಾಗಿ ದಮನ ಬಂದಂತೆ ಬಳಸಿ, ಸಂಬಂಧಪಟ್ಟ ಸಂಸ್ಥೆಗಳ ಶಿಫಾರಸ್ಸುಗಳನ್ನು ಉಲ್ಲಂಘಿಸಿ ವಿಶ್ವವಿದ್ಯಾಲಯಗಳ ಸೆನೇಟುಗಳನ್ನು ಕಾಂಗ್ರೆಸ್(ಐ) ಜನಗಳಿಂದ ತುಂಬಿದ್ದಾರೆ.

ಹಿಂದಿನ ಕಾಂಗ್ರೆಸ್(ಐ) ಸರ್ಕಾರ ಮಾಡಿಕೊಂಡ ಸಾಲ ಹಾಗೂ ಯೋಜನಾ ಮುಂಗಡವನ್ನು ಮುರಿದುಕೊಳ್ಳುವ ನೆಪದಲ್ಲಿ ರಾಜ್ಯಕ್ಕೆ ಹಣ ಪಾವತಿಯನ್ನು ತಡೆ ಹಿಡಿದು ಎಲ್.ಡಿ.ಎಫ್. ಸರ್ಕಾರವನ್ನು ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂಡುತ್ತಿದೆ. 48 ಕೋಟಿ ರೂ. ಗಳನ್ನು ಇತ್ತೀಚೆಗೆ ತಡೆಹಿಡಿಯಲಾಯಿತು.

ಸತತ ಎರಡನೇ ಬಾರಿ ರಾಜ್ಯಕ್ಕೆ ಅಕ್ಕಿ ಪೂರೈಕೆಯಲ್ಲಿ ಒಟ್ಟು ತಿಂಗಳಿಗೆ 45 ಸಾವಿರ ಟನ್ನುಗಳ ಕಡಿತ ಮಾಡಿ ಕೇರಳದ ಜನತೆಗೆ ಕೇಂದ್ರ ಸರ್ಕಾರ ತೀವ್ರ ತೊಂದರೆಯುಂಟು ಮಾಡುತ್ತಿದೆ. ಈ ಮೂಲಕ ಜನತೆ ಎಲ್.ಡಿ.ಎಫ್. ಸರ್ಕಾರದ ವಿರುದ್ಧ ತಿರುಗಿ ಬೀಳುತ್ತದೆ ಎಂಬ ನಿರೀಕ್ಷೆ ಅವರದ್ದು. ರಾಜ್ಯ ಕಾಂಗ್ರೆಸ್(ಐ) ನಿರಂತರವಾಗಿ ಇಲ್ಲದ ಪ್ರಶ್ನೆಗಳನ್ನೆತ್ತಿ ಕಾನೂನು-ವ್ಯವಸ್ಥೆ ಕೆಡಿಸಿ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ.

ಆದ್ದರಿಂದ ಕೇರಳದ ಎಲ್.ಡಿ.ಎಫ್. ಸರ್ಕಾರ ಹಾಗೂ ಜನತೆಯೊಂದಿಗೆ ಸೌಹಾರ್ದತೆ ವ್ಯಕ್ತಪಡಿಸಲು ಫೆಬ್ರವರಿ 18ರಂದು 'ಕೇರಳ ದಿನ' ಆಚರಿಸಬೇಕೆಂದು ಪಾಲಿಟ್‌ಬ್ಯೂರೊ ಪಕ್ಷದ ಘಟಕಗಳಿಗೆ ಕರೆ ನೀಡಿದೆ. ಜನವರಿ 31 ಹಾಗೂ ಫೆಬ್ರವರಿ 1ರಂದು ನಡೆದ ಪಾಲಿಟ್‌ಬ್ಯೂರೋ ಸಭೆ ಕೇರಳದಲ್ಲಿನ ಸತತ ಹಲ್ಲೆಗಳು ಪ್ರಜಾಪ್ರಭುತ್ವದ ಹಲ್ಲೆ ಎಂದು ಎಲ್ಲಾ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪಕ್ಷಗಳು ಪರಿಗಣಿಸುವಂತೆ ಅವುಗಳ ಜೊತೆ ಚರ್ಚಿಸಲು ನಿರ್ಧರಿಸಿದೆ.

ಮುಂದಿನ ಸಂಚಿಕೆಗಳಲ್ಲಿ.....

ಮಹಾಧಿವೇಶನಗಳ ಅವಲೋಕನ

ಭಾರತದಲ್ಲಿ ಸಾರ್ವಜನಿಕ ವಲಯ

ರಾಜೀವ್ ಆಳ್ವಿಕೆಗೆ ಅಜೇಯ ಪ್ರತಿರೋಧ ಮೂಡಿಸುವುದು ನಮ್ಮ ಜವಾಬ್ದಾರಿ

ಸಿ.ಪಿ.ಐ.(ಎಂ) 13ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ಮಂಡಿಸುತ್ತಾ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ. ಬಿ.ಟಿ.ರಣದಿವೆಯವರು ಪ್ರತಿನಿಧಿಗಳನ್ನು ಹಾಗೂ ಅಭ್ಯಾಗತರನ್ನು ಉದ್ದೇಶಿಸಿ ಆಡಿದ ಮಾತುಗಳ ಸಾರಾಂಶವನ್ನು 'ಐಕ್ಯರಂಗ' ಈಗಾಗಲೇ ಪ್ರಕಟಿಸಿದೆ. ಎರಡು ದಿನ ನಿರ್ಣಯದ ಮೇಲೆ ನಡೆದ ಚರ್ಚೆಗೆ ಉತ್ತರಿಸುತ್ತಾ ಬಿ.ಟಿ.ಆರ್. ಮಾಡಿದ ಭಾಷಣದ ಮುಖ್ಯ ಅಂಶಗಳು ಇಲ್ಲಿವೆ.

ಮಹಾಧಿವೇಶನದ ಪ್ರತಿನಿಧಿಗಳು ರಾಜಕೀಯ ನಿರ್ಣಯದ ಪ್ರತಿಯೊಂದು ಸಾಲನ್ನೂ ಆಮೂಲಾಗ್ರವಾಗಿ ಪರೀಕ್ಷಿಸಿದ್ದಾರೆ ಎಂಬುದು ಅದರ ಮೇಲಿನ ಅತ್ಯಂತ ಫಲದಾಯಕ ಚರ್ಚೆ ತೋರಿಸಿ ಕೊಟ್ಟಿದೆ. ಹಲವು ಸಡಿಲ ಹೇಳಿಕೆಗಳನ್ನು ಸರಿಪಡಿಸಲು, ತಪ್ಪು ಮಾಹಿತಿಗಳನ್ನು ಸರಿಪಡಿಸಲು, ಒರಟು ಪದರಚನೆಗಳನ್ನು ಬದಲಿಸಲು ಅವರು ಪ್ರಯತ್ನಿಸಿದ್ದಾರೆ. ಇದು ಬಹಳ ಒಳ್ಳೆಯ ಸಂಗತಿ. ಪ್ರತಿನಿಧಿಗಳು ಕೆಲವು ನಿರೂಪಣೆಗಳ ಬಗ್ಗೆ ತಮ್ಮ ಶಂಕೆ ವ್ಯಕ್ತಪಡಿಸಿದರು. ಸನ್ನಿವೇಶವನ್ನು ಅತಿಶಯಗೊಳಿಸುತ್ತದೆ ಅಥವಾ ಸನ್ನಿವೇಶದ ಆಳವನ್ನು ಸರಿಯಾಗಿ ಅಂದಾಜು ಮಾಡಿಲ್ಲ ಎಂದು ತಮಗೆ ಅನ್ನಿಸಿದರ ಬಗ್ಗೆ ಹೇಳಿದರು.

ನಿರ್ಣಯವನ್ನು ಒಟ್ಟಾಗಿ ತೆಗೆದುಕೊಂಡಾಗ ಅದರಲ್ಲಿನ ಪ್ರಮುಖ ನಿರೂಪಣೆಗಳ ಬಗ್ಗೆ, ಬದಲಾಗುತ್ತಿರುವ ಸನ್ನಿವೇಶ ಎದುರಿಸಲು ಪ್ರತಿಪಾದಿಸಿದ ಕಾರ್ಯತಂತ್ರಗಳ ಬಗ್ಗೆ ಪ್ರತಿನಿಧಿಗಳು ಭಿನ್ನಾಭಿಪ್ರಾಯ ತೋರಲಿಲ್ಲ. ವರ್ಗ ವಾಸ್ತವತೆಯ ಅಂದಾಜು ಹಾಗೂ ವಿವಿಧ ವರ್ಗ ಶಕ್ತಿಗಳ ಸಂಬಂಧಗಳ ಬಗ್ಗೆ ಐಕಮತ್ಯವಿದೆ. ಅಂದರೆ ಹನ್ನೆರಡನೇ ಮಹಾಧಿವೇಶನ ಹಾಕಿಕೊಟ್ಟ ಮಾರ್ಗವನ್ನು ಜ್ಯಾರಿಗೊಳಿಸುವಲ್ಲಿ ನಮ್ಮ ಪಕ್ಷದೊಳಗಿನ ಏಕೀಕರಣ ಹೆಚ್ಚುತ್ತಾ ಬಂದಿದೆ. ಆ ಅನುಭವ ನಮ್ಮ ಸದ್ಯದ ತಕ್ಷಣದ ಗುರಿಗಳ ಬಗ್ಗೆ ಸಮಾನ ತಿಳುವಳಿಕೆಗೆ ಬರಲು ನೆರವಾಗಿದೆ.

ಅಂತರ್ರಾಷ್ಟ್ರೀಯ ಭಾಗದ ಮೇಲೆ

ನಿರ್ಣಯದ ಅಂತರ್ರಾಷ್ಟ್ರೀಯ ಭಾಗದ ಮೇಲಿನ ಚರ್ಚೆ ಲವಲವಿಕೆಯಿಂದ ಕೂಡಿತ್ತು. ಅರ್ಥಪೂರ್ಣವಾಗಿತ್ತು. ಸಮಾಜವಾದೀ ದೇಶಗಳ ಜನತೆಯೊಂದಿಗೆ ನಮ್ಮ ಆಳವಾದ ಸೋದರತ್ವ, ಮಾರ್ಕ್ಸ್‌ವಾದ-ಲೆನಿನ್ ವಾದಕ್ಕೆ ನಮ್ಮ ವಿಧೇಯತೆ ಹಾಗೂ ಸಮಾಜವಾದೀ ದೇಶಗಳಲ್ಲಿನ, ವಿಶೇಷವಾಗಿ ಸೋವಿಯತ್ ಒಕ್ಕೂಟದಲ್ಲಿನ ಕೆಲವು ಬೆಳವಣಿಗೆಗಳ ಬಗ್ಗೆ ನಮ್ಮ ಕಾತರ ವ್ಯಕ್ತಗೊಂಡಿತು. ಸೋವಿಯತ್ ಒಕ್ಕೂಟದ ಆರ್ಥಿಕ ಸುಧಾರಣೆ ಮತ್ತು ಸಂಬಂಧ ಪಟ್ಟ ಬೆಳವಣಿಗೆಗಳ ಬಗ್ಗೆ ಸಂಗಾತಿಗಳು ಮುಕ್ತವಾಗಿ, ಗಂಭೀರವಾಗಿ, ನೇರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸೋವಿಯತ್ ಒಕ್ಕೂಟದ ಇತಿಹಾಸದ ಬಗ್ಗೆ, ಮುಖ್ಯವಾಗಿ ಸ್ಟಾಲಿನ್ ನೇತೃತ್ವದ ಅವಧಿಯ ಬಗ್ಗೆ ನಕಾರಾತ್ಮಕ, ಅಚಾರಿತ್ರಿಕ ನಿಲುವನ್ನು ಟೀಕಿಸಿದ್ದಾರೆ. ಇದು ಸೋವಿಯತ್ ಒಕ್ಕೂಟದ ಸಮಾಜವಾದದ ಹೆಸರು ಕೆಡಿಸುವ ನಿಲುವು ಎಂದಿದ್ದಾರೆ.

ರಾಜಕೀಯ ನಿರ್ಣಯದಲ್ಲಿ ಈ ಬಗ್ಗೆ ಹೇಳಿರುವ ಅಂಶಗಳು ಕೇಂದ್ರ ಸಮಿತಿಯ ಆಗಸ್ಟ್ ನಿರ್ಣಯಯನ್ನು ಮೀರಿಹೋಗಿವೆ ಎಂದು ಕೆಲವು ಸಂಗಾತಿಗಳ ಅಭಿಪ್ರಾಯ. ರಾಜಕೀಯ ನಿರ್ಣಯದಲ್ಲಿ ಏಪ್ರಿಲ್ ಹಾಗೂ ಆಗಸ್ಟ್‌ನ ಕೇಂದ್ರ ಸಮಿತಿಯ ನಿರ್ಣಯಗಳ ಪ್ರಸ್ತಾಪವಿರಬೇಕು. ಇದರಿಂದ ಹೊಸ ಸಮಿತಿ ಈ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳುವವರೆಗೆ ಈ ಬೆಳವಣಿಗೆಗಳ ಬಗ್ಗೆ ನಮ್ಮ ತಿಳುವಳಿಕೆ ಆಗಸ್ಟ್ ನಿರ್ಣಯದ ಚೌಕಟ್ಟಿನಲ್ಲಿರುತ್ತದೆ ಎಂದು ಸಲಹೆ ನೀಡಿದ್ದಾರೆ. ಇದನ್ನು ಸ್ವೀಕರಿಸುತ್ತೇವೆ. ಉಳಿದಂತೆ ನಿರ್ಣಯದಲ್ಲಿ ಯಾವುದೇ ಬದಲಾವಣೆ ಅಗತ್ಯವಿಲ್ಲವೆಂದು ಕೇಂದ್ರ ಸಮಿತಿ ಭಾವಿಸುತ್ತದೆ.

ಪಾರ್ಟಿ ಶಾಖೆಗಳಿಂದ ಮತ್ತು ಸದಸ್ಯರಿಂದ ಬಂದ ತಿದ್ದುಪಡಿಗಳ ಬಗ್ಗೆ ವರದಿ ಮಾಡುವಾಗ ಕೆಲವು ಸಂಗಾತಿಗಳು ಸೋವಿಯತ್ ಒಕ್ಕೂಟದ ಬಗ್ಗೆ ಬೂರ್ಜ್ವಾ ಅಪಪ್ರಚಾರಕ್ಕೆ ಬಲಿಯಾಗಿದ್ದಾರೆ ಎಂದಿದ್ದೆ. ಕಾ॥ ರಂಗರಾಜನ್ ಈ ತಪ್ಪನ್ನು ಸರಿ ಮಾಡಿದ್ದಾರೆ. ಅವರಂದಂತೆ ಸಂಗಾತಿಗಳು ಸೋವಿಯತ್ ಒಕ್ಕೂಟದಿಂದ ಬರುವ ಸಾಹಿತ್ಯದಿಂದ ದಾರಿ ತಪ್ಪಿದ್ದೇ ಹೆಚ್ಚು. ಕೆಲವು ಸೋವಿಯತ್ ಬುದ್ಧಿ ಜೀವಿಗಳು, ಪ್ರೊಫೆಸರ್‌ಗಳು, ಆರ್ಥಿಕ ತಜ್ಞರು ಬರೆದ ಲೇಖನ, ಟಿಪ್ಪಣಿಗಳನ್ನು ಓದಿದರೆ ಈ ಮಂದಿಗೆ ಸಮಾಜವಾದದ ಬಗ್ಗೆ ಗೌರವ, ತಮ್ಮ ದೇಶ, ಜನ ಹಾಗೂ ಅವರ ತ್ಯಾಗಗಳ ಬಗ್ಗೆ ಪ್ರೀತಿಯೇ ಇಲ್ಲವೆಂಬ ಭಾವನೆ ಮೂಡುತ್ತದೆ. 'ಮಾಸ್ಕೋ ನ್ಯೂಸ್'ನ್ನು ಕೆಲವು ವಾರಗಳವರೆಗೆ ಓದಿದ ವ್ಯಕ್ತಿಯೊಬ್ಬ ಆಜೀವನ ಸೋವಿಯತ್-ವಿರೋಧಿಯಾಗುವುದು ಖಂಡಿತ. ಆದರೆ ಸಂಗಾತಿಗಳೇ, ಈ ಸನ್ನಿವೇಶದ ಬಗ್ಗೆ ನಾವೇನೂ ಮಾಡಲು ಸಾಧ್ಯವಿಲ್ಲ.

ನಿಜವಾದ ಕುತ್ತನ್ನು ಮನಗಂಡಿಲ್ಲ

ಮುಂದಿನ ಚುನಾವಣೆಗಳಲ್ಲಿ ರಾಜೀವ್ ಸರ್ಕಾರವನ್ನು, ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಇಳಿಸುವುದು ನಮ್ಮ ತುರ್ತಿನ ಮಹತ್ವದ ಕರ್ತವ್ಯ. ನಮ್ಮೆಲ್ಲಾ ಶಕ್ತಿಯನ್ನು ಇದರಲ್ಲಿ ಕ್ರೋಢೀಕರಿಸಬೇಕು ಎಂಬುದು ನಿಜ. ಆದರೆ ನಾವು ಇಲ್ಲಿ ಕೇವಲ ತಕ್ಷಣದ ಕರ್ತವ್ಯಗಳನ್ನು ಮತ್ತು ಚುನಾವಣೆಗಳನ್ನು ಮಾತ್ರವೇ ಚರ್ಚಿಸುತ್ತಿಲ್ಲ. ಮೂಲಭೂತ ಜನಸಮೂಹಗಳನ್ನು ಅಣಿನೆರೆಸುವ ನಮ್ಮ ಕೆಲಸ ಮತ್ತು ಕಾರ್ಯತಂತ್ರಗಳ ಯೋಜನೆಯನ್ನು ರಾಜಕೀಯ ನಿರ್ಣಯ ರೂಪಿಸಿದೆ. ಜನತಾ ಪ್ರಜಾಪ್ರಭುತ್ವದತ್ತ ಮುನ್ನಡೆಯಲು ಈ ಜನಸಮೂಹಗಳ ಐಕ್ಯತೆ ಅನಿವಾರ್ಯ. ಜನತೆ ಮುನ್ನಡೆಯಲಾರಂಭಿಸಿದ್ದಾರೆ, ಕಾಂಗ್ರೆಸ್(ಐ) ದುರಾಡಳಿತದ ವಿರುದ್ಧ ವ್ಯಾಪಕವಾಗಿ ಸ್ವಯಂಪ್ರೇರಿತ ಸಿಟ್ಟು, ಅತೃಪ್ತಿ ಸ್ಫೋಟಗೊಳ್ಳುತ್ತಿದೆ ಎಂಬತ್ತ ನಿರ್ಣಯ ಬೊಟ್ಟು ಮಾಡಿದೆ. ಆದರೆ ರಂಗಕ್ಕೆ ಬಂದಿರುವುದು ಜನತೆ ಮಾತ್ರವೇ ಅಲ್ಲ. ಕೋಮುವಾದ ಮತ್ತು ಪಾಳೆಗಾರಿಕೆಯ ಅತ್ಯಂತ ಪ್ರತಿಗಾಮೀ ದೇಶ-ವಿರೋಧಿ ಶಕ್ತಿಗಳು ಕೂಡಾ ರಂಗದಲ್ಲಿವೆ. ಜನರ ದೊಡ್ಡ ವಿಭಾಗವನ್ನೇ ತಮ್ಮ ಹಿಂದೆ ಅಣಿನೆರೆಸಲು ಅವರು ಸಕ್ರಿಯರಾಗಿದ್ದಾರೆ.

ಪ್ರತ್ಯೇಕತಾವಾದೀ ಶಕ್ತಿಗಳದ್ದು ಇನ್ನೊಂದು ಅಪಾಯ. ಪಂಜಾಬ್, ಅಸ್ಸಾಂ, ಡಾರ್ಜಿಲಿಂಗ್‌ನಲ್ಲಿ ಅವನ್ನು ನೋಡಿದ್ದೇವೆ. ಡಾರ್ಜಿಲಿಂಗ್‌ನಲ್ಲಷ್ಟೇ ಅವನ್ನು ತಡೆಯಲು, ಸೂಕ್ತ ಇತ್ಯರ್ಥಕ್ಕೆ ಬರಲು ಸಾಧ್ಯವಾಗಿದೆ.

ಹಿಂದೂ, ಮುಸ್ಲಿಂ ಮತ್ತಿತರ ಕೋಮು ಶಕ್ತಿಗಳು ಜನಸಮೂಹಗಳನ್ನು ಒಡೆಯಲು ಸತತ ಪ್ರಯತ್ನ ನಡೆಸುತ್ತಿವೆ. ಈ ಶಕ್ತಿಗಳಿಗೆ ಸಾಮ್ರಾಜ್ಯಶಾಹೀ ಏಜೆನ್ಸಿಗಳಿಂದ ಇದಕ್ಕೆ ಹಣಕಾಸಿನ, ಇತರ ನೆರವು ಬರುತ್ತಿದೆ ಎಂದು ನಿರ್ಣಯ ಹೇಳುತ್ತದೆ. ನಾವಿನ್ನೂ ಹಳೆಯ ಲೆಕ್ಕ ಚುಕ್ತಾ ಮಾಡಿರದ ಊಳಿಗಮಾನ್ಯ ಪ್ರತಿಗಾಮೀ ಶಕ್ತಿಗಳಿವು. ಈ ಶಕ್ತಿಗಳನ್ನು ಜನರಿಂದ ದೂರ ಮಾಡಿ, ಜನ ಸಮೂಹಗಳ ಮೇಲೆ ಅವರ ಹಿಡಿತವನ್ನು ಮುರಿಯದೆ ರಾಜೀವ್ ಆಳ್ವಿಕೆಯನ್ನು ಬದಲಿಸುವ ಹೋರಾಟ ಯಶಸ್ವಿಯಾಗಲಾರದು.

ಆದರೆ ಕೋಮುವಾದೀ ಆಕ್ರಮಣದ ಸ್ವಭಾವದಲ್ಲಾಗಿರುವ ಈ ಬದಲಾವಣೆಯನ್ನು, ಊಳಿಗಮಾನ್ಯ ಶಕ್ತಿಗಳ ನೇರ ಪ್ರತಿನಿಧಿಯಾಗಿ ಅದರ ಪಾತ್ರವನ್ನು ನಾವು ಸರಿಯಾಗಿ ಗ್ರಹಿಸಿದಂತೆ ಕಾಣುತ್ತಿಲ್ಲ. ಅದಿನ್ನೂ ಕೇವಲ ಒಂದು ಕೋಮುವಾದೀ ಮಾರ್ಗಚ್ಯುತಿ, ಗಮನ ಬೇರೆಡೆ ಸೆಳೆಯುವ ಒಂದು ರೀತಿಯ ಭ್ರಮಣೆ ಎಂದಷ್ಟೇ ಪರಿಗಣಿಸಿದಂತಿದೆ. ಭಾರತೀಯ ರಾಜಕಾರಣದ ಅತ್ಯಂತ ಪ್ರತಿಗಾಮಿ ಶಕ್ತಿಗಳ ಸಯೋಜಿತ ಹಲ್ಲೆ ಎಂದು ಪರಿಗಣಿಸುತ್ತಿಲ್ಲ. ಇದರಿಂದ ಈ ಕುತ್ತಿನ ನಿಜವಾದ ಪ್ರಭಾವವನ್ನು ಗ್ರಹಿಸದೆ ರಾಷ್ಟ್ರೀಯ ಐಕ್ಯತೆಯನ್ನು ಮತ್ತು ಸಾಮೂಹಿಕ ಆಂದೋಲನದ ಐಕ್ಯತೆಯನ್ನು ವಿಪತ್ತಿಗೆ ಒಡ್ಡಿದಂತಾಗುತ್ತದೆ.

ವಿದೇಶಾಂಗ ನೀತಿ

ಸಂಗಾತಿಗಳು ಗುರಿ ತಪ್ಪಿದ ಇನ್ನೊಂದು ಪ್ರಮುಖ ವಿಷಯವೆಂದರೆ ಭಾರತದ ಅಲಿಪ್ತ ವಿದೇಶಾಂಗ ನೀತಿಯ ಪ್ರಶ್ನೆ. ಕೇವಲ ಇಬ್ಬರು-ಮೂವರು ಮಾತ್ರ ಈ ಬಗ್ಗೆ ಮಾತನಾಡಿರುವುದು, ಉಳಿದವರು ತಮ್ಮ ಕೊರತೆಗಳನ್ನು ಒಪ್ಪಿಕೊಳ್ಳಲು ಹಿಂಜರಿದಿರುವುದು ಆಶ್ಚರ್ಯಕರ. ಮಾತನಾಡಿದವರು ಕೂಡಾ ವಿದೇಶಾಂಗ ನೀತಿಯನ್ನು ಕುರಿತು ನಮ್ಮ ನಿರ್ಲಕ್ಷ್ಯದ ಬಗ್ಗೆ ಎಚ್ಚರಿಕೆ ನೀಡದೆ, ತನ್ನ ವರ್ಗಹಿತಾಸಕ್ತಿಗಳಿಂದಾಗಿಯೇ ಈ ಧೋರಣೆ ಅನುಸರಿಸುತ್ತಿರುವ ಸರ್ಕಾರದ ಬಲೆಗೆ ಬೀಳಬಾರದೆಂದು ನಮ್ಮನ್ನು ಎಚ್ಚರಿಸಿದಂತಿದೆ.

ರಾಜೀವ್ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ಧೋರಣೆಗಳಿಂದಾಗಿ ನಮ್ಮ ದೇಶದ ವಿದೇಶಾಂಗ ನೀತಿಯ ಮೇಲೆ ವಿದೇಶೀ ಒತ್ತಡಗಳು, ಹೆಚ್ಚಿ ರಾಜಿ, ಚಂಚಲತೆ ಕಂಡು ಬರುವ ಸಾಧ್ಯತೆಗಳಿವೆ ಎಂದು ಕಲ್ಕತ್ತಾ ಮಹಾಧಿವೇಶನ ಎಚ್ಚರಿಸಿತ್ತು. ಜನ ಸಮೂಹಗಳು ಅಲಿಪ್ತ ನೀತಿಯ ಮಹತ್ವವನ್ನು ಅರಿತಿಲ್ಲ, ಕೆಲವು ಬೂರ್ಜ್ವಾ ಮುಖಂಡರು ನಮ್ಮ ದೇಶ ಪಾಶ್ಚಿಮಾತ್ಯರತ್ತ ವಾಲಬೇಕೆಂದು ಬಯಸುತ್ತಾರೆ, ಅಲಿಪ್ತ ನೀತಿಯ ಮುಂದುವರಿಕೆ ಈಗ ಆಳುವ ಪಕ್ಷ ಮತ್ತು ಸರ್ಕಾರದ ಮೇಲಷ್ಟೇ ಅವಲಂಬಿಸಿದೆ ಎಂದೂ ಕಲ್ಕತ್ತಾ ಮಹಾಧಿವೇಶನ ಹೇಳಿತ್ತು. ಇದೊಂದು ಅಪಾಯಕಾರೀ ರಾಜಿಗಳಿಗೆ ದಾರಿ ಮಾಡಿಕೊಡುವ ಅಪಾಯಕಾರೀ ಸನ್ನಿವೇಶವಾದ್ದರಿಂದ ರಾಜಿಗಳು, ಚಂಚಲತೆಗಳಿಲ್ಲದೆ ಅದು ಮುಂದುವರಿಯುವಂತಾಗಲು ಜನ ಸಮೂಹಗಳಿಗೆ ಈ ಬಗ್ಗೆ ಶಿಕ್ಷಣ ನೀಡಬೇಕೆಂದು ಅದು ಪಕ್ಷದ ಸದಸ್ಯರಿಗೆ ಕರೆ ನೀಡಿತ್ತು. ಈಗ ವಿಶ್ವ ಬ್ಯಾಂಕು ಮತ್ತಿತರ ಮೂಲಗಳಿಂದ ಒತ್ತಡವಿದ್ದಾಗ್ಯೂ ಅಲಿಪ್ತ ನೀತಿ ಮುಂದುವರಿಯುತ್ತಿರುವುದು ನಮ್ಮ ಪ್ರಯತ್ನದಿಂದಾಗಿ ಅಲ್ಲ.

ಮುಂದುವರಿಯುವುದು....

> **ನಮಗೆ ವಿಶ್ರಾಂತಿಯೆಂಬುದಿಲ್ಲ. ಇದನ್ನು ನೀವು ಅರಿತಿದ್ದೀರಿ ಎಂಬ ಭರವಸೆ ನನಗಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಈಗ ರಾಜೀವ್ ಸರ್ಕಾರವನ್ನು ಸೋಲಿಸುವ, ಕೋಮುವಾದಿ ಮತ್ತು ಪ್ರತ್ಯೇಕವಾದಿ ಶಕ್ತಿಗಳನ್ನು ದೂರ ತಳ್ಳುವ ಕಾರ್ಯರಂಗದಲ್ಲಿರುತ್ತೇವೆ ಎಂಬ ವಿಶ್ವಾಸ ನನಗಿದೆ.**

ಕರಡಿಗೆ ತಿದ್ದುಪಡಿಗಳು

ಮಹಾಧಿವೇಶನದ ಮೊದಲು ರಾಜಕೀಯ-ನಿರ್ಣಯದ ಮೇಲೆ 35 00 ತಿದ್ದುಪಡಿಗಳು ಕೇಂದ್ರ ಸಮಿತಿಗೆ ಬಂದಿದ್ದವು. ಪಕ್ಷದ ಸಂಗಾತಿಗಳು ಪಕ್ಷದ ಮಾರ್ಗ ರೂಪಿಸುವಲ್ಲಿ ವಹಿಸಿರುವ ಆಳವಾದ ಆಸಕ್ತಿ ಮತ್ತು ಎಚ್ಚರವನ್ನು ಇದು ತೋರಿಸುತ್ತದೆ ಎಂದು ಬಿ.ಟಿ.ಆರ್.ತಿದ್ದುಪಡಿಗಳ ಬಗ್ಗೆ ವರದಿ ಮಾಡುತ್ತಾ ಹೇಳಿದರು. ಕರಡಿನ ಭಾಷೆ ಹಾಗೂ ಶೈಲಿಯನ್ನು ಉತ್ತಮಗೊಳಿಸುವ ಎಲ್ಲಾ ತಿದ್ದುಪಡಿಗಳನ್ನು ಸ್ವೀಕರಿಸಲಾಗುವುದು; ಸಮಾಜವಾದೀ ವ್ಯವಸ್ಥೆಯ ಉತ್ತಮಿಕೆ ಬಗ್ಗೆ ಶಂಕೆ ವ್ಯಕ್ತಪಡಿಸುವ ತಿದ್ದುಪಡಿಗಳು ಅಸಮರ್ಥನೀಯ; ಬಂಡವಾಳಶಾಹೀ ರಾಷ್ಟ್ರಗಳಲ್ಲಿ ಶಾಂತಿ ಆಂದೋಲನದ ನಿರ್ದಿಷ್ಟ ಪ್ರಸ್ತಾಪ ಬೇಕೆಂಬ ತಿದ್ದುಪಡಿಗಳನ್ನು, ಪಾರಂಪರಿಕ ಹಕ್ಕಾಸ್ತ್ರ ಕುರಿತಾದ ಪ್ರಸ್ತಾಪಗಳನ್ನು ಕರಡಿನಲ್ಲಿ ಸೇರಿಸಲಾಗುವುದು; ನೆರೆಹೊರೆಯ ಸರ್ಕಾರಗಳ ಮೇಲೆ ಸಾಮ್ರಾಜ್ಯಶಾಹಿಯ ಹೆಚ್ಚುತ್ತಿರುವ ಪ್ರಭಾವ, ಗುತ್ತೇದಾರಿ ಮನೆತನಗಳ ಹೆಚ್ಚುತ್ತಿರುವ ಆಸ್ತಿಯ ಬಗ್ಗೆ ಸೇರಿಸಲಾಗುವುದು; ಕರಡು ತಯಾರಿಸಿದ ನಂತರದ ಬೆಳವಣಿಗೆಗಳನ್ನು ಸೇರಿಸಲಾಗುವುದು; ಪ್ರತ್ಯೇಕತಾವಾದಿ ಶಕ್ತಿಗಳ 'ದ್ವಂದ್ವ' ಸ್ವಭಾವದ ಬದಲು 'ಎರಡು ಆಯಾಮಗಳು' ಎಂದು ಸರಿಪಡಿಸಲಾಗುವುದು; ಸಾಂಸ್ಕೃತಿಕ ವಿಚಾರಗಳ ಬಗ್ಗೆ ಒಂದು ಹೊಸ ವಿಭಾಗ ಸೇರಿಸಲಾಗುವುದು; ನಗರ ಪ್ರದೇಶಗಳ ಮೇಲಿನ ಮತ್ತು ಇತರ ಸ್ತರಗಳ ವಹಿಸುವ ಪ್ರಸ್ತಾಪ, ಮಾಡುವ ತಿದ್ದುಪಡಿ ಸೇರಿಸಲಾಗುವುದು.

ರಾಜಕೀಯ ಸಂಘಟನಾ ವರದಿ ಚರ್ಚೆಗೆ ಇ.ಎಂ.ಎಸ್. ಉತ್ತರ

ಮುಂಬರುವ ಚುನಾವಣಾ ಹೋರಾಟ ಕೇವಲ ಕೆಲವು ಸ್ಥಾನಗಳಿಗಾಗಿ ಹೋರಾಟವಲ್ಲ. ಅದೊಂದು ದೊಡ್ಡ ರಾಜಕೀಯ ಹೋರಾಟ ಎಂದು ನಾವು ಕಾಣಬೇಕೆಂದು ಇ.ಎಂ.ಎಸ್. ರಾಜಕೀಯ-ಸಂಘಟನಾ ವರದಿಯ ಮೇಲಿನ ಚರ್ಚೆಗೆ ಉತ್ತರಿಸುತ್ತಾ ಹೇಳಿದರು. ವಿವಿಧ ಜನ ವಿಭಾಗಗಳ ಹೋರಾಟಗಳ ಮೂಲಕ ರಾಜೀವ್‌ಗಾಂಧಿಯನ್ನು ಕೆಳಗಿಳಿಸುವ, ಕೋಮುವಾದಿ, ಪ್ರತಿಗಾಮಿ ಶಕ್ತಿಗಳನ್ನು ದೂರ ಸರಿಸುವ ನಮ್ಮ ಹೋರಾಟಗಳ ಮೇಲಷ್ಟೇ ನಮ್ಮ ಚುನಾವಣಾ ಭವಿಷ್ಯ ನಿಂತಿದೆಯೇ ವಿನಃ ಎಡ ಮತ್ತು ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸದೆ ಚುನಾವಣೆಗೆ ಸಿದ್ಧಗೊಳ್ಳುವುದು ಕೇವಲ ಚುನಾವಣಾ ಸಮಯಸಾಧಕತನವಾಗುತ್ತದೆ ಎಂದು ಇ.ಎಂ.ಎಸ್. ವಿವರಿಸಿದರು.

ಜನತೆಯ ಬೇರೆಲ್ಲಾ ರಾಜಕೀಯ, ಆರ್ಥಿಕ ಸಮಸ್ಯೆಗಳನ್ನು ಹೊರತುಪಡಿಸಿ ರಾಜೀವ್‌ಗಾಂಧಿಯನ್ನು ಇಳಿಸುವ ಹೋರಾಟ ನಡೆಸಬೇಕೆನ್ನುವುದು ನಮ್ಮ ದೃಷ್ಟಿಕೋನವಲ್ಲ. ಅದು ಬೂರ್ಜ್ವಾ ಪಕ್ಷಗಳ ದೃಷ್ಟಿಕೋನ. ಕಳೆದ ಮೂರು ವರ್ಷಗಳಲ್ಲಿ 12ನೇ ಮಹಾಧಿವೇಶನ ರೂಪಿಸಿದ ಮಾರ್ಗ ನಮಗೆ ಲಾಭಕಾರಿಯಾಗಿದೆ. ಬಿ.ಜೆ.ಪಿ.ಯನ್ನು ದೂರ ಸರಿಸಲು, ನಮ್ಮ ಸ್ವಂತಿಕೆಯನ್ನು, ಸಾಮೂಹಿಕ ಕಾರ್ಯಾಚರಣೆಗಳನ್ನು ನಡೆಸುವುದು ಇದರಿಂದ ಸಾಧ್ಯವಾಗಿದೆ. ಬೇರೆ ಯಾವುದೇ ದಾರಿ ನಮ್ಮನ್ನು ಬೂರ್ಜ್ವಾ ವಿರೋಧ ಪಕ್ಷಗಳ ಬಾಲದ ಮಟ್ಟಿಗೆ ಇಳಿಸುತ್ತಿತ್ತು ಎಂದು ಇ.ಎಂ.ಎಸ್. ನುಡಿದರು.

ಕಿಸಾನ್‌ಸಭಾ ಮತ್ತು ಅದರ ಕೆಲಸದ ಬಗ್ಗೆ ಹೇಳುತ್ತಾ ಇ.ಎಂ.ಎಸ್. ಕಿಸಾನ್ ರಂಗದಲ್ಲಿ ನಮ್ಮ ಧೋರಣೆ 1976ರಲ್ಲಿ ಕೇಂದ್ರ ಸಮಿತಿ ಇತ್ಯರ್ಥಗೊಳಿಸಿದೆ. ನಂತರದ ಎಲ್ಲಾ ಕಿಸಾನ್ ಸಮ್ಮೇಳನಗಳು ಹಾಗೂ ಪಕ್ಷದ ಮಹಾಧಿವೇಶನಗಳು ಇದನ್ನೇ ಅಂಗೀಕರಿಸಿದ್ದವು ಎಂದರು. ಇದರ ಪ್ರಕಾರ ಭೂ ಸಮಸ್ಯೆ ಈಗಲೂ ಕೇಂದ್ರ ಸಮಸ್ಯೆ, ಆದರೆ ಸದ್ಯದ ಘಟ್ಟದಲ್ಲಿ ಅದು ಒಂದು ಪ್ರಚಾರದ ಘೋಷಣೆಯಷ್ಟೆ. ವರ್ಗ ಶಕ್ತಿಗಳ ಸಹ ಸಂಬಂಧಗಳಲ್ಲಿ ಅನುಕೂಲ ಬದಲಾವಣೆಯಾದಾಗ ಮಾತ್ರ ಭೂವಿತರಣೆ ಸಾಧ್ಯ. ಮಿನತಾಯ ಜಮೀನಿನ ವಿತರಣೆ, ಅರಣ್ಯ ಭೂಮಿ ಇತ್ಯಾದಿಗಳಿಗಾಗಿ ಈಗ ಹೋರಾಟಗಳನ್ನು ಕೈಗೆತ್ತಿಕೊಳ್ಳಬಹುದು. ತೆಲಂಗಣಾ ಮಾದರಿಯ ಹೋರಾಟ ಕಟ್ಟುವುದು ಕಾರ್ಯ ಸಾಧ್ಯವಲ್ಲ. ರೈತಾಪಿ ವರ್ಗಗಳ ತಕ್ಷಣದ ಬೇಡಿಕೆಗಳ ಮೇಲೆ ಇತರ ವಿವಿಧ ಪ್ರದೇಶಗಳ ಮೇಲೆ ಹೋರಾಟಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಇ.ಎಂ.ಎಸ್. ಹೇಳಿದರು.

ಇ.ಎಂ.ಎಸ್. ವರದಿಯನ್ನು ಮಂಡಿಸುತ್ತಾ ವರದಿಯ ಕೊನೆಯ ಎರಡು ಅಧ್ಯಾಯಗಳ ಮೇಲಷ್ಟೇ ಚರ್ಚೆ ನಡೆಸಬೇಕೆಂದಿದ್ದರು. ಯಾಕೆಂದರೆ ಅಂತರ್ರಾಷ್ಟ್ರೀಯ ಸನ್ನಿವೇಶದ ಬಗ್ಗೆ ಇನ್ನಷ್ಟು ಚರ್ಚೆ ಅಗತ್ಯವೆಂದು ಕೇಂದ್ರ ಸಮಿತಿ ಚರ್ಚೆಯ ನಂತರವೇ ಅಂತಿಮಗೊಳ್ಳಬೇಕೆಂದು ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿತು.

ರಾಜಕೀಯ-ಸಂಘಟನಾ ವರದಿಗೆ ಗಮನಹರಿಸಲು ಪಾಲಿಟ್‌ಬ್ಯೂರೋಗೆ ಸಾಧ್ಯವಾದದ್ದು ಡಿಸೆಂಬರ್ 10ರಂದು ಕೊನೆಯ ರಾಜ್ಯ ಸಮ್ಮೇಳನ ಮುಗಿದ ನಂತರವೇ. ಆದ್ದರಿಂದ ಅದನ್ನು ಅವಸರದಿಂದ ತಯಾರಿಸಬೇಕಾಯಿತು ಎಂದು ಇ.ಎಂ.ಎಸ್. ತಮ್ಮ ಉತ್ತರದ ಕೊನೆಯಲ್ಲಿ ಹೇಳುತ್ತಾ ಪಟ್ಟಿ ಮಾಡುವಲ್ಲಿನ ತಪ್ಪುಗಳನ್ನು ಪ್ರತಿನಿಧಿಗಳು ಸೂಚಿಸಿದಂತೆ ಸರಿಪಡಿಸಲಾಗುವುದು ಹಾಗೂ ಕೇಂದ್ರ ಸಮಿತಿ ಗಂಭೀರವಾಗಿ ಗಮನಿಸುವುದು ಎಂದು ನುಡಿದರು.

ಮಾರ್ಚ್ 2ರಿಂದ 5 ರವರೆಗೆ ಹುಬ್ಬಳ್ಳಿಯಲ್ಲಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮ್ಮೇಳನ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ 5 ನೇ ಸಮ್ಮೇಳನ ಹುಬ್ಬಳ್ಳಿಯಲ್ಲಿ ಮಾರ್ಚ್ 2ರಿಂದ 5 ರವರೆವಿಗೆ ನಡೆಸಲಾಗುವುದು. ಸಿ.ಐ.ಟಿ.ಯು. ಅಖಿಲ ಭಾರತ ಅಧ್ಯಕ್ಷರಾದ ಕಾ॥ ಬಿ.ಟಿ. ರಣದಿವೆ ಹಾಗೂ ಉಪಾಧ್ಯಕ್ಷರು ಹಾಗೂ ಪ. ಬಂಗಾಳ ಎಡರಂಗ ಸರ್ಕಾರದ ಜನಪ್ರಿಯ ಮುಖ್ಯಮಂತ್ರಿ ಕಾ॥ ಜ್ಯೋತಿಬಸುರವರನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಗಿದೆ.

1960 ಆಧಾರಿತ ಗ್ರಾಹಕರ ಬೆಲೆ ಸೂಚ್ಯಂಕವನ್ನು ಪ್ರಕಟಿಸುವ ಬದಲಿಗೆ ಮಾಲಿಕೆಯನ್ನು ಅಪ್ರಜಾಸತ್ತಾತ್ಮಕವಾಗಿ ಪ್ರಕಟಿಸುತ್ತಿರುವ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿಯ ಮನವಿಯನ್ನು ಧಿಕ್ಕರಿಸುವ ಕೇಂದ್ರ ಸರ್ಕಾರದ ನಿರಂಕುಶ ಮನೋಭಾವವನ್ನು ಪ್ರತಿಭಟಿಸಲು ಕರೆ ನೀಡಲಾಗಿದೆ. ಕೇಂದ್ರ ಕಾರ್ಮಿಕ ಸಚಿವರಿಗೆ ಪ್ರತಿಭಟನಾ ತಂತಿ ಸಂದೇಶಗಳನ್ನು ಕಳುಹಿಸಲು ಕಾರ್ಮಿಕ ಸಂಘಗಳಿಗೆ ಫೆಬ್ರವರಿ 4ರಂದು ಬೆಂಗಳೂರಿನಲ್ಲಿ ನಡೆದ ಸಿ.ಐ.ಟಿ.ಯು. ರಾಜ್ಯ ಸಮಿತಿ ಸಭೆ ಕರೆ ನೀಡಿದೆ.

ಕೇಂದ್ರ ಸರ್ಕಾರ ಕೇರಳ ರಾಜ್ಯಕ್ಕೆ ಸರಬರಾಜು ಮಾಡುವ ಆಹಾರ ಧಾನ್ಯಗಳನ್ನು ಕಡಿಮೆ ಮಾಡಿ ಹಣಕಾಸು ಒದಗಿಸುವುದರಲ್ಲಿ ತಾರತಮ್ಯ ಮಾಡುವುದನ್ನು ಹಾಗೂ ಬೆಲೆ ಸೂಚ್ಯಂಕದ 1982ರ ಮಾಲಿಕೆ ಪ್ರಕಟಿಸುವ ಮೊದಲು ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಮಾತುಕತೆ ನಡೆಸಲು ಒತ್ತಾಯಿಸಿ ಫೆಬ್ರವರಿ 18ರಂದು ಪ್ರತಿಭಟನಾ ದಿನವನ್ನು ಆಚರಿಸಬೇಕೆಂದು ಕರೆ ಕೊಟ್ಟಿದೆ.

ಕೇಂದ್ರ ಸರ್ಕಾರ ಅಕ್ಕಿ, ಸಕ್ಕರೆ ಮೊದಲಾದ ವಸ್ತುಗಳ ಬೆಲೆಯನ್ನು ಏರಿಸಿರುವುದನ್ನು ಸಭೆ ಖಂಡಿಸಿ ಬೆಲೆ ಏರಿಕೆ ವಿರುದ್ಧ ಚಳುವಳಿಗೆ ಕರೆ ಕೊಟ್ಟಿದೆ.

ರಾಜ್ಯ ಸರ್ಕಾರ ಏರಿಸಿರುವ ಹಾಲಿನ ಬೆಲೆ ಇಳಿಸಬೇಕೆಂದು ಆಗ್ರಹಪಡಿಸಿದೆ. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಮುಂತಾದೆಡೆ ಹರಿಜನರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ತಪ್ಪಿತಸ್ಥರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ಒತ್ತಾಯಿಸಿದೆ.

ಆಟೋ ಚಾಲಕರ 14ನೇ ವಾರ್ಷಿಕೋತ್ಸವ

ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ (ಸಿ.ಐ.ಟಿ.ಯು.)ನ 14ನೇ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆಯು ಸಂಘದ ಅಧ್ಯಕ್ಷ ಕಾ॥ ಜಿ. ಸುಬ್ಬ ರಾವ್‌ರವರ ಅಧ್ಯಕ್ಷತೆಯಲ್ಲಿ ಜನವರಿ 29ರಂದು ಬೆಂಗಳೂರಿನಲ್ಲಿ ಜರುಗಿತು. ಸಿ.ಐ.ಟಿ.ಯು. ಮುಖಂಡರಾದ ಕಾ॥ ಪಿ.ಕೆ.ಸುಬ್ರಮಣಿಯವರು ಉದ್ಘಾಟಿಸಿದರು. ರಾಜ್ಯ ಸಮಿತಿ ಸದಸ್ಯರಾದ ಕಾ॥ ಟಿ.ಎಸ್.ಅನಂತರಾಮ್, ಕೋದಂಡರಾಂ, ಸಮುದಾಯ ಸಾಂಸ್ಕೃತಿಕ ತಂಡದ ಕಾ॥ ಎಂ.ಜಿ.ವೆಂಕಟೇಶ್ ರವರು ವಾರ್ಷಿಕೋತ್ಸವಕ್ಕೆ ಶುಭ ಕೋರಿ ಮಾತನಾಡಿದರು.

ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಕಾ॥ ಎ.ವಿ. ರಮೇಶ್‌ರವರು ಸ್ವಾಗತಿಸಿ ಕಳೆದ 3ವರ್ಷಗಳ ಚಟುವಟಿಕೆಗಳ ವರದಿ ಮಂಡಿಸಿದರು. ಖಜಾಂಚಿ ಕಾ॥ ಎಸ್.ಟಿ. ಅರಸುರವರು ಲೆಕ್ಕಪತ್ರ ಮಂಡಿಸಿದರು. ಚರ್ಚೆಯ ನಂತರ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಆಟೋ ಚಾಲಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ಆಟೋ ಪ್ರಯಾಣ ದರ ಕಿ.ಮೀ.ಗೆ 1ರೂ. 30ಪೈಸೆ ಕನಿಷ್ಠ ದರ ರೂ. ಎರಡೂವರೆ ಮತ್ತು ಮೂರು ಪ್ರಯಾಣಿಕರಿಗೆ 5 0%ರಷ್ಟು ಹೆಚ್ಚು ದರ ನಿಗದಿಪಡಿಸಬೇಕೆಂದು ಸಾರಿಗೆ ಸಚಿವರು ಹಾಗೂ ಸಂಘದೊಡನೆ ಆದ ಒಪ್ಪಂದಕ್ಕೆ ಸರ್ಕಾರಿ ಆಜ್ಞೆ ಹೊರಡಿಸದೆ ಜಾರಿಯಾಗದೆ ಹಾಗೆ ಉಳಿದಿದೆ. ಈ ಜಾರಿಯಲ್ಲಿ ವಿಳಂಬ ನೀತಿಯನ್ನು ಖಂಡಿಸಲಾಯಿತು. ನಿರ್ಲಕ್ಷ್ಯ ಮುಂದುವರೆದರೆ ಚಳುವಳಿ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

ಚಾಲಕರು ಪಾಳಿ ಮುಗಿಸಿ ಷೆಡ್ಡಿಗೆ ಆಟೋಗಳನ್ನು ಬಿಡುವ ಮತ್ತು ಮಧ್ಯಾಹ್ನದ ಊಟದ ಸಮಯದಲ್ಲಿ ಪ್ರಯಾಣಿಕರನ್ನು ನಿರಾಕರಣೆ ಅನಿವಾರ್ಯ ಅದ್ದರಿಂದ ಮಧ್ಯಾಹ್ನ 1ರಿಂದ 3 ಹಾಗೂ ರಾತ್ರಿ 8ಗಂಟೆ ನಂತರ ಬಾಡಿಗೆ ನಿರಾಕರಣೆ ಮೊಕದ್ದಮೆಯನ್ನು ಹಾಕಬಾರದೆಂದು ಈ ಹಿಂದೆ ಸರ್ಕಾರಕ್ಕೆ ಸಂಘ ಸಲ್ಲಿಸಿರುವ ಸೂತ್ರವನ್ನು ಜಾರಿಗೆ ತರಬೇಕೆಂದು ಒತ್ತಾಯಿಸಲಾಯಿತ್ತು.

ಚಾಲಕರು ಕೆಲ ಪ್ರಮುಖ ಸ್ಥಳಗಳಲ್ಲಿ ಪ್ರಯಾಣಿಕರನ್ನು ಇಳಿಸುವಾಗ ಪೋಲೀಸರು ಚಾಲಕರ ಮೇಲೆ ಮೊಕದ್ದಮೆ ಹಾಕುವ ರಸ್ತೆ ಸಂಚಾರದಲ್ಲಿ ದಿನನಿತ್ಯ ಚಾಲಕ ಹಾಗೂ ಪೋಲೀಸರ ನಡುವೆ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಪೋಲೀಸ್ ಅಧಿಕಾರಿಗಳು ಸಾರ್ವಜನಿಕ ಪ್ರತಿನಿಧಿಗಳು ಚಾಲಕ ಸಂಘದ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿ ರಚಿಸುವುದಾಗಿ ಒಪ್ಪಿಕೊಂಡಿದ್ದ ಪೋಲೀಸ್ ಅಧಿಕಾರಿಗಳು ಸಮಿತಿ ರಚಿಸಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದೆ.

ಅಪಘಾತದಲ್ಲಿ ಸಾವು ನೋವಾದ ಆಟೋ ಚಾಲಕರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕೆಂದು ಹಾಗೂ 20 ವರ್ಷ ಸೇವೆ ಸಲ್ಲಿಸಿದ ಚಾಲಕರಿಗೆ ಪೆನ್ಷನ್ ನೀಡಬೇಕೆಂದು ಆರ್.ಟಿ.ಓ. ಕಚೇರಿಯಲ್ಲಿ ಪರ್ಮಿಟ್ ನವೀಕರಣ, ವರ್ಗಾವಣೆ ಟ್ಯಾಕ್ಸ್, ಎಫ್.ಸಿ. ನಿಗಧಿ ಪಡಿಸುವ ಶುಲ್ಕಗಳನ್ನು ಕಡಿಮೆ ಮಾಡಬೇಕೆಂದು ಆರ್.ಟಿ.ಓ. ಇಲಾಖೆ ವಿಧಿಸುವ ದಂಡ ಪ್ರಮಾಣ ಕಡಿಮೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ನೂತನ ಸಾಲಿಗೆ ಕಾ॥ ಎ.ವಿ.ರಮೇಶ್ (ಅಧ್ಯಕ್ಷ) ಜಿ.ಸುಬ್ಬರಾವ್ (ಪ್ರಧಾನ ಕಾರ್ಯದರ್ಶಿ) ಎ.ಕೆ.ಕುಪ್ಪುಸ್ವಾಮಿ (ಉಪಾಧ್ಯಕ್ಷರು) ಬಿ.ಎಸ್.ನಾರಾಯಣಮೂರ್ತಿ (ಸಹಕಾರ್ಯದರ್ಶಿ) ಎಂ.ಆರ್.ವಿಜಯ ಪ್ರಕಾಶ್ (ಸಂಘಟನಾಕಾರ್ಯದರ್ಶಿ) ಹೆಚ್. ಆರ್.ರವಿ (ಖಜಾಂಚಿ)ಯವರನ್ನೊಳಗೊಂಡ 21ಜನ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು. ಸಿ.ಐ.ಟಿ.ಯು. ಜಿಲ್ಲಾ ಸಮ್ಮೇಳನಕ್ಕೆ 8ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಎಸ್.ಎಫ್.ಐ. ಬೆಂಗಳೂರು ಜಿಲ್ಲಾ ಸಮ್ಮೇಳನ
ಅಂತರಂಗದಲ್ಲಿ ಅಜ್ಞಾನ- ಸಂಪ್ರದಾಯಿಕತೆ ತುಂಬುವ ಶಿಕ್ಷಣ

ಅಕ್ಷರ ಕಲಿತ ನಂತರವೂ ಅಂತರಂಗದಲ್ಲಿ ಅಜ್ಞಾನವನ್ನು ತುಂಬುವ ಅನಾರೋಗ್ಯ- ಅವೈಜ್ಞಾನಿಕ ಮನೋಭಾವವನ್ನು ಸೃಷ್ಟಿಸುವ ಮಟ್ಟಕ್ಕೆ ಇಂದಿನ ಶಿಕ್ಷಣ ತಲುಪಿದೆ ಎಂದು ಖ್ಯಾತ ಲೇಖಕ ಬಂಡಾಯ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪನವರು ಖೇದ ವ್ಯಕ್ತಪಡಿಸಿದ್ದಾರೆ. ಅವರು ಜನವರಿ 25 ರಂದು ಬೆಂಗಳೂರಿನಲ್ಲಿ ಜರುಗಿದ ಎಸ್.ಎಫ್.ಐ. 4ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಾಂಪ್ರದಾಯಿಕತೆಯಲ್ಲೇ ಅಕ್ಷರ ಸಂಸ್ಕೃತಿ ಸಾಗುತ್ತಿರುವುದು ಒಂದು ದೊಡ್ಡ ದುರಂತವೆಂದ ಅವರು ಕಾಗೆ ಕಂಠ ಕರ್ಕಶ ಕೋಗಿಲೆ ಕಂಠ ಮಧುರವೆಂಬ ಪೂರ್ವಕಲ್ಪಿತ ಭಾವನೆ ರೂಪುಗೊಂಡಿದೆ. ದ. ಆಫ್ರಿಕಾದಲ್ಲಿ ವಿಮೋಚನಾ ಹೋರಾಟಗಳಲ್ಲಿರುವ ಕಪ್ಪು ಜನರನ್ನು ಕುರೂಪಿಗಳೆಂದು ನಿಕೃಷ್ಟವಾಗಿ ಕಾಣುವ ಬಿಳಿಯರ ಆಡಳಿತ ಶೋಷಕರಿಂಯ ನ್ಯಾಯದಂತೆ ಎಂದು ಹೇಳಿದರು.

ಭಾಷೆ ಮತ್ತು ಭಾಷಾ ಚಳುವಳಿ ಪ್ರಸ್ತಾಪಿಸಿದ ಬರಗೂರು ಭಾಷಾಂಧತೆ, ಫ್ಯಾಸಿಸ್ಟ್‌ತನದಿಂದ ಅನಾರೋಗ್ಯಕರ ವಾತಾವರಣ ಬೆಳೆದು ಭಾಷಾ ಚಳುವಳಿ ಅಡ್ಡ ದಾರಿ ಹಿಡಿದಿರುವುದನ್ನು ಗಂಭೀರವಾಗಿ ಪರಿಗಣಿಸಿ ಜನಪರ ಭಾಷೆ-ಸಂಸ್ಕೃತಿಗಳತ್ತ ಆಳವಾದ ಚಿಂತನೆ ಹಾಗೂ ಸಕಾಲಿಕ ಮಧ್ಯಪ್ರವೇಶದ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಯ ರೂಪುಗೊಡಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಎ.ಪಿ.ಎಸ್. ಕಾಲೇಜಿನ ಪ್ರಿನ್ಸಿಪಾಲರಾದ ಮಾನ್ಯಶ್ರೀ ಶ್ಯಾಮ್‌ಭಟ್‌ರವರು ಇಂದಿನ ಶಿಕ್ಷಣದಲ್ಲಿ ಪ್ರತಿಷ್ಠಿತ ಧೋರಣೆ ಎದ್ದು ಕಾಣುತ್ತಿದ್ದು ನೂತನ ಶಿಕ್ಷಣ ನೀತಿ ಐಶಾರಾಮಿತನವನ್ನು ಬೆಳೆಸಿ ಜನಸಾಮಾನ್ಯರಿಗೆ ಅಕ್ಷರ ಜ್ಞಾನದಿಂದ ವಂಚಿಸುತ್ತಿದೆ ಎಂದರು. ಪಠ್ಯಪುಸ್ತಕ ರೂಪಿಸುವ, ಕೆಲಸದಲ್ಲಿ ಹಾಗೂ ಪರೀಕ್ಷಾ ಕ್ರಮಗಳಲ್ಲಿ ಜೀವಂತ ಸಂಬಂಧವಿಲ್ಲದೆ ಶಿಕ್ಷಣ ಅವೈಜ್ಞಾನಿಕತೆಯಿಂದ ಕೂಡಿದೆ ಎಂದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್‌ರವರು ಸುಗ್ರೀವಾಜ್ಞೆಗಳ ಮೂಲಕ ಆಳುವವರು ಪರಿಹಾರ ನೀಡಲು ಹೊರಟಿರುವುದನ್ನು ಖಂಡಿಸಿದರು.

ಪ್ರತಿನಿಧಿ ಅಧಿವೇಶನದಲ್ಲಿ ವರದಿ ಮಂಡಿಸಿ ಶಿಕ್ಷಣ ರಂಗ ಎದುರಿಸುತ್ತಿರುವ ಸಮಸ್ಯೆ ಸಂಘಟನೆ ಕುರಿತು ಜಿಲ್ಲಾ ಸಂಚಾಲಕ ಕಾ॥ ಆರ್. ಮೋಹನ್ ಮಾತನಾಡಿದರು. ಕಾ॥ ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

ಪಿ.ಯು.ಸಿ. ಮಂಡಳಿ ರದ್ದತಿ ವಾಪಸಾಗಬೇಕು. ಪರೀಕ್ಷಾ ಸುಗ್ರೀವಾಜ್ಞೆ ಹಿಂತೆಗೆದುಕೊಳ್ಳಬೇಕು. 1989ನೇ ಸಾಲಿನ ವಾರ್ಷಿಕ ಪರೀಕ್ಷೆಗಳನ್ನು ಮುಂದೂಡಬೇಕು. ವ್ಯಾಸಂಗಕ್ಕೆ ತೊಂದರೆಯಾಗಿರುವುದರಿಂದ ವಿದ್ಯುತ್ ಕಡಿತ ತಪ್ಪಿಸಬೇಕು. ಧಾರವಾಡ ವಿ.ವಿ.ಯ ಅಧ್ಯಾಪಕ ಶೇಷಾದ್ರಿ ಮತ್ತು ಮೈಸೂರು ವಿ.ವಿ.ಯ ಪತ್ರಿಕಾಶಾಸ್ತ್ರದ ಅಧ್ಯಾಪಕರ ಮೇಲೆ ನಡೆದ ಹಲ್ಲೆಗಳನ್ನು ಖಂಡಿಸುವ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ನೂತನ ಜಿಲ್ಲಾ ಸಮಿತಿಗೆ ಕಾ॥ ಪಿ.ರಾಜೇಂದ್ರ (ಅಧ್ಯಕ್ಷ) ಸುರೇಶ್‌ಮೂರ್ತಿ ಪ್ರಭಾವತಿ (ಉಪಾಧ್ಯಕ್ಷರು) ಅನಂತು (ಕಾರ್ಯದರ್ಶಿ) ಹರಿ. ರವಿಶಂಕರ್ (ಸಹಕಾರ್ಯದರ್ಶಿಗಳು).

ಧಾರವಾಡ; ಕಾ॥ ಹಷ್ಮಿಗೆ ಗಣ್ಯರ ಶ್ರದ್ಧಾಂಜಲಿ

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲೊಂದು ಭಾರಿ ಸಭೆ ಗಣ್ಯ ಕಲಾವಿದರು, ಸಾಹಿತಿಗಳು, ಶಿಕ್ಷಣ ತಜ್ಞರು, ಪತ್ರಿಕಾಕರ್ತರು, ನೌಕರರು, ಕಾರ್ಮಿಕ ವಿದ್ಯಾರ್ಥಿ ಯುವಜನ ಪ್ರತಿನಿಧಿಗಳು ಮೇಳವಿಸಿದ್ದರು. ಜನನಾಟ್ಯಮಂಚ್‌ನ ಖ್ಯಾತ ಕಲಾವಿದ ಮಾನವತಾವಾದಿ ಸಪ್ದರ್ ಹಷ್ಮಿಯವರಿಗೆ ಶ್ರದ್ಧಾಂಜಲಿ ಅರ್ಪಿಸಲು ಸಮುದಾಯ ಆಶ್ರಯದಲ್ಲಿ ಕರೆದ ಸಭೆಯಲ್ಲಿ.

ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡದ ಭೌತಶಾಸ್ತ್ರ ವಿಭಾಗದ ಎಸ್.ಆರ್. ತೋಂಟದಾರ್ಯ ಈ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸಪ್ದರ್ ಹಷ್ಮಿಯ ಜೀವನ, ಕಲಾಸೇವೆ, ಅಮಾನುಷ ಕೊಲೆ ಇಂದಿನ ರಾಜಕೀಯ ದುರುದ್ದೇಶ, ಅಭಿವ್ಯಕ್ತಿ ಸ್ವಾತಂತ್ರದ ಹರಣ ಮುಂತಾದ ಕುರಿತು ವಿವರಿಸಿದರು. ಸಮುದಾಯದ ಅಧ್ಯಕ್ಷ ಸಿ.ಆರ್.ಭಟ್‌ರವರು ಶ್ರದ್ಧಾಂಜಲಿ ಹಾಗೂ ಪ್ರತಿಭಟನಾ ನಿರ್ಣಯ ಮಂಡಿಸಿ ಮಾತನಾಡಿ ಅಭಿವ್ಯಕ್ತಿ ಸ್ವಾತಂತ್ರ ರಕ್ಷಣೆಗೆ ಸಾಮೂಹಿಕ ಸಂಘಟನೆಗಳು ಹೋರಾಡಲು ಕರೆ ಕೊಟ್ಟರು. ಕ.ವಿ.ವಿ.ಯ ಡಾ॥ ಮರಿಗೆಪ್ಪ, ಶಿವಾನಂದ ಶೆಟ್ಟರ್, ಇಂಡಿಯನ್ ಪೀಪಲ್ಸ್ ಥಿಯೇಟರ್‌ನ (ಐ.ಪಿ.ಟಿ.ಎ.) ಸಿದ್ದನಗೌಡ ಪಾಟೀಲ, ಎ.ಐ.ಟಿ.ಯು.ಸಿ.ಯ ಮಂಗಳೂರು ಮಠ ಜೀವವಿಮಾ ನೌಕರ ಸಂಘದ ಎಂ.ಕೆ.ದೇಶಪಾಂಡೆ, ನಿವೃತ್ತ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆರ್.ವೈ.ಕಲಾದ ವಕೀಲರ ಸಂಘದ ಜಿ.ಎ.ಹಿರೇಮಠ ಮುಂತಾದ ಗಣ್ಯರು ಈ ಸಮಾರಂಭದಲ್ಲಿ ಮಾತನಾಡಿ ಸಪ್ದರ್ ಹಷ್ಮಿಯವರ ಕೊಲೆಯನ್ನು ಉಗ್ರವಾಗಿ ಖಂಡಿಸಿದರು.

ಸಾಂಸ್ಕೃತಿಕ ಲೋಕದಲ್ಲಿ ಭಾರೀ ಭರವಸೆ ಮೂಡಿಸಿದ್ದ ಜನಪರ ರಂಗಭೂಮಿಯನ್ನು ಪುನರ್ಜೀವನಗೊಳಿಸಿದ ಹರಿಕಾರ ಹದಿಹರೆಯದ ಸಪ್ದರ್ ಹಷ್ಮಿಯವರನ್ನು ಕೊಲೆ ಮಾಡಿದ ಕೊಲೆಪಾತಕರ ಅಮಾನುಷ ಕೃತ್ಯವನ್ನು ಕಲಾವಿದರು, ಶಿಕ್ಷಣ ತಜ್ಞರು, ಪತ್ರಕರ್ತರು, ಸಮಾಜದ ವಿವಿಧ ಸ್ತರಗಳ ಜನರು ಪಾಲ್ಗೊಂಡಿರುವ ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ ಎಂದು ನಿರ್ಣಯವನ್ನು ಸ್ವೀಕರಿಸಿ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಲಾಯಿತು. ಕೊಲೆಪಾತಕರಿಗೆ ಉಗ್ರ ಶಿಕ್ಷೆ ವಿಧಿಸುವಂತೆಯೂ ಹಾಗೂ ಇಂತಹ ಘಟನೆಗಳು ಮುಂದೆಂದೂ ನಡೆಯದಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸಲಾಗಿದೆ. ಸಾಂಸ್ಕೃತಿಕ ಸಂಘಟನೆಗಳ ಅಭಿವ್ಯಕ್ತಿಸ್ವಾತಂತ್ರ ಹರಣ ಮಾಡುವ ಕರಾಳ ಶಾಸನವನ್ನು ರದ್ದುಗೊಳಿಸಲು ಈ ಸಂದರ್ಭದಲ್ಲಿ ಒತ್ತಾಯಿಸುತ್ತದೆ. ಕರ್ನಾಟಕದ ವಿ.ವಿ.ಯ ಪ್ರಾಧ್ಯಾಪಕ ಪ್ರೊ॥ ಶೇಷಾದ್ರಿಯವರ ಕೊಲೆಯನ್ನು ಖಂಡಿಸಿ ಹಾಗೂ ಇತ್ತೀಚೆಗೆ ನಿಧನರಾದ ಶ್ರೀ ಕೃಷ್ಣಆಲನಹಳ್ಳಿಯವರ ಮರಣಕ್ಕೂ ಸಭೆ ತನ್ನ ಶ್ರದ್ಧಾಂಜಲಿ ಅರ್ಪಿಸಿತ್ತು.

ಎತ್ತಂಗಡಿ ವಿರುದ್ಧ ರಸ್ತೆ ತಡೆ ಚಳುವಳಿ

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿಯ ಮಂಗಳೂರು-ಹೈದ್ರಾಬಾದ್ ಹೆದ್ದಾರಿಯಲ್ಲಿ ಸಣ್ಣಪುಟ್ಟ ಅಂಗಡಿ ಹಾಕಿ ಜೀವನ ಮಾಡುತ್ತಿದ್ದ ಬಡವರ ಅಂಗಡಿಗಳನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರು ದಿಢೀರನೇ ಆಕ್ರಮಣ ನಡೆಸಿ ಅಂಗಡಿ ಸಾಮಗ್ರಿಗಳನ್ನು ಊರ ಹೊರಗೆ ಹಾಕಿದ್ದಾರೆ. ಈ ಅನ್ಯಾಯವನ್ನು ಪ್ರತಿಭಟಿಸಿ ಡಿ.ವೈ.ಎಫ್.ಐ. ರೈತ ಸಂಘದ ಕಾರ್ಯಕರ್ತರು ತಹಸೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಬೇರೆ ಕಡೆ ಅಂಗಡಿ ಹಾಕಲು ಪರ್ಯಾಯ ವ್ಯವಸ್ಥೆ ಮಾಡದೆ ಬಡವರನ್ನು ಬೀದಿಪಾಲು ಮಾಡುವ ಕ್ರಮ ಹಾಗೂ ಪೋಲೀಸ್ ರಕ್ಷಣೆಯನ್ನು ಸಹ ನೀಡದ ಪೋಲೀಸ್ ನೀತಿಯನ್ನು ಖಂಡಿಸಲಾಯಿತು. ತಮ್ಮ ಮನವಿಗೆ ನಿರ್ಲಕ್ಷ್ಯ ತೋರಿದರಿಂದ 150ಕ್ಕೂ ಹೆಚ್ಚು ಜನರು ಹೆದ್ದಾರಿಯಲ್ಲಿ ರಸ್ತೆ ತಡೆ ಚಳುವಳಿ ನಡೆಸಿದರು. ಜನವರಿ 21ರಂದು ಮಾತುಕತೆಗೆ ಕರೆದ ತಹಶೀಲ್ದಾರ್‌ರವರು ಉದ್ದೇಶಪೂರ್ವಕವಾಗಿ ಸಭೆಗೆ ಗೈರುಹಾಜರಾದದ್ದನ್ನು ಖಂಡಿಸಲಾಗಿದೆ. ರಸ್ತೆ ತಡೆ ನಂತರ ನಡೆದ ಸಭೆಯನ್ನುದ್ದೇಶಿಸಿ ಡಿ.ವೈ.ಎಫ್,ಐ. ನಾಯಕ ರಂಗನಾಥ ಹವಾಲ್ದಾರ್ ರೈತ ನಾಯಕ ವೀರಸಂಗಯ್ಯ ಯು. ಬಸವರಾಜ್ ಹಾಗೂ ಡಿ.ಅಂದಾನಪ್ಪ ಮಾತನಾಡಿದರು.

ಕೃಷಿ ಕೂಲಿಕಾರರ ಸಭೆ

ಉಡುಪಿಯ ಕೊಡವೂರು ಗ್ರಾಮದ ಮೂಡಬೆಟ್ಟುನಲ್ಲಿ ಕೃಷಿ ಕೂಲಿಗಾರರ ಸಭೆ ಜನವರಿ 25 ರಂದು ದೋಗು ಸುವರ್ಣರ ಅಧ್ಯಕ್ಷತೆಯಲ್ಲಿ ಜರುಗಿತು. ಕೃಷಿ ಕೂಲಿಗಾರರಿಗೆ ಕನಿಷ್ಠ ಕೂಲಿ, ವರ್ಷವಿಡೀ ಕೆಲಸದ ಭದ್ರತೆ, ವೃದ್ಧಾಪ್ಯ ವೇತನವನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಚಳುವಳಿ ಸಂಘಟಿಸಲು ನಿರ್ಧರಿಸಲಾಯಿತು.

ರೈತನಾಯಕ ಕಾ॥ ಡೇವಿಡ್ ಎ. ಕರ್ಡೋಜರವರು ಮಾತನಾಡಿ ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಯಾದರೆ ಮಾತ್ರ ದೇಶ ಮುಂದುವರೆಯಲು ಸಾಧ್ಯವೆಂದು ಹೇಳಿದ ಅವರು ಚಳುವಳಿಯಿಂದ ಮಾತ್ರ ಸೌಲತ್ತುಗಳನ್ನು ಪಡೆಯಲು ಸಾಧ್ಯವೆಂದು ಹೇಳಿದರು. ಮೂಡುಬೆಟ್ಟು ಪ್ರದೇಶದ ನೂತನ ಸಮಿತಿಗೆ ಶ್ರೀಮತಿ ರಾಜೀವಿ (ಸಂಚಾಲಕಿ) ಯವರನ್ನು ಒಳಗೊಂಡ 9ಜನರ ಸಮಿತಿ ರಚಿಸಲಾಯಿತು. ಜಿಲ್ಲಾ ಕೃಷಿಕೂಲಿಗಾರರ ಸಮ್ಮೇಳನಕ್ಕೆ 26 ಜನರ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತ್ತು. ಸಭೆಯ ಅಧ್ಯಕ್ಷತೆಯನ್ನು ಸಾಧು ಅಮೀನರವರು ವಹಿಸಿದ್ದರು.

ಬೆ.ದ.ತಾಲ್ಲೂಕು ರೈತ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ದಕ್ಷಿಣ ತಾಲ್ಲೂಕು ರೈತ ಸಮ್ಮೇಳನ ಕೆಂಗೇರಿ ಬಳಿ ಇರುವ ಬಸವ ಗಂಗೋತ್ರಿಯಲ್ಲಿ ಜರುಗಿತು. ತಾಲ್ಲೂಕಿನ ಸುಮಾರು ಐವತ್ತು ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾಕಾರ್ಯದರ್ಶಿ ಕಾ. ಪಿ. ಜಗನ್ನಾಥ್, ಸಹಕಾರ್ಯದರ್ಶಿ ಕಾ॥ ಲಕ್ಕಣ್ಣ, ಸಿ.ಐ.ಟಿ.ಯು. ನಾಯಕ ಕಾ॥ ಆರ್. ಶ್ರೀನಿವಾಸ್‌ರವರು ಸಮ್ಮೇಳನದಲ್ಲಿ ಭಾಗ ವಹಿಸಿದ್ದರು. ದರಖಾಸ್ತು, ಭೂಸುಧಾರಣೆ, ರೈತರು ಬೆಳೆದ ಬೆಳೆಗೆ ನ್ಯಾಯಬೆಲೆ ಕುರಿತು ಮಾತನಾಡಿದ ಭಾಷಣಕಾರರು ಪ್ರಗತಿ ಪರ ಭೂಸುಧಾರಣೆ ಜಾರಿಗಾಗಿ ರೈತರು ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ನೂತನ ತಾಲ್ಲೂಕು ಸಮಿತಿಗೆ ಕಾ॥ ಲಕ್ಕಣ್ಣ (ಅಧ್ಯಕ್ಷ), ವೆಂಕಟಾಚಲಯ್ಯ (ಕಾರ್ಯದರ್ಶಿ)ರವರ ನ್ನೊಳಗೊಂಡ 9ಜನರ ಕಾರ್ಯಕಾರಿ ಸಮಿತಿ ಹಾಗೂ 21ಜನರ ಸಮಿತಿಯನ್ನು ರಚಿಸಲಾಯಿತು.

ಬದುಕಿನ ಸ್ವಯಂ ನಿರ್ಧಾರದ ಹಕ್ಕಿಗಾಗಿ

ಪ್ಯಾಲೆಸ್ತೈನ್. ಈ ಹೆಸರು ನಿಮಗೆ ಭೂಪಟಗಳಲ್ಲಿ ಕಾಣಲಿಕ್ಕಿಲ್ಲ. ಆದರೆ ನೂರಾರು ವರ್ಷಗಳಿಂದ ಈ ಹೆಸರಿನ ನಾಡೊಂದು ಇದೆ. ಏಷ್ಯಾ ಖಂಡದ ಪೂರ್ವದ ಅಂಚಿನಲ್ಲಿರುವ ಪ್ಯಾಲೆಸ್ತೈನಿನ ಅರಬ್ ಜನತೆಯ ಅದೃಷ್ಟವನ್ನು ಬೇರೆಯವರೇ ಇದುವರೆಗೆ ತಮಗೆ ಬೇಕಾದಂತೆ ನಿರ್ಧರಿಸಿಕೊಂಡು ಬಂದಿದ್ದಾರೆ. ತಮ್ಮ ಬದುಕನ್ನು ತಾವೇ ನಿರ್ಧರಿಸುವ ಹಕ್ಕು ಅವರಿಗೆ ಎಂದೋ ದಕ್ಕಬೇಕಿತ್ತು. ಏಕೆ ದಕ್ಕಲಿಲ್ಲ? ಇದು ಪ್ಯಾಲೆಸ್ತೈನ್ ಪ್ರಶ್ನೆ.

ಸೌದಿ ಅರೇಬಿಯಾ, ಯೆಮೆನ್, ಇರಾನ್, ಇರಾಕ್, ತುರ್ಕಿ, ಜೋರ್ಡಾನ್, ಸಿರಿಯಾ, ಲೆಬನಾನ್, ಇಸ್ರೇಲ್, ಇತ್ತ ಈಜಿಪ್ಟ್- ಇದು ಮಧ್ಯಪ್ರಾಚ್ಯ ಪ್ರದೇಶ. ವಿಶ್ವದ ಶಾಂತಿಗೆ ಬೆದರಿಕೆಯೊಡ್ಡಿರುವ ಘರ್ಷಣೆಗಳ ಇನ್ನೊಂದು ಪ್ರದೇಶ. ಪ್ಯಾಲೆಸ್ತೈನ್ ಪ್ರಶ್ನೆ ಈ ಸಮಸ್ಯೆಯ ಒಂದು ವಿಭಿನ್ನ ಅಂಗ. ಇದರ ಪೂರ್ವಾಪರಗಳೇನು?

ಪ್ಯಾಲೆಸ್ತೈನ್ ಪ್ರಶ್ನೆ ಈ ಶತಮಾನದ ಆರಂಭದಿಂದಲೂ ಪ್ರಾಕೃತಿಕ ಸಂಪನ್ಮೂಲ ಭರಿತ ಮಧ್ಯಪ್ರಾಚ್ಯದಲ್ಲಿ ತಮ್ಮ ಪ್ರಾಬಲ್ಯ ಕಾದುಕೊಳ್ಳುವ ಸಾಮ್ರಾಜ್ಯಶಾಹೀ ನೀತಿಗಳೊಂದಿಗೆ ಹಾಸು ಹೊಕ್ಕಾಗಿರುವ ಪ್ರಶ್ನೆ. ಪ್ಯಾಲೆಸ್ತೈನ್ ಆಗ ಬಹುಪಾಲು ಅರಬ್ಬರು ಅಲ್ಪಸಂಖ್ಯೆಯ ಯೆಹೂದಿಯರು ಇದ್ದ ದೇಶ. ಒಟ್ಟೊಮಾನ್ ಸಾಮ್ರಾಜ್ಯದ ಅಂಗವಾಗಿತ್ತು. ಇಲ್ಲಿನ ಯೆಹೂದಿಯರಲ್ಲಿ ಬಹುಪಾಲು ಸ್ಪೆಯಿನ್ ಮತ್ತಿತರ ಮಧ್ಯ ಯುರೋಪಿನ ದೇಶಗಳಿಂದ 15 ನೇ ಶತಮಾನದಲ್ಲಿ ಅಲ್ಲಿ ಕ್ರಿಶ್ಚಿಯನ್ ಉಗ್ರಗಾಮಿಗಳಿಂದ ತಪ್ಪಿಸಿಕೊಳ್ಳಲು ಓಡಿ ಬಂದಿದ್ದವರು.

ಸಾಮ್ರಾಜ್ಯಶಾಹೀ ಬೆಳವಣಿಗೆಯ ಮೊದಲ ಹಂತದಲ್ಲಿ ವಸಾಹತು ಶಾಹಿಗಳು ವಿಶ್ವವನ್ನು ತಮ್ಮತಮ್ಮಲ್ಲಿ ಹಂಚಿಕೊಳ್ಳುವ ಕಿತ್ತಾಟ ನಡೆಸಿದ್ದಾಗ ಈ ದೇಶವೂ ಅವರ ಹದ್ದಿನ ಕಣ್ಣಿಗೆ ಬಿದ್ದಿತ್ತು-ಮುಖ್ಯವಾಗಿ ಸಾಮ್ರಾಜ್ಯಶಾಹಿಗಳ ಮೊದಲ ಮಹಾ ಯುದ್ಧದಲ್ಲಿ ವಿಜಯಿಗಳಾಗುತ್ತಿದ್ದ ಬ್ರಿಟನ್ ಮತ್ತು ಫ್ರಾನ್ಸ್‌ನ ಕಣ್ಣಿಗೆ. ಅವರಲ್ಲಿಯೇ ತೀವ್ರ ಚರ್ಚೆಯ ನಂತರ ಗುಪ್ತ ಒಪ್ಪಂದವೊಂದು ನಡೆಯಿತು. ಇದರ ಪ್ರಕಾರ ಪ್ಯಾಲೆಸ್ತೈನ್ ಸಾಮ್ರಾಜ್ಯಶಾಹೀ ದೇಶಗಳ ಅಂತರ್ರಾಷ್ಟ್ರೀಯ ಹಕೋಟಿಗೆ ಬಂದಿತು. ಬ್ರಿಟಿಷ್ ಸೇನೆಗಳು ಅಲ್ಲೆ ಉಳಿದವು.

ಬ್ರಿಟಿಷ್ ವಸಾಹತುಗಳ ನೆರವಿನಿಂದ ಝಿಯೋನಿಸ್ಟರು ಮಧ್ಯ ಯುರೋಪ್, ಪೂರ್ವ ಯುರೋಪ್‌ನಲ್ಲಿದ್ದ ಯೆಹೂದಿಯರನ್ನು ತಂದು ಪ್ಯಾಲೆಸ್ತೈನಿನಲ್ಲಿ ನೆಲೆಸಲಾರಂಭಿಸಿದರು. ಇದಕ್ಕೆ ಪ್ರತಿಯಾಗಿ ಹೀಗೆ ನೆಲೆಗೊಂಡ ಯೆಹೂದೀ ವಲಸೆಗಾರರ ಬೆಂಬಲದಿಂದ ಬ್ರಿಟಿಷ್ ವಸಾಹತುಗಳು ತಮ್ಮ ಫ್ರೆಂಚ್ ಪ್ರತಿಸ್ಪರ್ಧಿಗಳ ಬಾಯಿ ಮುಚ್ಚಿಸಲು ಸಾಧ್ಯವಾಯಿತು. 1919ರಲ್ಲಿ ಫ್ರಾನ್ಸ್ ಪ್ಯಾಲೆಸ್ತೈನ್ ಮೇಲೆ ಬ್ರಿಟಿಶ್ ಆಡಳಿತವನ್ನು ಒಪ್ಪಿಕೊಂಡಿತು.

ಲೀಗ್ ಆಫ್‌ನೇಶನ್ಸ್ ಈಗಿನ ವಿಶ್ವ ಸಂಸ್ಥೆಯ ಮೊದಲಿದ್ದ ಅಂತರ್ರಾಷ್ಟ್ರೀಯ ಸಂಸ್ಥೆ. ಆದರೆ ಆಗಿನ್ನೂ ವಸಾಹತುಶಾಹಿ ಪ್ರಬಲವಾಗಿದ್ದ, ಸಮಾಜವಾದೀ ಬಣ ಇನ್ನೂ ಉದಯಿಸಿರದ ಕಾಲ. ಆದ್ದರಿಂದ ಲೀಗ್ ಆಫ್ ನೇಶನ್ಸ್ ಸುಮಾರಾಗಿ ಸಾಮ್ರಾಜ್ಯಶಾಹೀ ದೇಶಗಳ ವೇದಿಕೆಯಂತೆಯೇ ಇತ್ತು. ಪೂರ್ಣ ಸ್ವಾತಂತ್ರ್ಯ ಕೊಡಲು ಇಚ್ಛೆಯಿಲ್ಲದ ವಸಾಹತುಗಳ ಆಡಳಿತ ಹಕ್ಕನ್ನು ಅಂದರೆ ನಿಯೋಗವನ್ನು (mandate) ಸಂಬಂಧಪಟ್ಟ ವಸಾಹತುಶಾಹೀ ಶಕ್ತಿಗೆ ಲೀಗ್ ಆಫ್ ನೇಶನ್ಸ್ ನೀಡುವ ಕ್ರಮದ ಪ್ರಕಾರ ಪ್ಯಾಲೆಸ್ತೈನ್‌ನ ನಿಯೋಗಾಧಿಕಾರ ಬ್ರಿಟನ್‌ಗೆ ಸಿಕ್ಕಿತು. ಹೆಸರಿಗೆ ಇದೊಂದು ತಾತ್ಕಾಲಿಕ ವ್ಯವಸ್ಥೆಯಾಗಿತ್ತು- ಪ್ಯಾಲೆಸ್ತೈನ್ ಸ್ವತಂತ್ರವಾಗುವವರೆಗಿನ ವ್ಯವಸೆ. ಆದರೆ ಬ್ರಿಟನ್ ಇನ್ನೂ ಕಾಲು ಶತಮಾನ ಹೆಚ್ಚು ಸಮಯದವರೆಗೆ ಇದನ್ನು ಮುಂದೂಡುವಲ್ಲಿ ಯಶಸ್ವಿಯಾಯಿತು.

"ಜನರಿಲ್ಲದ ನಾಡನ್ನು ನಾಡಿಲ್ಲದ ಜನರಿಗೆ ನೀಡುವ" ವಚನವನ್ನು ಬ್ರಿಟಿಶ್ ವಸಾಹತುಶಾಹಿ ಝಿಯೋನಿಸ್ಟ್ ಭಯೋತ್ಪಾದಕರಿಗೆ ನೀಡಿತ್ತು 1917ರ ಬಾಲ್‌ಫೋರ್ ಘೋಷಣೆಯ ಮೂಲಕ. ಆದರೆ ಇದು ಶುದ್ಧ ಕುತಂತ್ರವಾಗಿತ್ತು. ಯಾಕೆಂದರೆ ಪ್ಯಾಲೆಸ್ತೈನ್ ಜನರಿಲ್ಲದ ನಾಡಾಗಿರಲಿಲ್ಲ. ನೂರಾರು ವರ್ಷಗಳಿಂದ ಅರಬ್ ಮೂಲದ ಜನ ಬದುಕಿಕೊಂಡು ಬಂದಿದ್ದ ನಾಡಾಗಿತ್ತು.

ಪಾಶ್ಚಿಮಾತ್ಯ ದೇಶಗಳಲ್ಲಿನ ಯೆಹೂದೀ ಬಂಡವಳಿಗರ ಬಂಡವಾಳದ ಬಲದಿಂದ, 'ಯೆಹೂದೀನಾಡು', 'ಯೆಹೂದೀ ಶ್ರಮ' ಇತ್ಯಾದಿ ಸಂಕುಚಿತ ಘೋಷಣೆಗಳ ಮರೆಯಲ್ಲಿ ಅರಬ್ ರೈತರ ಜಮೀನನ್ನು ಕಿತ್ತುಕೊಳ್ಳುವುದು, ಯೆಹೂದಿಗಳ ಉದ್ದಿಮೆಗಳಲ್ಲಿ ಅರಬರಿಗೆ ಕೆಲಸ ಸಿಗದಂತೆ ಮಾಡುವುದು, ಜತೆಗೆ ಅರಬ್ಬೀ ಪ್ಯಾಲೆಸ್ತೈನಿಯನ್ನರ ಮೇಲೆ ಝಿಯೋನಿಸ್ಟರ ಭಯೋತ್ಪಾದಕತೆ. ಈ ಎಲ್ಲಾ ಕುಕೃತ್ಯಗಳಿಗೆ ಬ್ರಿಟಿಶ್ ವಸಾಹತು ಶಾಹಿಗಳ ಬೆಂಬಲ. 1917ರಿಂದ 1947ರ ನಡುವೆ ಪ್ಯಾಲೆಸ್ತೈನ್‌ನಲ್ಲಿ ಯೆಹೂದೀ ವಲಸೆಗಾರರ ಸಂಖ್ಯೆ 5 7 ಸಾವಿರದಿಂದ 6 ಲಕ್ಷಕ್ಕೆ ಏರಿತು!

ಈ ಅತಿಕ್ರಮಣಗಳನ್ನು ಪ್ಯಾಲೆಸ್ತೈನಿಯನ್ನರು ಬಲವಾಗಿ ವಿರೋಧಿಸಿದರು. ಬ್ರಿಟನ್ನಿನ ನಿಯೋಗಾಧಿಕಾರ ತಕ್ಷಣ ರದ್ದಾಗಬೇಕೆಂದು ಒತ್ತಾಯಿಸಿದರು. 1920ರಿಂದ 1939ರ ನಡುವೆ ಬ್ರಿಟಿಷರ ಝಿಯೋನಿಸ್ಟರ ವಿರುದ್ಧ ಐದು ದೇಶ ವ್ಯಾಪೀ ಬಂಡಾಯಗಳು ನಡೆದವು. ಯೆಹೂದೀ ವಲಸೆ ತಕ್ಷಣ ನಿಲ್ಲಬೇಕೆಂದು ಹೋರಾಟ ನಡೆಯಿತು. 1936ರಲ್ಲಿ ಆರು ತಿಂಗಳ ಸಾರ್ವತ್ರಿಕ ಮುಷ್ಕರ, ನಂತರ ಸತತ ಮೂರು ವರ್ಷಗಳವರೆಗೆ ನಡೆದ ದಂಗೆಗಳು ಬ್ರಿಟಿಶರನ್ನು ನಡುಗಿಸಿದವು. ಬ್ರಿಟಿಷರು ತಮ್ಮ ಪ್ರಭಾವ ಉಳಿಸಿಕೊಳ್ಳಲು ಬದಲೀ ವ್ಯವಸ್ಥೆಯ ಬಗ್ಗೆ ಯೋಚಿಸಲಾರಂಭಿಸಿದರು. ದ್ವಂದ್ವ ನೀತಿಯನ್ನು ಅನುಸರಿಸಲಾರಂಭಿಸಿದರು. ಝಿಯೋನಿಸ್ಟರ 'ಯೆಹೂದಿ ನಾಡಿನ' ನೀತಿಯನ್ನು ತಾವು ವಿರೋಧಿಸುತ್ತಿದ್ದೇವೆಂಬ, ಪ್ಯಾಲೆಸ್ತೈನ್ನಿಯನ್ನರ ಒತ್ತಾಯ ಈಡೇರಿಸುತ್ತೇವೆಂಬ ಭ್ರಮೆ ಹುಟ್ಟಿಸಲು ಪ್ರಯತ್ನಿಸಿದರು. ಇನ್ನೊಂದೆಡೆ ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ಝಿಯೊನಿಸ್ಟ್ ಶಕ್ತಿಗಳನ್ನು ಪೋಷಿಸುವ ಕ್ರಮ ಮುಂದುವರಿಸಿದರು. (ಇಲ್ಲಿ ಝಿಯೊನಿಸ್ಟರು ಮತ್ತು ಪ್ಯಾಲೆಸ್ತೈನಿನ ಯೆಹೂದಿಯರ ನಡುವಿನ ವ್ಯತ್ಯಾಸ ಮರೆಯಬಾರದು. ವಾಸ್ತವವಾಗಿ ಈಗಲೂ ಇಸ್ರೇಲಿನ ಝಿಯೋನಿಸ್ಟರ ಆಳ್ವಿಕೆಯಲ್ಲಿ ಸ್ಥಳೀಯ ಯೆಹೂದಿಯರು ದ್ವಿತೀಯ ದರ್ಜೆಯ ನಾಗರೀಕರಂತಿದ್ದಾರೆ.)

> ಮೂವತ್ತು ವರ್ಷ ಬ್ರಿಟಿಷ್ ಮಿಲಿಟರಿ ಶಕ್ತಿ, ಪ್ಯಾಲೆಸ್ತೈನ್ ಅರಬರ ಮೇಲೆ ಯೆಹೂದಿ ವಲಸೆಯನ್ನು ಹೇರಿತು. ಈ ವಲಸೆಗಾರರ ಸಂಖ್ಯೆ ಸಾಕಷ್ಟಾದಾಗ ಅವರೇ ಟ್ಯಾಂಕುಗಳ, ಯುದ್ಧ ವಿಮಾನಗಳ ನೆರವಿನಿಂದ ಪ್ಯಾಲೆಸ್ತೈನ್ ಮೇಲೆ ತಮ್ಮನ್ನು ಹೇರಿದರು.
>
> -ಅರ್ನಾಲ್ಡ್ ಟಾಯ್ನ್‌ಬಿ
> ಪ್ರಖ್ಯಾತ ಬ್ರಿಟಿಶ್ ಇತಿಹಾಸಕಾರ.

ಎರಡನೇ ಮಹಾಯುದ್ಧ ಮುಗಿಯುತ್ತಿದ್ದಂತೆ ಪ್ಯಾಲೆಸ್ತೈನಿನಲ್ಲಿ "ಯೆಹೂದೀ ತಾಯ್ನಾಡಿ"ನ ಸ್ಥಾಪನೆಗೆ ಅಂತರ್ರಾಷ್ಟ್ರೀಯ ಝಿಯೊನಿಸ್ಟ್ ಶಕ್ತಿಗಳು ತೀವ್ರ ಒತ್ತಡ ತರಲಾರಂಭಿಸಿದರು. ಈ ನಡುವೆ ಸಾಮ್ರಾಜ್ಯಶಾಹೀ ಜಗತ್ತಿನಲ್ಲಿ ಬ್ರಿಟಿಷರು ಹಿನ್ನೆಲೆಗೆ ಸರಿದು ಅಮೆರಿಕನ್ನರು ರಾರಾಜಿಸಲಾರಂಭಿಸಿದಂತೆ ಮಧ್ಯಪ್ರಾಚ್ಯದಲ್ಲಿಯೂ ಝಿಯೊನಿಸ್ಟರು ಮತ್ತು ಅಮೆರಿಕನ್ ಆಳುವ ವಲಯಗಳ ಕೂಟ ಮೂಡಿ ಬಂತು. ಅರಬರನ್ನು ಅವರ ತಾಯ್ನಾಡಿನಿಂದ ಓಡಿಸಿ ತಮ್ಮ ಉದ್ದೇಶ ಸಾಧಿಸಲು ಝಿಯೊನಿಸ್ಟರು ನಡೆಸಿದ ಪೈಶಾಚಿಕ ಕೃತ್ಯಗಳಿಂದಾಗಿ ಬೀಕ್ಷಣ ಪರಿಸ್ಥಿತಿ ಸೃಷ್ಟಿಯಾಯಿತು. ಬ್ರಿಟನ್ ಇದನ್ನು ನಿರ್ವಹಿಸುವುದು ತನಗೆ ಸಾಧ್ಯವಿಲ್ಲವೆಂದು ಪ್ಯಾಲೆಸ್ತೈನ್ ಪ್ರಶ್ನೆಯನ್ನು ಅದಾಗಲೇ ಸ್ಥಾಪನೆಗೊಂಡಿದ್ದ ವಿಶ್ವಸಂಸ್ಥೆಗೆ ವರ್ಗಾಯಿಸಿತು. ಭವಿಷ್ಯದ ಪ್ಯಾಲೆಸ್ತೈನ್ ಮೇಲೆ ತನ್ನ ಹಕೋಟಿಯನ್ನು ಕಾದುಕೊಳ್ಳುವುದೂ ಕೂಡಾ ಬ್ರಿಟನ್ನಿನ ಈ ಕ್ರಮದ ಹಿಂದಿದ್ದ ಒಂದು ಉದ್ದೇಶ.

ಮೇ 15 1947ರಲ್ಲಿ ಈ ವಿಷಯಕ್ಕಾಗಿ ಕರೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮೊದಲ ವಿಶೇಷ ಸಭೆ ನಡೆದು ಒಂದು ವಿಶೇಷ ಸಮಿತಿಯನ್ನು ರಚಿಸುವ ನಿರ್ಣಯ ಕೈಗೊಂಡಿತು. ಈ ಸಮಿತಿ ಎರಡು ಪರ್ಯಾಯ ಪರಿಹಾರಗಳನ್ನು ಮಂಡಿಸಿತು. ಎರಡು ಸ್ವತಂತ್ರ ರಾಷ್ಟ್ರೀಯ ಪ್ರಭುತ್ವಗಳು (ಒಂದು ಅರಬ್ ಮತ್ತು ಇನ್ನೊಂದು ಯೆಹೂದೀ) ಅಥವಾ ಒಂದು ಏಕೀಕೃತ ಒಕ್ಕೂಟ ಪ್ರಭುತ್ವ- ಸೋವಿಯತ್ ಒಕ್ಕೂಟ ಮತ್ತು ಇತರ ಪ್ರಗತಿಪರ ಶಕ್ತಿಗಳು ಏಕೈಕ ಅರಬ್-ಯೆಹೂದಿ ಪ್ರಭುತ್ವದ ಬಗ್ಗೆ ಒಲವು ತೋರಿದ್ದರು. ಆದರೆ ಝಿಯೊನಿಸ್ಟರ ದುಷ್ಕೃತ್ಯಗಳಿಂದ ಪ್ಯಾಲೆಸ್ತೈನ್ ಅರಬ್ ಮತ್ತು ಯೆಹೂದಿ ಕೋಮುಗಳ ನಡುವಿನ ಸಶಸ್ತ್ರ ಘರ್ಷಣೆಗಳ ರಣರಂಗವಾಗಿತ್ತು. ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ 29 ನವೆಂಬರ್ 1947ರಂದು ನಿರ್ಣಯ ಸಂಖ್ಯೆ 181(2)ನ್ನು ಅಂಗೀಕರಿಸಿತು.

"ಪ್ಯಾಲೆಸ್ತೈನ್‌ನ ದುರಂತ ಕೇವಲ ಸ್ಥಳೀಯ ದುರಂತವಲ್ಲ. ಇದು ವಿಶ್ವದ ದುರಂತ ಯಾಕೆಂದರೆ ಇದು ವಿಶ್ವಶಾಂತಿಗೆ ಕಂಟಕಪ್ರಾಯವಾಗಿರುವ

ಝಿಯೊನಿಸಂ; ಜನಾಂಗ ದ್ವೇಷಿ ಸಿದ್ಧಾಂತ

ಇದು 1948ರಲ್ಲಿ ಘೋಷಿಸಲ್ಪಟ್ಟ ಇಸ್ರೇಲೀ ಪ್ರಭುತ್ವದ ಅಧಿಕೃತ ಸಿದ್ಧಾಂತ. ಕ್ರಿಸ್ತಪೂರ್ವ 7ರಲ್ಲಿ ಮೂಡಿಬಂದ ಯೆಹೂದಿ ಧರ್ಮ (ಜುಡಾಯಿಸಂ)ನ ಒಂದು ಮೂಢನಂಬಿಕೆಯ ಸಂಪೂರ್ಣ ದುರ್ಲಾಭ ಪಡೆಯಲು ಹೆಣಗುತ್ತಿರುವ ಆಂದೋಲನವೇ ಝಿಯೋನಿಸಂ. ವಿಶ್ವದ ಹಲವೆಡೆ ಇದ್ದ ಯೆಹೂದ್ಯ ಬೂರ್ಜ್ವಾಗಳು 19ನೇ ಶತಮಾನದಲ್ಲಿ ಇದನ್ನು ಹುಟ್ಟುಹಾಕಿದರು. ಬೈಬಲ್‌ನ ಹಳೇ ಒಡಂಬಡಿಕೆಯಲ್ಲಿ ಈಗಿರುವ ಪ್ಯಾಲೆಸ್ತೈನ್ ಪ್ರದೇಶ ಯೆಹೂದ್ಯರ ತಾಯ್ನಾಡು ಎಂದು ಹೇಳಿದೆ. ಆದ್ದರಿಂದ ಉಳಿದ ಜನಾಂಗಗಳವರಿಗೆ ಇಲ್ಲಿ ಇರುವ ಹಕ್ಕಿಲ್ಲ. ಅಲ್ಲಿ ನೂರಾರು ವರ್ಷಗಳಿಂದ ವಾಸಿಸುತ್ತಿರುವ ಅರಬ್ಬರನ್ನು ಓಡಿಸಬೇಕು. ಯೆಹೂದ್ಯ ಪ್ರಭುತ್ವ ಸ್ಥಾಪನೆಯಾಗಬೇಕು. ವಿಶ್ವದಲ್ಲಿ ಯೆಹೂದ್ಯರು ಎಲ್ಲೇ ಇದ್ದರೂ ಅವರು ಈ ಪ್ರಜಾಪ್ರಭುತ್ವದ ನಾಗರೀಕರು. ಯೆಹೂದ್ಯ ಜನಾಂಗ ವಿಶ್ವದ ಸರ್ವಶ್ರೇಷ್ಠ ಜನಾಂಗ. ಇದು ಝಿಯೋನಿಸಂ. ವಾಸ್ತವವಾಗಿ ಯೆಹೂದೀ ರಾಷ್ಟ್ರೀಯ ಬೂರ್ಜ್ವಾ ವರ್ಗದ ಸ್ವಾರ್ಥ ರಕ್ಷಣೆಯ ಅಸ್ತ್ರ ಇದು.

ದಕ್ಷಿಣ ಆಫ್ರಿಕಾದ ಬಿಳಿಯರು ಅಲ್ಲಿಯ ಸ್ಥಳೀಯರ ವಿರುದ್ಧ ಹೊಂದಿರುವ ವರ್ಣದ್ವೇಷ ನೀತಿಯಂತೆ ಈ ಝಿಯೋನಿಸಂ ಕೂಡಾ ಈಗಿನ ಪ್ರಜಾಪ್ರಭುತ್ವವಾದಿ ಹಾಗೂ ಸಮಾಜವಾದಿ ವಾತಾವರಣದಲ್ಲಿ ವಿಶ್ವಾದ್ಯಂತ ಖಂಡನೆಗೆ ಒಳಗಾಗಿದ್ದರೂ ಸಾಮ್ರಾಜ್ಯಶಾಹಿಗಳ ಬೆಂಬಲದಿಂದಷ್ಟೇ ಉಳಿದುಕೊಂಡಿದೆ. ಏಕೆಂದರೆ ಸಾಯುವ ಹಾದಿಯಲ್ಲಿರುವ ಪ್ರತಿಗಾಮಿ ಸಾಮ್ರಾಜ್ಯಶಾಹಿತ್ವಕ್ಕೆ ಇಂತಹ ಅತ್ಯಂತ ಪ್ರತಿಗಾಮೀ ಸಿದ್ಧಾಂತಗಳು ತೃತೀಯ ಜಗತ್ತಿನ ದೇಶಗಳ ಜನರ ಮೇಲೆ ಇನ್ನಷ್ಟು ಸ್ವಲ್ಪ ಕಾಲ ಸವಾರಿ ಮಾಡಲು ಅವಕಾಶ ಒದಗಿಸುತ್ತವೆ. ಝಿಯೋನಿಸಂ ಕಮ್ಯೂನಿಸ್ಟ್-ವಿರೋಧಿ. ಹಾಗೂ ಸೋವಿಯತ್-ವಿರೋಧಿ ಏಕೆ ಎಂಬುದೂ ಇದರಿಂದಲೇ ಅರ್ಥವಾಗುತ್ತದೆ.

ಆರಂಭದಿಂದಲೇ ಝಿಯೋನಿಸಂಗೂ ಸಾಮ್ರಾಜ್ಯಶಾಹೀ ಗುತ್ತೇದಾರಿಗಳಿಗೂ ನಿಕಟ ಸಂಬಂಧವಿದೆ. ಈ ಶತಮಾನದ ಆರಂಭದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ರಾರಾಜಿಸುತ್ತಿದ್ದಾಗ ಅದರೊಂದಿಗೆ ನಿಕಟ ಸಂಬಂಧ ಹೊಂದಿದ್ದ ಈ ಆಂದೋಲನ ಬ್ರಿಟಿಷ್ ಗುತ್ತೇದಾರಿಗಳಿಗೆ ತಮ್ಮ ಫ್ರೆಂಚ್ ಮತ್ತಿತರ ಪ್ರತಿಸ್ಪರ್ಧಿಗಳ ವಿರುದ್ಧ ಬಹಳ ಉಪಯೋಗಕ್ಕೆ ಬಂದರೆ ಝಿಯೋನಿಸ್ಟರಿಗೆ ಮಧ್ಯಪ್ರಾಚ್ಯಕ್ಕೆ ಬ್ರಿಟಿಶ್ ಆಡಳಿತದ ಮರೆಯಲ್ಲಿ ಯೆಹೂದ್ಯರ ಸತತ ವಲಸೆ ಸಂಘಟಿಸುವಲ್ಲಿ ನಂತರ ಪ್ಯಾಲೆಸ್ತೈನಿನ ಅರಬ್ಬರ ಹಕ್ಕುಗಳನ್ನು ಕಸಿದುಕೊಳ್ಳುವಲ್ಲಿ ನೆರವಾಯಿತು.

> **ಝಿಯೋನಿಸ್ಟ ಎಂದರೆ ಯಾರು?**
>
> ಒಬ್ಬ ಯೆಹೂದಿಯನ್ನು ಇಸ್ರೇಲಿಗೆ ಕಳುಹಿಸಲು ಇನ್ನೊಬ್ಬ ಯೆಹೂದಿಗೆ ದುಡ್ಡು ಕೊಡುವ ಮತ್ತೊಬ್ಬ ಯೆಹೂದಿಯೇ ಅಮೆರಿಕನ್ ಝಿಯೋನಿಸ್ಟ್. ಇದು ಈಗ ಅಮೆರಿಕಾದಲ್ಲಿ ಪ್ರಚಲಿತವಾಗಿರುವ ಒಂದು ನಿರ್ವಚನೆ.

ಎರಡನೇ ಮಹಾಯುದ್ಧದ ವೇಳೆಗೆ ವಿಶ್ವ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಬ್ರಿಟಿಷ್ ಗುತ್ತೇದಾರಿಗಳು ಹಿನ್ನೆಲೆಗೆ ಸರಿದು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಪ್ರಬಲರಾಗಲಾರಂಭಿಸಿದಾಗ ವಿಶ್ವ ಝಿಯೋನಿಸ್ಟ್ ಆಂದೋಲನದ ಚಟುವಟಿಕೆಗಳ ಕೇಂದ್ರ ಅಮೆರಿಕಾಕೆ ವರ್ಗಾಯಿಸಲ್ಪಟ್ಟಿತು. ಅಮೆರಿಕನ್ ಗುತ್ತೇದಾರಿಗಳಿಗೂ ಮಧ್ಯಪ್ರಾಚ್ಯದಲ್ಲಿ ತಮ್ಮ ಸಾಮ್ರಾಜ್ಯಶಾಹೀ ಪ್ರತಿಸ್ಪರ್ಧಿಗಳ ಮೇಲೆ ಪ್ರಾಬಲ್ಯ ಹೊಂದಲು ಇದರ ಅವಶ್ಯಕತೆಯಿತ್ತು. ಪರಸ್ಪರರ ಪ್ರತಿಗಾಮೀ ಉದ್ದೇಶಗಳಿಗೆ ಪೂರಕವಾಗಿದ್ದ ಪ್ರತಿಗಾಮೀ ಶಕ್ತಿಗಳು ಸಹಕರಿಸುವುದು ಸಹಜ ತಾನೇ? ಇಸ್ರೇಲನ್ನು ಸಾಮ್ರಾಜ್ಯಶಾಹಿಯ ಎಂದೂ ಮುಳುಗಿಸಲಾಗದ ವಿಮಾನವಾಹಕ ಯುದ್ಧ ಹಡಗು ಎನ್ನಲಾಗುತ್ತಿದೆ. ಅಮೆರಿಕಾ ಕಳೆದ ಹತ್ತು ವರ್ಷಗಳಲ್ಲಿ 4.5 ಕೋಟಿ ಕೋಟಿ ರೂ. (45 ರ ಮುಂದೆ 13 ಸೊನ್ನೆಗಳು)ಗಳಷ್ಟು ಮಿಲಿಟರಿ ಆರ್ಥಿಕ ನೆರವು ನೀಡಿದೆ. ಶಸ್ತ್ರಾಸ್ತ್ರ ತಂತ್ರಜ್ಞಾನವನ್ನು ಅಮೆರಿಕಾ ಪುಕ್ಕಟೆಯಾಗಿ ಇಸ್ರೇಲಿಗೆ ನೀಡಿದೆ ಎಂದು ಒಬ್ಬ ಇಸ್ರೇಲಿ ಲೇಖಕ ಆರೋಂ ಕ್ಲೀಮನ್ ಹೇಳಿದ್ದಾರೆ.

ಝಿಯೋನಿಸ್ಟರಿಗೆ ಈ ರೀತಿ ಅಮೆರಿಕನ್ ಆಳುವ ವಲಯಗಳ ಮೇಲೆ ಪ್ರಭಾವ ಹೊಂದಿರಲು ಹೇಗೆ ಸಾಧ್ಯ? ವಿಶ್ವದ ಅತೀ ಪ್ರಬಲ ಪ್ರಜಾಪ್ರಭುತ್ವವೆನಿಸಿಕೊಂಡ ಅಮೆರಿಕಾದ ಅಧ್ಯಕ್ಷರುಗಳು, ಸೆನೆಟರುಗಳು ನಿಜವಾಗಿ ಜನರಿಂದಲೇ ಚುನಾಯಿತರಾಗುವ ವ್ಯವಸ್ಥೆಯಿದ್ದರೆ ಹೀಗಾಗುತ್ತಿರಲಿಲ್ಲ ಎಂದು ಮಧ್ಯಪ್ರಾಚ್ಯ ಕುರಿತಾದ ಅಮೆರಿಕನ್ ತಜ್ಞ ಆಲ್ಫ್ರೆಡ್ ಅಲಿಂತಾಲ್ ಹೇಳುತ್ತಾರೆ. ಅಲ್ಲಿನ ಚುನಾವಣಾ ಪದ್ಧತಿಯಿಂದಾಗಿ ಪ್ರತಿಯೊಬ್ಬ ಸೆನೇಟರ್ ಅಥವಾ ಕಾಂಗ್ರೆಸ್‌ನ ಸದಸ್ಯ ಯಾವುದಾದರೂ ಒಂದು ಗುಂಪಿನ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಾನೆ. ವಾಸ್ತವವಾಗಿ ಆತ ಗೆದ್ದು ಬರಲು ಈ ಗುಂಪೇ ಹಣಕಾಸಿನ ನೆರವು ನೀಡಿರುತ್ತಾರೆ. ಅರ್ಥಾತ್ ಆತನನ್ನು ಕೊಂಡುಕೊಳ್ಳುತ್ತಾರೆ. "ರಾಜಕೀಯ ಕ್ರಿಯಾ ಸಮಿತಿ"ಗಳು ಎಂದು ಕರೆಯುವ ಈ ಗುಂಪುಗಳು ಚುನಾವಣಾ ನಿಧಿಗೆ 'ನೆರವು' ನೀಡುವುದು ಈಗ ಅಲ್ಲಿ ಕಾನೂನು ಬದ್ಧ. ಅಮೆರಿಕಾದ 60ಲಕ್ಷ ಯೆಹೂದ್ಯ ಮತದಾರರ ಮೇಲೆ "ಧಾರ್ಮಿಕ" ಹಿಡಿತ ಹೊಂದಿರುವ ಇಂತಹ ಯೆಹೂದ್ಯ "ರಾಜಕೀಯ ಕ್ರಿಯಾ ಸಮಿತಿ"ಗಳು ಕಳೆದ ವರ್ಷ ಅಮೆರಿಕನ್ ಕಾಂಗ್ರೆಸ್ ಚುನಾವಣೆಗಳಲ್ಲಿ ಇಸ್ರೇಲ್-ಪರ ನಿಲುವು ತಳೆಯುವ ಅಭ್ಯರ್ಥಿಗಳಿಗೆ ಒಟ್ಟು ಮೂರು ಕೋಟಿ ಡಾಲರುಗಳನ್ನು ಖರ್ಚು ಮಾಡಿದೆಯೆಂದು ಅಮೆರಿಕಾದ ಪ್ರಭಾವಶಾಲೀ ಪತ್ರಿಕೆ 'ವಾಷಿಂಗ್ಟನ್ ಪೋಸ್ಟ್' ಇತ್ತೀಚೆಗೆ ವರದಿ ಮಾಡಿದೆ.

ಪ್ಯಾಲೆಸ್ತೈನ್ ಅರಬ್ಬರ ಮಾತ್ರವಲ್ಲ, ಸ್ವತಃ ಇಸ್ರೇಲಿಗಳ ಶತ್ರು ಈ ಸಿದ್ಧಾಂತ. ಯಾಕೆಂದರೆ ಮಧ್ಯಪ್ರಾಚ್ಯದ ಶಾಂತಿಯುತ ಇತ್ಯರ್ಥಕ್ಕೆ ಇದೊಂದು ದೊಡ್ಡ ಕುತ್ತು. ಯೆಹೂದಿ ಜನಗಳೂ ಝಿಯೋನಿಸ್ಟರು ಸಾರುತ್ತಿದ್ದ ಹಾಲಿನ ಹೊಳೆಯ ದೇವತಾ ನಾಡಿನ ಬದಲು ಅತ್ಯಂತ ಹಣದುಬ್ಬರದ ನಾಡನ್ನು ಕಂಡು ತತ್ತರಿಸಿದ್ದಾರೆ. ಇಸ್ರೇಲಿನ ಹೆಚ್ಚೆಚ್ಚು ಜನವಿಭಾಗಗಳು ನಿಜಸಂಗತಿ ಅರಿಯಲಾರಂಭಿಸಿದ್ದಾರೆ. ಇತ್ತೀಚೆಗೆ ಅಲ್ಲಿ ಇಸ್ರೇಲೀ ಸರ್ಕಾರದ ಆಕ್ರಾಮಿಕ ನೀತಿಗಳ ವಿರುದ್ಧ ನಡೆದ ಪ್ರದರ್ಶನವೊಂದರಲ್ಲಿ ಒಂದು ಲಕ್ಷ ಮಂದಿ ಭಾಗವಹಿಸಿದ್ದರು. ಬೇರೆ ದೇಶಗಳಿಂದ ಇಸ್ರೇಲಿಗೆ ಯೆಹೂದಿಯರ ವಲಸೆ ತೀವ್ರವಾಗಿ ಇಳಿಮುಖ ವಾಗುತ್ತಿದೆ ಎಂದು ಝಿಯೋನಿಸ್ಟರು ಕಳವಳಪಡುತ್ತಾರೆ.

> **ಎಲ್ಲಕ್ಕೂ ಮಿತಿಯಿದೆ**
>
> 'ಯೆಶ್‌ಗ್ವುಲ್' ಇದು ಲೆಬನಾನ್‌ನಲ್ಲಿ 1982ರಲ್ಲಿ ಇಸ್ರೇಲ್ ಆಕ್ರಮಣ ನಡೆಸಿ ಇಸ್ರೇಲೀ ಸೈನಿಕರನ್ನು ಬಲವಂತದಿಂದ ಅಲ್ಲಿಗೆ ಕಳುಹಿಸುತ್ತಿದ್ದುದ್ದನ್ನು ವಿರೋಧಿಸಿ 25 00 ಇಸ್ರೇಲೀ ಮೀಸಲು ಸೈನಿಕರು ರಚಿಸಿಕೊಂಡ ಒಂದು ಸಂಘಟನೆ. ಇದರ ಅರ್ಥ "ಎಲ್ಲದಕ್ಕೂ ಒಂದು ಮಿತಿಯಿದೆ" ಪ್ಯಾಲೆಸ್ತೈನ್ ಅರಬ್ಬರ ವಿರುದ್ಧ ಆಕ್ರಮಣ ಮಾಡಲು ನಿರಾಕರಿಸಿದ ಹಲವು ಸೈನಿಕ ಈ ಸಂಘಟನೆ ಸೇರಿವಾಗಿದೆ.

ಪ್ಯಾಲೆಸ್ಟೈನ್ ಹೋರಾಟ

ನಿರ್ಣಯ ಸಲಹೆ ಮಾಡಿದ ಪರಿಹಾರ ಹೀಗಿದೆ.

ಪ್ಯಾಲೆಸ್ಟೈನ್ ಮೇಲೆ ಬ್ರಿಟಿಷ್ ನಿಯೋಗಾಧಿಕಾರ ಕೊನೆಗೊಳ್ಳಬೇಕು. ಪ್ಯಾಲೆಸ್ಟೈನ್‌ನ್ನು ಎರಡು ಪ್ರಭುತ್ವಗಳಾಗಿ ವಿಭಜನೆ ಮಾಡಬೇಕು. ಆದರೆ ಅವುಗಳ ನಡುವಿನ ಆರ್ಥಿಕ ಏಕತೆ ಮುಂದುವರೆಸಬೇಕು. ಜೆರುಸಲೇಂ ಹಾಗೂ ಅದರ ಸುತ್ತಮುತ್ತಲ ಪ್ರದೇಶ ಅಂತರ್ರಾಷ್ಟ್ರೀಯ ಆಳ್ವಿಕೆಯ ಒಂದು ಸ್ವತಂತ್ರ ಪ್ರಾದೇಶಿಕ ಘಟಕವಾಗಬೇಕು. ಯೆಹೂದೀ ಪ್ರಭುತ್ವ ಪ್ಯಾಲೆಸ್ಟೈನ್‌ನ 5 6% ಪ್ರದೇಶದಲ್ಲಿ ಸ್ಥಾಪನೆಗೊಳ್ಳುವುದು. ಇದರಲ್ಲಿ 4.98 ಲಕ್ಷ ಯೆಹೂದ್ಯರು ಮತ್ತು 4.97 ಲಕ್ಷ ಅರಬ್ಬರಿರುತ್ತಾರೆ. ಅರಬ್ ಪ್ರಭುತ್ವದಲ್ಲಿ 43% ಪ್ರದೇಶವಿದ್ದು ಇದರ ಜನಸಂಖ್ಯೆ 7.25 ಲಕ್ಷ ಅರಬ್ಬರು ಹಾಗೂ 10ಸಾವಿರ ಯೆಹೂದಿಗಳಿರುತ್ತಾರೆ. ಉಳಿದ ಜೆರುಸಲೇಂ ಪ್ರಾಂತದಲ್ಲಿ 1.05 ಲಕ್ಷ ಅರಬ್ಬರು ಹಾಗೂ 1.00 ಲಕ್ಷ ಯೆಹೂದ್ಯರಿರುತ್ತಾರೆ.

ಈ ನಿರ್ಣಯ ಪ್ಯಾಲೆಸ್ಟೈನ್ ಸಮಸ್ಯೆಯ ಪರಿಹಾರದ ಒಂದು ಆಧಾರವಾಗಬಹುದಿತ್ತು. ಆದರೆ ಪ್ಯಾಲೆಸ್ಟೈನೀ ಅರಬ್ ಪ್ರಭುತ್ವ ರಚನೆಯಾಗದಂತೆ ತಡೆದು, ಹೆಚ್ಚೆಚ್ಚು ಪ್ರದೇಶಗಳನ್ನು ಸೇರಿಸಿಕೊಂಡು ಕೇವಲ, ಯೆಹೂದಿ ಪ್ರಭುತ್ವ ವಿಸ್ತರಿಸಬೇಕೆಂಬ ಗುರಿ ಹೊಂದಿದ್ದ ಝಿಯೊನಿಸ್ಟರಿಗೆ ಇದು ಪಥ್ಯವಾಗಲಿಲ್ಲ. ಪ್ಯಾಲೆಸ್ಟೈನೀ ಅರಬ್ಬರ ಮೇಲೆ ಕ್ರೂರ ಅತ್ಯಾಚಾರಗಳು ವಿಪರೀತ ಹೆಚ್ಚಿದವು. ಉದಾ: ಜೆರುಸಲೇಂನ ಹತ್ತಿರದ ಹಳ್ಳಿಯೊಂದರಲ್ಲಿ ಒಂದೇ ದಿನದಲ್ಲಿ 25 0 ಅರಬ್‌ರನ್ನು ಮಹಿಳೆಯರು, ಮಕ್ಕಳೆನ್ನದೆ ಝಿಯೋನಿಸ್ಟರು ಕೊಚ್ಚಿ ಹಾಕಿದರು.

ಪ್ಯಾಲೆಸ್ಟೈನ್ ರಾಷ್ಟ್ರೀಯ ಮಂಡಳಿಯ 19ನೇ ಅಧಿವೇಶನ ಮಂಜೂರು ಮಾಡಿರುವ ರಾಜಕೀಯ ಹೇಳಿಕೆಯ ಮುಖ್ಯ ಅಂಶಗಳು

1. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಸಂಖ್ಯೆ 242 ಮತ್ತು 338ರ ಆಧಾರದ ಮೇಲೆ ಮಧ್ಯಪ್ರಾಚ್ಯ ಕುರಿತಾದ ಅಂತರ್ರಾಷ್ಟ್ರೀಯ ಸಮ್ಮೇಳನ ಕರೆಯಬೇಕು. ಸ್ವಯಂ ನಿರ್ಧಾರದ ಹಕ್ಕು ಕೂಡಾ ಸೇರಿದಂತೆ ಪ್ಯಾಲೆಸ್ಟೀನಿಯನ್ ಜನತೆಯ ಹಕ್ಕುಗಳ ಭರವಸೆ ನೀಡಬೇಕು.

2. 1967ರಲ್ಲಿ ಇಸ್ರೇಲ್ ಆಕ್ರಮಿಸಿದ ಎಲ್ಲಾ ಪ್ಯಾಲೆಸ್ಟೀನಿಯನ್ ಹಾಗೂ ಅರಬ್ ಪ್ರದೇಶಗಳಿಂದ, ಅರಬ್ ಜೆರುಸಲೇಂನಿಂದ ಇಸ್ರೇಲಿಗಳ ವಾಪಸಾತಿ.

3. 1967ರಿಂದ ಇಸ್ರೇಲ್ ಆಕ್ರಮಿಸಿದ ಪ್ರದೇಶಗಳಲ್ಲಿ, ಎಲ್ಲಾ ಅತಿಕ್ರಮಣಕಾರಿ ಹಾಗೂ ಯೆಹೂದಿಗಳನ್ನು ತಂದು ನೆಲೆಗೊಳಿಸುವ ಕ್ರಮಗಳನ್ನು ರದ್ದುಗೊಳಿಸಬೇಕು.

4. ಈ ಪ್ರದೇಶಗಳನ್ನು ವಿಶ್ವಸಂಸ್ಥೆಯ ತಾತ್ಕಾಲಿಕ ಹಿಡಿತಕ್ಕೆ ಒಳಪಡಿಸಬೇಕು.

5 ಸಂಬಂಧಪಟ್ಟ ವಿಶ್ವಸಂಸ್ಥೆಯ ನಿರ್ಣಯಗಳ ಪ್ರಕಾರ ನಿರಾಶ್ರಿತರ ಸಮಸ್ಯೆಯ ಪರಿಹಾರ.

6. ಪ್ಯಾಲೆಸ್ಟೈನ್‌ನ ಪವಿತ್ರ ಸ್ಥಳಗಳಲ್ಲಿ ಧಾರ್ಮಿಕ ಹಾಗೂ ಆರಾಧನಾ ಸ್ವಾತಂತ್ರ್ಯದ ಭರವಸೆ.

7. ಈ ಪ್ರದೇಶದಲ್ಲಿ ಪ್ಯಾಲೆಸ್ಟೈನ್ ರಾಷ್ಟ್ರವೂ ಸೇರಿದಂತೆ ಎಲ್ಲಾ ದೇಶಗಳಿಗೆ ಶಾಂತಿ ಹಾಗೂ ಭದ್ರತೆಯ ಭರವಸೆ ನೀಡಲು [illegible]

ಈ ಕೃತ್ಯ ಎಸಗಿದ ಯೆಹೂದೀ ಭಯೋತ್ಪಾದಕರ ಗುಂಪಿನ ಮುಖಂಡರು ನಂತರ ಇಸ್ರೇಲಿನ ಪ್ರಧಾನಮಂತ್ರಿಗಳಾದ ಮೆನಂಚೆಂಬೆಗಿನ್ ಮತ್ತು ಶಮಿರ್ ಎಂಬುದನ್ನು ಗಮನಿಸಬೇಕು.

1948ರ ಮೇ 15 ರಂದು ಝಿಯೋನಿಸ್ಟರು ಇಸ್ರೇಲೀ ರಾಷ್ಟ್ರದ ಏಕಪಕ್ಷೀಯ ಘೋಷಣೆ ಮಾಡಿದರು. ಇದನ್ನು ವಿರೋಧಿಸಿ ಪ್ಯಾಲೆಸ್ಟೈನ್‌ನ ವಿಭಜನೆ ಒಪ್ಪದ ಹಲವು ಅರಬ್ ಪ್ರಭುತ್ವಗಳು ಇಸ್ರೇಲ್ ಮೇಲೆ ಯುದ್ಧ ಘೋಷಿಸಿದರು. ಝಿಯೋನಿಸ್ಟರ ಭಯೋತ್ಪಾದಕತೆ ಹಾಗೂ ಇಸ್ರೇಲೀ ಮಿಲಿಟರಿಯ ದಮನದಿಂದಾಗಿ ಒಮ್ಮೆಲೇ 9ಲಕ್ಷ ಪ್ಯಾಲೆಸ್ಟೈನಿಗಳು ನಿರಾಶ್ರಿತರಾಗಿ ನೆರೆಯ ಅರಬ್ ದೇಶಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಸಮಸ್ಯೆ ಇನ್ನಷ್ಟು ಕ್ಲಿಷ್ಟಗೊಂಡಿತು.

ಪ್ಯಾಲೆಸ್ಟೈನ್‌ನಲ್ಲಿ ಅರಬ್ ರಾಷ್ಟ್ರ ಸ್ಥಾಪಿಸಬೇಕೆಂಬ ವಿಶ್ವಸಂಸ್ಥೆಯ ನಿರ್ಣಯ ಇಸ್ರೇಲ್ ಹಾಗೂ ಸಾಮ್ರಾಜ್ಯಶಾಹಿಗಳ ಕುತಂತ್ರಗಳಿಂದಾಗಿ ಜಾರಿಗೆ ಬರಲಿಲ್ಲ. ಪ್ಯಾಲೆಸ್ಟೈನ್ ನಿರಾಶ್ರಿತರು ಹಾಗೂ ಪ್ಯಾಲೆಸ್ಟೈನ್ ಪ್ರಶ್ನೆಯ ಇತರ ಅಂಶಗಳನ್ನು ಕುರಿತು ವಿಶ್ವಸಂಸ್ಥೆ ಆಗಾಗ ಅಂಗೀಕರಿಸಿದ ಇತರ ನಿರ್ಣಯಗಳ ಗತಿಯೂ ಇದೇ ಆಗಿತ್ತು. ಈ ನಡುವೆ ಇಸ್ರೇಲೀ ಪ್ರಭುತ್ವದ ಆಕ್ರಾಮಕ ಕ್ರಮಗಳು, ಪ್ಯಾಲೆಸ್ಟೈನೀ ಅರಬ್ಬರ ಮೇಲಿನ ಕ್ರೂರ ದಮನ ಮುಂದುವರೆಯಿತು. ಪ್ಯಾಲೆಸ್ಟೈನಿಯರ ದುರಂತವನ್ನು ಇನ್ನಷ್ಟು ಅಸಹನೀಯಗೊಳಿಸಿದ, ಅರಬ್ ದೇಶಗಳ ಮೇಲೆ 1967ರ ಇಸ್ರೇಲೀ ಆಕ್ರಮಣ ವಿಶ್ವಾದ್ಯಂತ ಖಂಡನೆಗೊಳಗಾಯಿತು. ಇದರ ಫಲವಾಗಿ ವಿಶ್ವಸಂಸ್ಥೆಯ ಭದ್ರತಾ ಸಮಿತಿ 22 ನವೆಂಬರ್ 1967ರಂದು ನಿರ್ಣಯ ಸಂಖ್ಯೆ 242ನ್ನು ಅಂಗೀಕರಿಸಿ 1967ರ ಘರ್ಷಣೆಯಲ್ಲಿ ಆಕ್ರಮಿಸಿದ ಪ್ರದೇಶಗಳಿಂದ ಇಸ್ರೇಲ್ ವಾಪಸು ಹೋಗಬೇಕು ಹಾಗೂ ಮಧ್ಯ ಪ್ರಾಚ್ಯದಲ್ಲಿ ಒಂದು ನ್ಯಾಯಪೂರ್ಣ ಹಾಗೂ ಶಾಶ್ವತ ಶಾಂತಿ ಸ್ಥಾಪಿಸಬೇಕೆಂದು ಕರೆ ನೀಡಿತು.

ಆದರೆ ಇಸ್ರೇಲಿನ ಆಳುವ ವಲಯಗಳ ಯುದ್ಧಕೋರತನ ಹಾಗೂ ಅದಕ್ಕೆ ಅಮೆರಿಕಾದ ಬೆಂಬಲಗಳಿಂದಾಗಿ ಸಮಸ್ಯೆ ಇತ್ಯರ್ಥ ಕಾಣದೆ ಮತ್ತೆ 1973ರಲ್ಲಿ ಮಿಲಿಟರಿ ಕಾರ್ಯಾಚರಣೆಗಳು ನಡೆಯುವಂತಾಯಿತು. ಮತ್ತೆ ವಿಶ್ವಸಂಸ್ಥೆ ಶಾಂತಿ ಪ್ರಯತ್ನ ನಡೆಸಿತು. 22 ಅಕ್ಟೋಬರ್ 1973ರಂದು ಭದ್ರತಾ ಸಮಿತಿ ನಿರ್ಣಯ ಸಂಖ್ಯೆ 338ನ್ನು ಅವಿರೋಧವಾಗಿ ಅಂಗೀಕರಿಸಿ ತಕ್ಷಣ ಶಾಂತಿ ಮಾತುಕತೆ ನಡೆಸಬೇಕೆಂದು ಕರೆ ನೀಡಿತು. ಈ ಪ್ರಕಾರ ಅಮೆರಿಕ ಮತ್ತು ಸೋವಿಯತ್ ಒಕ್ಕೂಟದ ಜಂಟಿ ಅಧ್ಯಕ್ಷತೆಯಲ್ಲಿ ಜಿನೀವಾದಲ್ಲಿ ಒಂದು ಶಾಂತಿ ಸಮ್ಮೇಳನ ಆರಂಭವಾಯಿತು. ಇನ್ನೇನು ಇತ್ಯರ್ಥ ಸನಿಹವಾಗುತ್ತಿದೆ ಎಂಬ ಆಸೆ ಮೂಡುತ್ತಿರುವಾಗಲೇ ಅಮೆರಿಕಾ ಹಾಗೂ ಇಸ್ರೇಲ್ ತಮ್ಮ ಪ್ರತ್ಯೇಕ ಕಾರ್ಯಾಚರಣೆಗಳಿಂದಾಗಿ ಈ ಆಸೆಯನ್ನು ಹೊಸಕಿ ಹಾಕಿದವು. ಈಜಿಪ್ಟ್‌ನ ಅಧ್ಯಕ್ಷ ಸಾದತ್ ಕೂಡ ಇವರೊಂದಿಗೆ ಕೈಮಿಲಾಯಿಸಿ ಪ್ಯಾಲೆಸ್ಟೈನೀ ಅರಬರಿಗೆ ವಿಶ್ವಾಸಘಾತ ಮಾಡಿದರು. ಈಜಿಪ್ಟ್ ಹಾಗೂ ಇಸ್ರೇಲ್ ನಡುವೆ ಮಾರ್ಚ್ 1979ರಲ್ಲಿ ನಡೆದ ಕ್ಯಾಂಪ್ ಡೇವಿಡ್ ಒಪ್ಪಂದ ವಿಶ್ವಸಂಸ್ಥೆಯ ಪ್ಯಾಲೆಸ್ಟೈನ್ ಪ್ರಶ್ನೆ ಕುರಿತಾದ ಹಲವು ನಿರ್ಣಯಗಳ ಉಲ್ಲಂಘನೆಯಾಗಿತ್ತು. ಇದು ಇಸ್ರೇಲೀ ಆಳರಸರ ವಿಸ್ತರಣಾಕಾಂಕ್ಷೆಯನ್ನು ಇನ್ನಷ್ಟು ಹೆಚ್ಚಿಸಿತು. ಈ ಒಪ್ಪಂದದ ನಂತರ ಇಸ್ರೇಲೀಗಳು ತಾವು ಆಕ್ರಮಿಸಿದ್ದ ಅರಬ್ ಪ್ರದೇಶಗಳಲ್ಲಿ, ಮುಖ್ಯವಾಗಿ ಪ್ಯಾಲೆಸ್ಟೈನೀ ಅರಬ್ ಪ್ರಭುತ್ವದ ಭಾಗವಾಗಬೇಕಾಗಿದ್ದ ಜೋರ್ಡಾನ್ ನದಿಯ ಪಶ್ಚಿಮ ಭಾಗ, ಘಾಝಾ ಪಟ್ಟಿ ಮತ್ತು ಜೆರುಸಲೇಂನ ಪೂರ್ವ ಭಾಗದಲ್ಲಿ ಯೆಹೂದಿಯರನ್ನು ತಂದು ನೆಲೆಸುವ ಕೆಲಸ ಭರದಿಂದ ಆರಂಭಿಸಿದರು. ಕ್ರಮೇಣ ಪ್ಯಾಲೆಸ್ಟೈನ್‌ನೆಲ್ಲಾ ಅತಿಕ್ರಮಿಸಿ ಪ್ಯಾಲೆಸ್ಟೈನೀ ಅರಬ್ ಪ್ರಭುತ್ವವೊಂದು ಸ್ಥಾಪನೆಗೊಳ್ಳದಂತೆ ತಡೆಯುವ ಲೆಕ್ಕಾಚಾರ ಅವರದು. ಈ ಅತಿಕ್ರಮಣದೊಂದಿಗೆ ಆಕ್ರಮಿತ ಪ್ರದೇಶಗಳಲ್ಲಿ ಅರಬ್ಬರ ಮೇಲೆ ಫ್ಯಾಸಿಸ್ಟ್ ದಮನ, ಮಸೀದಿಗಳ ಮೇಲೆ ಪ್ರಾರ್ಥನಾ ಸಮಯದಲ್ಲೇ ಗೋಲಿಬಾರು,

ಬ್ರಿಟಿಷ್ ವಸಾಹತುಶಾಹಿಗಳ ನೇರ ಮತ್ತು ಪರೋಕ್ಷ ಬೆಂಬಲದಿಂದ ಝಿಯೋನಿಸ್ಟರು ಪ್ಯಾಲೆಸ್ಟೈನ್‌ನ ಅರಬರ ಸ್ವಯಂ ನಿರ್ಧಾರದ ಹಕ್ಕನ್ನು ವಂಚಿಸಲು ಪ್ರಯತ್ನಿಸುತ್ತಿದ್ದಾಗಲೇ ಪ್ಯಾಲೆಸ್ಟೈನ್ ಅರಬ್ಬರೂ ನಿರ್ಣಾಯಕ ಪ್ರತಿರೋಧ ನೀಡಲಾರಂಭಿಸಿದರು. ಇಸ್ರೇಲಿನ ಏಕಪಕ್ಷೀಯ ಘೋಷಣೆಯ ನಂತರ ಝಿಯೋನಿಸ್ಟರ ಅತ್ಯಾಚಾರಗಳು ಹೆಚ್ಚಲಾರಂಭಿಸಿದಾಗ 195 0ರ ದಶಕದ ಕೊನೆಯ ಭಾಗದಲ್ಲಿ ಈ ಪ್ರತಿರೋಧ ಆಂದೋಲನ ಹೊಸ ಸಕ್ರಿಯ ಸಂಘಟಿತ ಘಟ್ಟ ತಲುಪಿ ಅರಬ್ ಪ್ಯಾಲೆಸ್ಟೈನಿಯರ ರಾಷ್ಟ್ರೀಯ ಹಕ್ಕುಗಳನ್ನು ಬಲವಾಗಿ ಪ್ರತಿಪಾದಿಸಲಾರಂಭಿಸಿತು.


ಇದರ ಪರಿಣಾಮವಾಗಿ 1964ರಲ್ಲಿ ಪ್ಯಾಲೆಸ್ಟೈನ್ ರಾಷ್ಟ್ರೀಯ ಮಂಡಳಿಯ ಮೊದಲ ಅಧಿವೇಶನ ನಡೆಯಿತು. ಇದು ಪ್ಯಾಲೆಸ್ಟೈನ್‌ನ ಅರಬ್ ಜನತೆಯ ಒಂದು ರೀತಿಯ ಸಂಸತ್ತೆಂದೇ ಹೇಳಬಹುದು. ಅಲ್ಲಿ ಪ್ಯಾಲೆಸ್ಟೈನ್‌ನ ವಿಮೋಚನಾ ರಂಗ (ಪಿ.ಎಲ್.ಓ.) ಸ್ಥಾಪನೆಗೊಂಡಿತು. ಇದು ರಾಷ್ಟ್ರೀಯ ಹಕ್ಕುಗಳಿಗಾಗಿ ಪ್ಯಾಲೆಸ್ಟೈನ್ ಜನತೆಯ ಹೋರಾಟದ ಮುಂಚೂಣಿ ಸಂಘಟನೆ ಮಾತ್ರವೇ ಅಲ್ಲ, ಎಲ್ಲಾ ಅರಬ್ ಜನ ಸಮೂಹಗಳ ರಾಷ್ಟ್ರೀಯ ವಿಮೋಚನಾ ಆಂದೋಲನದ ಮುಂದುವರಿದ ತುಕಡಿಗಳಲ್ಲಿ ಒಂದು.


ತಮ್ಮ ಹಕ್ಕುಗಳನ್ನು ಪಡೆಯಲು ಸಶಸ್ತ್ರ ಹೋರಾಟದಲ್ಲಿ ತೊಡಗಿರುವ ಅಲ್-ಫತಾ, ಪಿ.ಎಫ್.ಎಲ್.ಪಿ., ಡಿ.ಎಫ್.ಎಲ್.ಪಿ ಹಾಗೂ ಇತ್ತೀಚೆಗೆ ಸೇರಿರುವ ಇಸ್ಲಾಮೀ ಜಿಹಾದ್‌ಗಳ ಸಂಯುಕ್ತರಂಗ ಇದು.

ಪ್ಯಾಲೆಸ್ಟೈನ್ ಪ್ರಶ್ನೆ ಮತ್ತು ಮಧ್ಯಪ್ರಾಚ್ಯ ಇತ್ಯರ್ಥದ ಬಗ್ಗೆ ತನ್ನ ಪ್ರೌಢ ಹಾಗೂ ವಾಸ್ತವದೃಷ್ಟಿಯ ನಿಲುವುಗಳಿಂದಾಗಿ ಪಿ.ಎಲ್.ಓ. ಕ್ರಮೇಣ ವಿಶ್ವಾದ್ಯಂತ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲ ಪಡೆಯಿತು. ಪ್ಯಾಲೆಸ್ಟೈನ್ ರಾಷ್ಟ್ರೀಯ ಮಂಡಳಿಯ ಹನ್ನೆರಡನೇ ಅಧಿವೇಶನ ತನ್ನ ರಾಜಕೀಯ ಕಾರ್ಯಕ್ರಮವನ್ನು ಅಂಗೀಕರಿಸಿತು. "ವಿಮೋಚನೆಗೊಂಡ ಯಾವುದೇ

ಪೂರ್ವ ಜೆರುಸಲೇಂ ರಾಜಧಾನಿಯಾಗಿರುವ ಇತ್ತೀಚೆಗೆ ಘೋಷಿಸಲ್ಪಟ್ಟ ಪ್ಯಾಲೆಸ್ಟೈನ್ ರಾಷ್ಟ್ರಕ್ಕೆ ನಮ್ಮ ಸಂಪೂರ್ಣ ಬೆಂಬಲ ಹಾಗೂ ಮಾನ್ಯತೆಯನ್ನು ಮತ್ತೊಮ್ಮೆ ದೃಢಪಡಿಸುತ್ತೇವೆ.

-ಸಿ.ಪಿ.ಐ.(ಎಂ) 13ನೇ ಮಹಾಧಿವೇಶನದ ಒಂದು ನಿರ್ಣಯ





ಪ್ಯಾಲೆಸ್ಟೈನ್ ವಿಮೋಚನಾ ರಂಗ

ಪ್ಯಾಲೆಸ್ಟೀನಿಯನ್ ಪ್ರದೇಶದಲ್ಲಿ ಪ್ಯಾಲೆಸ್ಟೀನಿಯನ್ ರಾಷ್ಟ್ರೀಯ ಶಕ್ತಿಯ ರಚನೆ ತನ್ನ ಗುರಿಯೆಂದು ಈ ಅಧಿವೇಶನ ಘೋಷಿಸಿತು. ಜೋರ್ಡಾನ್ ನದಿಯ ಪಶ್ಚಿಮ ತಟದಲ್ಲಿ, ಘಾಝಾ ಪಟ್ಟಿಯಲ್ಲಿ ತಮ್ಮ ಸ್ವತಂತ್ರ ದೇಶ ಸ್ಥಾಪಿಸುವ ಪ್ಯಾಲೆಸ್ಟೀನಿಯನ್ನರ ಘೋಷಣೆ ಪರೋಕ್ಷವಾಗಿ ಇಸ್ರೇಲ್ ಪ್ರಭುತ್ವವನ್ನು ಮಾನ್ಯ ಮಾಡಿದ ನಿರ್ಧಾರ ಕೂಡಾ. ಈ ಮೂಲಕ ಪಿ.ಎಲ್.ಓ. ಇಸ್ರೇಲನ್ನು ಧ್ವಂಸ ಮಾಡುವ ಉದ್ದೇಶ ಹೊಂದಿದೆ ಎಂಬ ಇಸ್ರೇಲಿನ ಮುಖಾಂತರ ಅಪಪ್ರಚಾರದ ಬುಡವೇ ಕಿತ್ತು ಹೋದಂತಾಯಿತು. ತಮ್ಮ ಆಕ್ರಾಮಕ ಧೋರಣೆಗಳನ್ನು ಸಮರ್ಥಿಸಿಕೊಳ್ಳಲು ಬೇರೆ ನೆವ ಹುಡುಕಬೇಕಾಯಿತು.

ನಮ್ಮ ಪಕ್ಷ ಪಿ.ಎಲ್.ಓ. ಪ್ಯಾಲೆಸ್ಟೈನ್ ಜನತೆಯ ಏಕೈಕ ಕಾನೂನುಬದ್ಧ ಪ್ರತಿನಿಧಿ ಎಂದು ಪರಿಗಣಿಸುತ್ತದೆ ಮತ್ತು ಸಾಮ್ರಾಜ್ಯಶಾಹಿ-ವಿರೋಧ ಹಾಗೂ ಝಿಯೋವಿಸಾ-ವಿರೋಧಿ ಆಧಾರದ ಮೇಲೆ ಪಿ.ಎಲ್.ಓ.ದ ಐಕ್ಯತೆಗಾಗಿ ನಿರಂತರ ದೃಢ ಪ್ರಯತ್ನ ನಡೆಸುತ್ತದೆ....

ನಮ್ಮ ಪಕ್ಷ ಜೋರ್ಡಾನ್ ನದಿಯ ಪಶ್ಚಿಮ ತಟದಲ್ಲಿ, ಘಾಝಾ ಪಟ್ಟಿಯಲ್ಲಿ ಮತ್ತು ಜೆರುಸಲೇಂನ ಅರಬ್ ಭಾಗದಲ್ಲಿ ಒಂದು ಸ್ವತಂತ್ರ ಪ್ರಭುತ್ವ ಸ್ಥಾಪಿಸುವ ನಮ್ಮ ಜನತೆಯ ಹಕ್ಕನ್ನು ಸದಾ ಎತ್ತಿಹಿಡಿಯುತ್ತೇವೆ. ಈ ವಿಷಯದಲ್ಲಿ ನಮ್ಮ ಸೋದರ ಇಸ್ರೇಲ್ ಕಮ್ಯೂನಿಸ್ಟ್ ಪಕ್ಷ ಹಾಗೂ ನಮ್ಮ ನಡುವೆ ಸಂಪೂರ್ಣ ಏಕಮತವಿದೆಯೆಂಬುದಕ್ಕೆ ನಾವು ಕೃತಜ್ಞರು.

-27ನೇ ಸಿ.ಪಿ.ಎಸ್.ಯು. ಮಹಾಧಿವೇಶನದಲ್ಲಿ ಪ್ಯಾಲೆಸ್ಟೈನ್ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಸುಲೈಮಾನ್ ಅಲ್-ನದ್ಜಬ್.

ಪಿ.ಎಲ್.ಓ. ಚಟುವಟಿಕೆಗಳಿಗೆ ನೆರವಾಗುತ್ತಾರೆಂಬ ಕಾರಣದ ಮೇಲೆ ಲೆಬನಾನ್ ಮತ್ತಿತರ ನೆರೆಯ ಅರಬ್ ದೇಶಗಳ ಮೇಲೆ ಆಕ್ರಮಣ, ನಿರಾಶ್ರಿತ ಶಿಬಿರಗಳಲ್ಲಿನ ಪ್ಯಾಲೆಸ್ಟೈನಿಗಳ ಮೇಲೂ ಅಮಾನುಷ ಧಾಳಿ.

ಆದರೆ ಎಷ್ಟೇ ದಮನ, ದಬ್ಬಾಳಿಕೆ, ಕ್ರೌರ್ಯ ಕೂಡಾ ನ್ಯಾಯಬದ್ಧ ಗುರಿ ಸಾಧನೆಗಾಗಿ ಹೋರಾಡುವ ಜನತೆಯ ಹೋರಾಟವನ್ನು ಬಗ್ಗುಬಡಿಯಲಾರದು ಎಂಬುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಪ್ಯಾಲೆಸ್ಟೈನ್‌ನ ಜನತೆ ಬದುಕುವ ಹಕ್ಕಿಗಾಗಿ ಹೋರಾಡುತ್ತಿದ್ದಾರೆ. ಡಿಸೆಂಬರ್

8. 1987ರಿಂದ ಇಸ್ರೇಲೀ ಆಕ್ರಮಿತ ಪ್ಯಾಲೆಸ್ಟೈನ್ ಪ್ರದೇಶಗಳಲ್ಲಿ ಆರಂಭವಾಗುವ ಇಂತಿಫಾದಾ ಅಥವಾ ಅಭೂತಪೂರ್ವ ರಾಷ್ಟ್ರೀಯ ಬಂಡಾಯದ ಫಲವಾಗಿ ಈಗಾಗಲೇ ಪ್ಯಾಲೆಸ್ಟೈನ್ ರಾಷ್ಟ್ರದ ಘೋಷಣೆಯಾಗಿದೆ. ಪ್ರತಿದಿನ ಪ್ಯಾಲೆಸ್ಟೈನ್ ಯುವಕರು, ಮಕ್ಕಳು, ಮಹಿಳೆಯರು ಪ್ಯಾಲೆಸ್ಟೈನ್‌ನ ಬೀದಿ-ಬೀದಿಗಳಲ್ಲಿ ಇಸ್ರೇಲೀ ಸೈನಿಕರ ಅತ್ಯಾಧುನಿಕ ಅಮೆರಿಕನ್ ಅಸ್ತ್ರಗಳನ್ನು ಕವಣೆ ಕಲ್ಲುಗಳಿಂದ ಎದುರಿಸುತ್ತಾರೆ.

ಪಿ.ಎಲ್.ಓ.ನ ಈ ವಾಸ್ತವ ದೃಷ್ಟಿಯ ನಿಲುವಿನಿಂದಾಗಿ 1974ರಲ್ಲಿ ರಬಾತ್‌ನಲ್ಲಿ ನಡೆದ ಅರಬ್ ದೇಶಗಳ ಸಮ್ಮೇಳನದಲ್ಲಿ ಪಿ.ಎಲ್.ಓ. ಪ್ಯಾಲೆಸ್ಟೈನಿನ ಅರಬರ ಏಕಮಾತ್ರ ಕಾನೂನುಬದ್ಧ ಪ್ರತಿನಿಧಿ ಎಂದು ಅಂಗೀಕರಿಸಲಾಯಿತು. ಅರಬ್ ಲೀಗ್ ಹಾಗೂ ಇಸ್ಲಾಮೀ ಸಮ್ಮೇಳನ ಸಂಘಟನೆ ಕೂಡಾ ಪಿ.ಎಲ್.ಓ.ಗೆ ಇದೇ ಸ್ಥಾನಮಾನ ನೀಡಿದವು.

1974ರಲ್ಲೇ 72 ಅಲಿಪ್ತ ಮತ್ತು ಸಮಾಜವಾದೀ ದೇಶಗಳು ಮಂಡಿಸಿದ ನಿರ್ಣಯವನ್ನು ಅಂಗೀಕರಿಸಿ ವಿಶ್ವಸಂಸ್ಥೆ ಕೂಡಾ ಪಿ.ಎಲ್.ಓ. ಪ್ಯಾಲೆಸ್ಟೀನಿಯನ್ನರ ಏಕೈಕ ಪ್ರತಿನಿಧಿ ಎಂದು ಮಾನ್ಯ ಮಾಡಿತು.

ಇಸ್ರೇಲಿನ ಝಿಯೋನಿಸ್ಟ್ ಆಳರಸರು ಮತ್ತು ಅಮೆರಿಕನ್ ಆಳುವ ವಲಯಗಳಲ್ಲಿನ ಅವರ ಹಿರಿಯಣ್ಣಗಳು ಮಾತ್ರವೇ ಮಧ್ಯಪ್ರಾಚ್ಯ ಪ್ರಶ್ನೆಯ ಇತ್ಯರ್ಥದಲ್ಲಿ ಪಿ.ಎಲ್.ಓ.ಗೆ ಏನೂ ಪಾತ್ರವೇ ಇಲ್ಲವೆಂಬಂತೆ ವರ್ತಿಸಲು ಪ್ರಯತ್ನಿಸುತ್ತಿದ್ದಾರೆ.

ನವೆಂಬರ್ 15 , 1988ರಂದು ಅಲ್ಜೀರ್ಸ್‌ನಲ್ಲಿ ಪಿ.ಎಲ್.ಓ.ದ ಅಧ್ಯಕ್ಷ ಯಾಸೆರ್ ಅರಾಫಾತ್ ಪ್ಯಾಲೆಸ್ಟೀನಿಯನ್ ಬಾವುಟ ಹಾರಿಸಿದರು. ಅಂದು ನಡೆದ ಪ್ಯಾಲೆಸ್ಟೀನಿಯನ್ ರಾಷ್ಟ್ರೀಯ ಮಂಡಳಿಯ 19ನೇ ಅಧಿವೇಶನ ಪ್ಯಾಲೆಸ್ಟೈನ್‌ನ ಸ್ವಾತಂತ್ರ್ಯದ ಘೋಷಣೆ ಮಾಡಿತು. ವಿಶ್ವಸಂಸ್ಥೆ ಅರಾಫತ್‌ರವರನ್ನು ಸಾಮಾನ್ಯಸಭೆಯನ್ನುದ್ದೇಶಿಸಿ ಮಾತನಾಡಬೇಕೆಂದು ಆಮಂತ್ರಿಸಿತು. ಕುಪಿತಗೊಂಡ ರೇಗನ್ ಆಡಳಿತ ಬರಲು ಅನುಮತಿ ನಿರಾಕರಿಸಿತು. ಆಗ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಕಲಾಪಗಳನ್ನೇ ಜಿನೇವಾಕ್ಕೆ ವರ್ಗಾಯಿಸಲಾಯಿತು. ಅರಾಫತ್ ಅದನ್ನುದ್ದೇಶಿಸಿ ಮಾತನಾಡಿದರು. 3 0 ವರ್ಷಗಳ ಹಿಂದೆ ವಸಾಹತುಶಾಹಿ ಇನ್ನೂ ಬಲವಾಗಿದ್ದಾಗ ಸಮಾಜವಾದೀ ಬಣ ಮೂಡಿರದಿದ್ದಾಗ ಸಾಮ್ರಾಜ್ಯಶಾಹಿಗಳ ಇಂತಹ ಮುಖಭಂಗ ಸಾಧ್ಯವಿರಲಿಲ್ಲ.

ಪ್ರಾಂತ ರೈತ ಸಂಘದ ಸಮ್ಮೇಳನಗಳು

ಬಂಟ್ವಾಳ ತಾಲ್ಲೂಕು ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ ಬಂಟ್ವಾಳ ತಾಲ್ಲೂಕು ೩ನೇ ಸಮ್ಮೇಳನ ಜ. 29ರಂದು ಜರುಗಿತು. ರುಕ್ಕಯ್ಯ ಪೂಜಾರಿಯವರ ಧ್ವಜಾರೋಹಣ ಬಿ.ವಾಸುಗಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಮ್ಮೇಳನದಲ್ಲಿ ರೈತ ಸಂಘದ ಕಾರ್ಯದರ್ಶಿ ಕಾ॥ ಬಿ.ನಾರಾಯಣ, ಕುಂದನ್, ಚನ್ನಪ್ಪ ಬಂಗೇರ ಮಾತನಾಡಿದರು.

ರೈತರಿಗೆ ಪಟ್ಟ ನೀಡಬೇಕು ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಪರಿಹಾರ ಧನವನ್ನು ಮಾಫಿ ಮಾಡಬೇಕು ಬೆಳೆಗೆ ಯೋಗ್ಯ ಬೆಲೆ ರೈತರಿಗೆ ಬಡ್ಡಿ ರಹಿತ ಸಾಲ ಕಡಿಮೆ ದರದಲ್ಲಿ ರಸಗೊಬ್ಬರ ಒದಗಿಸಬೇಕು. ಸರ್ಕಾರೀ ಭೂಮಿ ಸಾಗುವಳಿ ಮಾಡುತ್ತಿರುವ ರೈತರಿಗೆ ಹಕ್ಕುಪತ್ರ, ಕೃಷಿ ಕೂಲಿಕಾರರಿಗೆ ಕನಿಷ್ಠ ವೇತನ ಜಾರಿ ಮುಂತಾದ ಠರಾವುಗಳನ್ನು ಸಮ್ಮೇಳನ ಅಂಗೀಕರಿಸಿತು.

ಸಂಜೆ 4ಕ್ಕೆ 2ಸಾವಿರಕ್ಕೂ ಮೀರಿದ ರೈತ ಮಹಿಳೆಯರು ರೈತರೂ ಸೇರಿದ ಬೃಹತ್ ರ‍್ಯಾಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಕಾ॥ ಬಿ.ವಾಸುಗಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಅಧ್ಯಕ್ಷ ಕಾ॥ ಕೆ.ಆರ್.ಶ್ರೀಯಾನ್, ಕಾರ್ಯದರ್ಶಿ ಅಬ್ರಹಾಂ ಕರ್ಕಡ ಹಾಗೂ ಉಪಾಧ್ಯಕ್ಷ ಯು. ಜನಾರ್ಧನ್ ನ್ಯಾಕ್ ಅವರುಗಳು ಮಾತನಾಡಿ ಪಶ್ಚಿಮಬಂಗಾಳ ಮತ್ತು ಕೇರಳ ಎಡರಂಗ ಸರ್ಕಾರಗಳು ರೈತ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ದೇಶಕ್ಕೆ ಮಾದರಿಯಾಗಿರುವುದನ್ನು ತಿಳಿಸಿ ಕರ್ನಾಟಕ ರಾಜ್ಯದಲ್ಲಿಯೂ ಜನತೆ ಎಡ ಪ್ರಜಾಸತ್ತಾತ್ಮಕ ಚಳುವಳಿ ಮೂಲಕ ಜನ ಪರ ಸರ್ಕಾರ ತರಲು ಶ್ರಮಿಸಬೇಕೆಂದು ಕರೆ ನೀಡಿದರು.

ರೈತ ಸಮುದಾಯ ಎದುರಿಸುತ್ತಿರುವ ಸಂಕಷ್ಟಕ್ಕೆ ಪರಿಹಾರ ನೀಡುವಲ್ಲಿ ಕಳೆದ 41ವರ್ಷಗಳ ಕಾಂಗ್ರೆಸ್ ಆಡಳಿತ ಸಂಪೂರ್ಣ ವಿಫಲಗೊಂಡಿರುವುದರಿಂದ ಅಧಿಕಾರದಲ್ಲಿ ಮುಂದುವರಿಯಲು ರಾಜೀವ್‌ಗಾಂಧಿಗೆ ನೈತಿಕ ಹಕ್ಕಿಲ್ಲವೆಂದು ಕೇರಳದ ರೈತ ಮುಖಂಡ ಕಾ॥. ಬಿ.ಎಂ.ರಾಮಯ್ಯಶೆಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸುರುಪುರ ತಾ॥ ಸಮ್ಮೇಳನ

ಜನವರಿ 30ರಂದು ಸುರಪುರ ತಾಲ್ಲೂಕು ಸಮ್ಮೇಳನ ಗುಲ್ಬರ್ಗಾ ಜಿಲ್ಲಾ ಪರಿಷತ್ ಸಿ.ಪಿ.ಐ.(ಎಂ) ಸದಸ್ಯ ಕಾ॥ ಮಾರುತಿ ಮಾನ್ಪಡೆಯವರ ಉದ್ಘಾಟನೆಯೊಂದಿಗೆ ಆರಂಭವಾಯಿತು. ಕಾ॥ ಹಳೆಪ್ಪ ಹವಲ್ದಾರ್ ವರದಿ ಮಂಡಿಸಿದರು. ಸುಮಾರು 700 ಮಂದಿ ರೈತರ ಮೆರವಣಿಗೆ ಬಹಿರಂಗ ಸಭೆ ನಡೆಯಿತು. ಕಾ॥ ಗುರುನಾಥರೆಡ್ಡಿ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯ ಸಂಕ್ರಣ್ಣ ವಣಿಕಾಳ, ಚನ್ನಪ್ಪ ಆನೆಗುಂದಿ, ಚನ್ನೂರ ದೊಡ್ಡಪ್ಪ ಮಾಲೀಪಾಟೀಲ ಮತ್ತು ದೇವೀಂದ್ರಪ್ಪ ಪತ್ತಾರ ಮಾತನಾಡಿದರು.

ಸರ್ವಾಧಿಕಾರಿ ಕಾಂಗ್ರೆಸ್ ಆಡಳಿತ ಫಲವಾಗಿ ಜನರ ಹಕ್ಕುಗಳು ಮೊಟಕುಗೊಳ್ಳುತ್ತಿದೆ. ಆರ್ಥಿಕ ನೀತಿ, ಜವಳಿ ನೀತಿ, ಶಿಕ್ಷಣ ನೀತಿಯ ಮೂಲಕ ಜನರ ಪ್ರಜಾಪ್ರಭುತ್ವ ಹಕ್ಕುಗಳು ದಮನವಾಗುತ್ತಿವೆ ಎಂದು ಭಾಷಣಕಾರರು ಹೇಳಿ ಕರಾಳ ಶಾಸನಗಳನ್ನು ಹಿಮ್ಮೆಟ್ಟಿಸಿ ಹೋರಾಡಲು ಜನರು ಮುಂದೆ ಬರಬೇಕೆಂದು ಕರೆ ನೀಡಿದರು.

ಗುಲ್ಬರ್ಗಾ ಜಿಲ್ಲೆ ಹಸಿ ಬರಗಾಲವೆಂದು ಘೋಷಿಸಿ ಪರಿಹಾರ ನೀಡಬೇಕು. ಕಾಮಗಾರಿ ಆರಂಭಿಸಬೇಕು, ಕೃಷಿ ಕೂಲಿಕಾರರಿಗೆ ಹಸಿರು ಕಾರ್ಡು ನೀಡಬೇಕು. ಸಾಲ ವಸೂಲಿ ನಿಲ್ಲಿಸಬೇಕು, ಹೊಸ ಸಾಲ ನೀಡಬೇಕು, ತೊಗರಿ, ಶೇಂಗಾ ಬೆಳೆಗೆ ನ್ಯಾಯ ಬೆಲೆ ಒದಗಿಸಿ ಸರ್ಕಾರವೇ ಖರೀದಿಸಬೇಕು ಮುಂತಾದ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ನೂತನ ತಾಲ್ಲೂಕು ಸಮಿತಿಗೆ ಕಾ॥ ಹಣಮಂತರೆಡ್ಡಿ ಮ.ಪ್ರ.(ಅಧ್ಯಕ್ಷ), ತಿರುಪತಿ ನಾಯಕ ದೇವಿನಾಳ, ಹಣಮಂತರಾಯಗೌಡ ರಾಯಗೇರ, ಸಿದ್ದಣ್ಣ ಚೌಧರಿ ಮುದನೂರು (ಉಪಾಧ್ಯಕ್ಷರು), ಹಳೆಪ ಹವಲ್ದಾರ ಕಾರ್ಯದರ್ಶಿ) ಬಸವರಾಜ ಆಡೇಹಳ್ಳಿ (ಸಂಘಟನಾ ಕಾರ್ಯದರ್ಶಿ) ನಾಗರೆಡ್ಡಿ ಪಾಟೀಲ ಗೌಡಗೇರ, ಬೋಜಪ್ಪಗೌಡ ಬಾಧ್ಯಾಪುರ (ಸಹಕಾರ್ಯದರ್ಶಿಗಳು) ಗುರುನಾಥರೆಡ್ಡಿ ಹೊಸಗೌಡ್ರ (ಖಜಾಂಚಿ)ಯವರನ್ನೊಳಗೊಂಡ 12 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಸಾಲ ಮನ್ನಕ್ಕಾಗಿ ಕಾಲ್ನಡೆಜಾಥ

ಭೂ ಸಂರಕ್ಷಣೆ ಹೆಸರಿನಲ್ಲಿ ಹಾಕಿದ್ದ ಒಡ್ಡುಗಳು ಭೂ ಸವಕಳಿಯ ಪರಿಣಾಮವಾಗಿ ಹಾಳಾಗಿದೆ. ದೇವರಾಜ ಅರಸ್ ಕಾಲದಲ್ಲಿ ಒಡ್ಡಿನ ಸಾಲವೆಂದು ರೈತರ ಒಪ್ಪಿಗೆ ಇಲ್ಲದೆ ಹಾಕಿದ ಒಡ್ಡುಗಳಿಗೆ ಇಂದು ದೌರ್ಜನ್ಯದಿಂದ ರೈತರಿಂದ ಹಣ ವಸೂಲಿ ಮಾಡುತ್ತಿರುವುದನ್ನು ಪ್ರತಿಭಟಿಸಿ ಮೊಣಕಾಲ್ಮೂರು ತಾಲ್ಲೂಕಿನಾದ್ಯಂತ ಕಾಲ್ನಡೆ ಜಾಥ ನಡೆಸಲಾಯಿತು. ಸುಮಾರು 30 ಗ್ರಾಮಗಳನ್ನು ಹಾದು ಮೊಣಕಾಲ್ಮೂರು ತಲುಪಿದ ಜಾಥದಲ್ಲಿ ಸುಮಾರು 5 00 ಮಂದಿ ಪಾಲ್ಗೊಂಡಿದ್ದರು. ಮೆರವಣಿಗೆಯ ನಂತರ ತಹಸಿಲ್ದಾರ್‌ರಿಗೆ ಮನವಿ ಸಲ್ಲಿಸಲಾಯಿತು. ಪ್ರಯೋಜನಕ್ಕೆ ಬಾರದ ಹಾನಿಗೊಳಗಾದ ಒಡ್ಡಿಗೆ ಹಣ ವಸೂಲಿ ಮಾಡುವುದನ್ನು ಈ ಕೂಡಲೇ ನಿಲ್ಲಿಸಬೇಕೆಂದು ಸಭೆಯನ್ನುದ್ದೇಶಿಸಿ ಮಾತನಾಡಿದ ರೈತ ಸಂಘದ ತಾಲ್ಲೂಕು ಕಾರ್ಯದರ್ಶಿ ಕಾ॥ ಎ.ಜಿ.ಗಂಗಾಧರವರು ಒತ್ತಾಯಿಸಿದರು. ಬಲಾತ್ಕಾರದಿಂದ ವಸೂಲಿ ಮಾಡುವುದಿಲ್ಲವೆಂದು ಹಾಗೂ ನಿಲ್ಲಿಸಲಾಗುವುದೆಂದು ತಹಸೀಲ್ದಾರ್‌ರವರು ಸಭೆಗೆ ಆಶ್ವಾಸನೆ ನೀಡಿದರು.

ಕೊಟ್ಟ ಮಾತಿನಂತೆ ನಡೆಯಿರಿ ಇಲ್ಲವಾದರೆ ಉಗ್ರ ಹೋರಾಟ

ರೈತ-ಕಾರ್ಮಿಕ ವಿದ್ಯಾರ್ಥಿ ಯುವಜನರ ಬೆಂಬಲದ ಪರಿಣಾಮವಾಗಿ ಅಧಿಕಾರಕ್ಕೆ ಬಂದ ಜನತಾ ದಳ ಸರ್ಕಾರ 1983ರಲ್ಲಿ ನೀರಿನ ಕರವನ್ನು ಐದು ವರ್ಷಗಳ ಕಾಲ ರದ್ದು ಗೊಳಿಸುವ ಆಶ್ವಾಸನೆ ನೀಡಿತ್ತು. ಆದರೆ ಅಧಿಕಾರಿಗಳು ರೈತರಿಂದ ಬೇಕಾಯ್ದೇಶಿರ ನೀರಿನ ಕರವನ್ನು ವಸೂಲಿ ಮಾಡುತ್ತಿರುವುದು ಜನತಾ ದಳ ಸರ್ಕಾರದ ರೈತ ವಿರೋಧಿ ನೀತಿಯನ್ನು ತೋರಿಸುತ್ತದೆ ಎಂದು ಪ್ರತಿಭಟಿಸಿ ಬೆಳಗಾವಿ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಸವದತ್ತಿಯಲ್ಲಿ ಸುಮಾರು 20 ಗ್ರಾಮಗಳ ರೈತ ಪ್ರತಿನಿಧಿಗಳನ್ನೊಳಗೊಂಡ ರೈತ ಸಮಾವೇಶವೊಂದನ್ನು ನಡೆಸಲಾಯಿತು.

ನೀರಿನ ಕರವನ್ನು ಸೂಟ ಬಿಡದೆ ಹಿಂದಿನ ಐದು ವರ್ಷಗಳ ನೀರಿನ ಕರವನ್ನು ಒಂದೇ ಬಾರಿಗೆ ರೈತರು ಕೊಡುವಂತೆ ಸರ್ಕಾರ ನೋಟೀಸು ಕಳುಹಿಸುತ್ತಿರುವುದನ್ನು ಈ ಸಮಾವೇಶ ತೀವ್ರವಾಗಿ ಖಂಡಿಸಿತು. ಟೇಲ ಎಂಡದಲ್ಲಿರುವ ಭೂಮಿಗಳಿಗೆ ನೀರನ್ನು ಸರಿಯಾಗಿ ಕೊಡದೆ ಜಬರ್ದಸ್ತಾಗಿ ನೀರಿನ ಕರವನ್ನು ವಸೂಲಿ ಮಾಡುತ್ತಿರುವುದನ್ನು ಹಾಗೂ ಬೆಳೆ ಪರಿಶೀಲಿಸದೆ ಅಧಿಕಾರಿಗಳು ಏಕಪಕ್ಷೀಯವಾಗಿ ಕರ ಹಾಕುವುದನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿತು.

ಅನ್ಯಾಯ ಸರಿಪಡಿಸದೆ ಹೋದರೆ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರು 1981ರ ರೈತ ಬಂಡಾಯದ ಮಾದರಿಯಲ್ಲಿ ಉಗ್ರ ಹೋರಾಟಕ್ಕೆ ಧುಮುಕಬೇಕಾಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಕಾ॥ ಕಪ್ಪಣವರ್‌ರವರು ಈ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ತುಮಕೂರಿನಲ್ಲಿ ಎಸ್.ಎಫ್.ಐ. ರಾಜ್ಯ ಸಮಾವೇಶ

ಎಸ್.ಎಫ್.ಐ. ರಾಜ್ಯ ಸಮಾವೇಶವು ಫೆಬ್ರವರಿ 12-13ರಂದು ತುಮಕೂರು ನಗರದ ಸಾವಿತ್ರಮ್ಮ ಛತ್ರದಲ್ಲಿ ಜರುಗಲಿದೆ. ಸಮಾವೇಶ ಸ್ಥಳಕ್ಕೆ "ಸಫ್ದರ್ ಹಷ್ಮಿ" ನಗರ ಎಂದು ವೇದಿಕೆಗೆ "ಸಜೀವನ್ ವೇದಿಕೆ" ಎಂದು ಹೆಸರಿಸಲಾಗಿದೆ.

12ರಂದು ಮುಂಜಾನೆ 9ಗಂಟೆಗೆ "ಸ್ವತಂತ್ರ ಚೌಕ"ದಿಂದ "ರಾಷ್ಟ್ರೀಯ ಸಮಗ್ರತಾ ಜ್ಯೋತಿ"ಯೊಂದಿಗೆ ವಿದ್ಯಾರ್ಥಿಗಳ ಪಥಚಲನ ನಂತರ 10ಗಂಟೆಗೆ ಉದ್ಘಾಟನೆ ನಡೆಯಲಿದೆ. ಉದ್ಘಾಟನೆಯನ್ನು ಕೇರಳ ಎಡ ಪ್ರಜಾಸತ್ತಾತ್ಮಕ ರಂಗದ ಸಚಿವ ಕಾ॥ ಟಿ.ಶಿವದಾಸ ಮೆನನ್ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕದ ಖ್ಯಾತ ಪ್ರಗತಿಪರ ಸಾಹಿತಿ ಕವಿ ಸು.ರಂ. ಎಕ್ಕುಂಡಿ, ಅತಿಥಿಗಳಾಗಿ ಎಸ್.ಎಫ್.ಐ. ಅಖಿಲ ಭಾರತ ಅಧ್ಯಕ್ಷ ಕಾ॥ ಎ.ವಿಜಯರಾಘವನ್ ಮತ್ತು ಪ್ರೊ॥ ಹೆಚ್.ಜೆ.ಸಣ್ಣಗುಡ್ಡಯ್ಯ ಆಗಮಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ವಹಿಸಲಿದ್ದಾರೆ.

ಈ ರಾಜ್ಯ ಸಮಾವೇಶವು ಕಲ್ಕತ್ತಾದಲ್ಲಿ ಫೆ. 24ರಿಂದ 28ರವರೆಗೆ ಜರುಗಲಿರುವ ಅಖಿಲ ಭಾರತ 7ನೇ ಎಸ್.ಎಫ್.ಐ. ಸಮ್ಮೇಳನದ ಪೂರ್ವ ಭಾವಿಯಾಗಿ ಜರುಗುತ್ತಿದೆ. ಈ ಸಮಾವೇಶದಲ್ಲಿ ರಾಜ್ಯದ ಶೈಕ್ಷಣಿಕ ರಂಗದ ಸಮಸ್ಯೆಗಳು, ವಿದ್ಯಾರ್ಥಿ ಚಳುವಳಿ ಮತ್ತು ಮುಂದಿನ ಹೋರಾಟ ಕಾರ್ಯಕ್ರಮಗಳು ಅಲ್ಲದೆ ಸಂಘಟನಾತ್ಮಕ ಅಂಶಗಳನ್ನು ಪರಿಶೀಲಿಸಲಿದೆ. ಅಖಿಲಭಾರತ ಸಮ್ಮೇಳನಕ್ಕೆ ಪ್ರತಿ ನಿಧಿಗಳನ್ನು ಆಯ್ಕೆ ಮಾಡಲಾಗುವುದು.

ಫೆ 13ರಂದು ಸಂಜೆ ತುಮಕೂರಿನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿದೆ. ಈ ರಾಜ್ಯ ಸಮಾವೇಶದಲ್ಲಿ 25 0ಕ್ಕೂ ಅಧಿಕ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್‌ರವರು ತಿಳಿಸಿದ್ದಾರೆ.

ಮಾ. 9, 10 ಬಿಜಾಪುರ ಜಿಲ್ಲಾ ಸಮ್ಮೇಳನ

ಬಳ್ಳಾರಿಯಲ್ಲಿ ಜರುಗುವ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ಬಿಜಾಪುರ ಜಿಲ್ಲಾ 4ನೇ ರೈತ ಸಮ್ಮೇಳವು ಮಾರ್ಚ್ 9 ಮತ್ತು 10ರಂದು ನಡೆಯುತ್ತದೆ. ಜಿಲ್ಲಾ ಸಮ್ಮೇಳನದ ಪೂರ್ವಭಾವಿಯಾಗಿ ತಾಲ್ಲೂಕು ಸಮ್ಮೇಳನಗಳನ್ನು ನಡೆಸಲಾಗುತ್ತದೆ. ಫೆ. 20ರಂದು ಸಿಂಧಗಿ ತಾಲ್ಲೂಕು ಸಮ್ಮೇಳನ (ಮೊರಟಗಿ)ಯಲ್ಲಿ, ಇಂಡಿಯ ಸಮ್ಮೇಳನ ಫೆಬ್ರವರಿ 20ರಂದು (ರೈತ ಭವನದಲ್ಲಿ), ಬಸವನ ಬಾಗೇವಾಡಿ ಸಮ್ಮೇಳನ ಮಾರ್ಚ್ 6ರಂದು ಭೂ ಸಮಾವೇಶ ಮಾರ್ಚ್ 8ರಂದು ಬಿಜಾಪುರದಲ್ಲಿ ನಡೆಯುತ್ತದೆ.

ಭೂ ಸಾಗುವಳಿ ಹಕ್ಕುಪತ್ರ ಬರ ಶಾಶ್ವತ ಪರಿಹಾರ ನೀರಾವರಿ ಯೋಜನೆಗಳ ಜಾರಿ ಬೆಳೆಗೆ ನ್ಯಾಯಬೆಲೆ ಮುಂತಾದ ರೈತರ ಸಮಸ್ಯೆ ಕುರಿತು ಸಮ್ಮೇಳನದಲ್ಲಿ ಚರ್ಚಿಸಲಾಗುವುದೆಂದು ಜಿಲ್ಲಾ ಅಧ್ಯಕ್ಷ ಕಾ॥ ಭೀಮಸಿ ಕಲಾದಗಿ ತಿಳಿಸಿದ್ದಾರೆ.

ನಾಗರೀಕ ಸೌಲಭ್ಯಕ್ಕೆ ಸಿ.ಪಿ.ಐ.(ಎಂ) ಒತ್ತಾಯ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬಿಜಾಪುರ ಜಿಲ್ಲಾ ಸಮಿತಿ ಸಭೆ ಕಾ॥ ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಫೆಬ್ರವರಿ 2ರಂದು ಜರುಗಿತು.

ಬಿಜಾಪುರದಲ್ಲಿ ಆರ್.ಎಸ್.ಎಸ್.ನವರು ಎಡ್ಗೇವಾರ್ ಜನ್ಮಶತಾಬ್ಧಿ ಹೆಸರಿನಲ್ಲಿ ಬಾಗಲಕೋಟೆ ಇನ್ನಿತರ ಕಡೆ ಕೋಮುಗಲಭೆ ಪ್ರಚೋದಿಸುತ್ತಿರುವುದನ್ನು ಹಾಗೂ ಬಿಜಾಪುರ, ಗುಲ್ಬರ್ಗಾದ ಚಿಂಚೋಳಿಗಳಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯಗಳನ್ನು ಸಭೆ ಖಂಡಿಸಿತು.

ದೆಹಲಿಯ ಜನನಾಟ್ಯಮಂಚ್‌ನ ಪ್ರಸಿದ್ಧ ಕಲಾವಿದ ಸಫ್ದರ್ ಹಷ್ಮಿ ಹಾಗೂ ಧಾರವಾಡ ಕಾನೂನು ಕಾಲೇಜು ಪ್ರೊ॥ ಶೇಷಾದ್ರಿಯವರ ಕೊಲೆಯನ್ನು ಖಂಡಿಸಿತು. ರಾಜ್ಯ ಸರ್ಕಾರ ಹಾಲಿನ ಬೆಲೆಯನ್ನು ಏರಿಸಿರುವುದನ್ನು ಹಿಂತೆಗೆದುಕೊಳ್ಳಬೇಕೆಂದು ಬಿಜಾಪುರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸಿ ನಗರಸಭೆಗೆ ಚುನಾವಣೆ ನಡೆಸಬೇಕೆಂದು ಒತ್ತಾಯಿಸಲಾಯಿತು. ಮುಳುವಾಡ ಯಾತ ನೀರಾವರಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಹೆಚ್ಚು ಹಣ ಬಿಡುಗಡೆ ಮಾಡಿ ಬರಗಾಲ ನಿವಾರಣೆ ಯೋಜನೆಯನ್ನು ಕಾರ್ಯಗತ ಮಾಡಲು ಒತ್ತಾಯಿಸಿದೆ.

ಸಿರಸಿ ಪುರಸಭೆ ವೈಫಲ್ಯ

ಸಿರಸಿಯ ಪುರಸಭೆ ಆಡಳಿತ ನಾಗರೀಕ ಸೌಲಭ್ಯಗಳನ್ನು ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿ ಈ ಸಮಸ್ಯೆಗೆ ಕೂಡಲೇ ಪರಿಹಾರ ಒದಗಿಸಬೇಕೆಂದು ಸಿರಸಿಯ ಸಿ.ಪಿ.ಐ.(ಎಂ) ಶಾಖೆಯು ಅಸಿಸ್ಟೆಂಟ್ ಕಮೀಷನರ್, ಪುರಸಭಾ ಅಡ್ಮಿನಿಸ್ಟ್ರೇಟರ್‌ರವರಿಗೆ ಒತ್ತಾಯಿಸಿದೆ. ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪ, ಬಸ್ ನಿಲ್ದಾಣಕ್ಕೆ ಶೌಚಾಲಯ, ಒಳಚರಂಡಿ ವ್ಯವಸ್ಥೆ, ಹೋಟೆಲ್ ತಿಂಡಿ ಬೆಲೆ ಇಳಿಸಬೇಕು, ಗುಡಿಸಲು ನಿವಾಸಿಗಳಿಗೆ ಹಕ್ಕು ಪತ್ರ ನೀಡಬೇಕೆಂದು ಒತ್ತಾಯಿಸಿದೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡು "ನಗರಾಭಿವೃದ್ಧಿ ಸಮಿತಿ"ಯನ್ನು ರಚಿಸಿ ಜನತೆಯ ಕುಂದು ಕೊರತೆ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿದೆ.

ಬೆಲೆ ಏರಿಕೆ-ನಿರುದ್ಯೋಗದ ವಿರುದ್ಧ

ರಾಜ್ಯ ವ್ಯಾಪಿ ಚಳುವಳಿಗೆ ಡಿ.ವೈ.ಎಫ್.ಐ. ಕರೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಸಭೆ ಫೆ. 3ರಿಂದ 5 ರವರೆವಿಗೂ ಬೆಂಗಳೂರಿನಲ್ಲಿ ಕಾ॥ ಗಂಗಾಧರ ಕುಷ್ಟಗಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಕೇಂದ್ರ-ರಾಜ್ಯ ಸರ್ಕಾರಗಳು ಜನ ಸಾಮಾನ್ಯರು ನಿತ್ಯ ಬಳಸುವ ಜೀವನಾವಶ್ಯಕ ವಸ್ತುಗಳಾದ ಅಕ್ಕಿ, ಸಕ್ಕರೆ, ಹಾಲು, ಹೋಟೇಲ್ ತಿಂಡಿ, ಸಿನಿಮಾ ದರ ಏರಿಕೆಯನ್ನು ಖಂಡಿಸಿ ಫೆಬ್ರವರಿ 20ರಂದು ರಾಜ್ಯ ವ್ಯಾಪಿ ಧರಣಿ ಸತ್ಯಾಗ್ರಹ ಮೆರವಣಿಗೆ, ಘೇರಾವೋ ನಡೆಸಲು ಕರೆ ನೀಡಿದೆ.

ಯುವಜನತೆಯು ಇಂದು ಎದುರಿಸುತ್ತಿರುವ ಜ್ವಲಂತ ಸಮಸ್ಯೆಯಾದ ನಿರುದ್ಯೋಗದ ವಿರುದ್ಧ ರಾಜ್ಯಾದ್ಯಂತ ಮಾರ್ಚ್ ತಿಂಗಳಲ್ಲಿ ಪ್ರಚಾರ ಪ್ರಕ್ಷೋಭೆ ನಡೆಸಲು, ಮಾರ್ಚ್ 23ರಂದು ಭಗತ್‌ಸಿಂಗ್ ಹುತಾತ್ಮ ದಿನಾಚರಣೆ ಮಾರ್ಚ್ 24ರಿಂದ 28ರವರೆವಿಗೂ ವಿಧಾನಸೌಧದ ಎದುರು ನಿರುದ್ಯೋಗದ ವಿರುದ್ಧ ಧರಣಿ ಸತ್ಯಾಗ್ರಹ ನಡೆಸಿ ಮಾರ್ಚ್ 28ರಂದು ರಾಜ್ಯ ಮಟ್ಟದ ಯುವ ಜನತೆಯ ಬೃಹತ್ "ವಿಧಾನ ಸೌಧ ಚಲೋ" ರ‍್ಯಾಲಿಯೊಂದನ್ನು ಸಂಘಟಿಸಲು ಕರೆ ನೀಡಿದೆ. ಈ ಮಹತ್ವ ಪೂರ್ಣವಾದ ರಾಜ್ಯ ವ್ಯಾಪಿ ಚಳುವಳಿಯನ್ನು ಯಶಸ್ವಿಗೊಳಿಸಲು ಇಂದಿನಿಂದಲೇ ಕಾರ್ಯಕರ್ತರು ದುಡಿಯಬೇಕೆಂದು ಈ ಉದ್ದೇಶ ಸಾಧನೆಯೊಂದಿಗೆ ರಾಜ್ಯದಲ್ಲಿ 1989ನೇ ಸಾಲಿಗೆ 60ಸಾವಿರ ಸದಸ್ಯತ್ವವನ್ನು ನೋಂದಾಯಿಸುವ ಗುರಿಯನ್ನು ಕಾರ್ಯರೂಪಕ್ಕಿಳಿಸಬೇಕೆಂದು ರಾಜ್ಯ ಸಮಿತಿ ಕರೆ ನೀಡಿದೆ.

ಇ.ಎಂ.ಎಸ್.ಗೆ ಸೋದರ ಪಕ್ಷಗಳ ಅಭಿನಂದನೆ

13ನೇ ಸಿ.ಪಿ.ಐ.(ಎಂ) ಮಹಾಧಿವೇಶನದಲ್ಲಿ ಪ್ರಧಾನಕಾರ್ಯದರ್ಶಿಯಾಗಿ ಮರು ಆಯ್ಕೆಗೊಂಡ ಕಾಂ|| ಇ.ಎಂ.ಎಸ್. ನಂಬೂದರಿಪ್ಪಾಡ್‌ರವರನ್ನು ಅಭಿನಂದಿಸಿ ವಿಶ್ವದ ಸೋದರ ಪಕ್ಷಗಳಿಂದ ಬಂದ ಸಂದೇಶಗಳ ಮುಖ್ಯ ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ನಿಮಗೆ ಹಾಗೂ ಸಿ.ಪಿ.ಐ.(ಎಂ)ನ ಎಲ್ಲಾ ಸದಸ್ಯರಿಗೆ ದುಡಿಯುವ ಜನಸಮೂಹಗಳ ತುರ್ತು ಬೇಡಿಕೆಗಳ ಹೋರಾಟದಲ್ಲಿ ಸೋವಿಯತ್-ಭಾರತೀಯ ಸ್ನೇಹವನ್ನು ಬಲಗೊಳಿಸುವಲ್ಲಿ, ಶಾಂತಿ ಮತ್ತು ಎಲ್ಲಾ ದೇಶಗಳ ಜನರ ಭದ್ರತೆಗಾಗಿ ಹೋರಾಟದಲ್ಲಿ ಯಶಸ್ಸು ಕೋರುತ್ತೇನೆ.

ಎಂ. ಗೋರ್ಬಚೇವ್
ಸಿ.ಪಿ.ಎಸ್.ಯು.

ಸಿ.ಪಿ.ಐ.(ಎಂ)ನ ಅತ್ಯುನ್ನತ ಸ್ಥಾನದಲ್ಲಿರುವವರಾಗಿ ನಿಮಗೆ ಸೃಜನಾತ್ಮಕತೆ, ವೈಯುಕ್ತಿಕ ಉಳಿತು, ಶಾಂತಿಯ ಪ್ರಯತ್ನಗಳ ಮತ್ತು ಭಾರತದ ರಾಷ್ಟ್ರೀಯ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರದಲ್ಲಿ ಇನ್ನಷ್ಟು ಯಶಸ್ಸು ಕೋರುತ್ತೇವೆ.

-ಇ.ಹೊನೇಕರ್
ಜರ್ಮನಿ ಸಮಾಜವಾದೀ ಐಕ್ಯತಾ ಪಕ್ಷ

ಹೊಸ ಕೇಂದ್ರ ಸಮಿತಿ ಮತ್ತು ನಿಮ್ಮ ಮುಖಂಡತ್ವದಲ್ಲಿ ಸಿ.ಪಿ.ಐ.(ಎಂ) ಶಾಂತಿ, ರಾಷ್ಟ್ರೀಯ ಸ್ವಾತಂತ್ರ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಗತಿಯ ಹೋರಾಟದಲ್ಲಿ ಹೊಸ ಮತ್ತು ದೊಡ್ಡ ಪ್ರಮಾಣದ ವಿಜಯ ಗಳಿಸುತ್ತದೆಂಬ ದೃಢ ವಿಶ್ವಾಸ ನನಗಿದೆ.

-ಸ್ಗುಯೆನ್ ವಾನ್‌ಲಿನ್
ವಿಯೆಟ್ನಾಂ ಕಮ್ಯೂನಿಸ್ಟ್ ಪಕ್ಷ

ನಿಮ್ಮ ಪಕ್ಷದ ಮಹಾಧಿವೇಶನದ ನಿರ್ಣಯಗಳ ಅನುಷ್ಠಾನದ ಜವಾಬ್ದಾರಿಯುತ ಕೆಲಸದಲ್ಲಿ ನಿಮಗೆ ಹೆಚ್ಚಿನ ಯಶಸ್ಸು ಕೋರುತ್ತೇವೆ.

ಕೇಂದ್ರ ಸಮಿತಿ,
ಕೋರಿಯಾ ಕಾರ್ಮಿಕ ಪಕ್ಷ

ನಮ್ಮೆರಡು ಪಕ್ಷಗಳ ನಡುವಿನ ಸಂಬಂಧಗಳು ನಮ್ಮೆರಡು ಪಕ್ಷಗಳಿಗೆ ಫಲದಾಯಕವಾಗಿ ಮತ್ತು ವಿಶ್ವದಲ್ಲಿ ಸಮಾಜವಾದ ಮತ್ತು ಶಾಂತಿಯ ಗುರಿಸಾಧನೆಗಾಗಿ ಮತ್ತಷ್ಟು ಬೆಳೆಯುತ್ತದೆ ಎಂಬ ದೃಢ ವಿಶ್ವಾಸ ನನಗಿದೆ.

ನಿಕೊಲ್ಸಾ ಸಿಯುಸೆಸ್ಕು
ರುಮಾನಿಯ ಕಮ್ಯೂನಿಸ್ಟ್ ಪಕ್ಷ

ಸರ್ಕಾರದಲ್ಲಿ ನಿರ್ಣಾಯಕ ಪಾಲು ಇರುವ ರಾಜ್ಯಗಳಲ್ಲಿ ಮಾತ್ರವಲ್ಲ ಭಾರತ ಗಣ ತಂತ್ರದ ಎಲ್ಲೆಡೆಯಲ್ಲಿ ದುಡಿಯುವ ಜನತೆಯ ಜೀವನ ಪರಿಸ್ಥಿತಿ ಸುಧಾರಿಸಲು ನಿಮ್ಮ ಪಕ್ಷ ಪಡುತ್ತಿರುವ ಪ್ರಯತ್ನಕ್ಕೆ ನಮಗೆ ಅಪಾರ ಗೌರವವಿದೆ.

ಮಿಲೋಸ್ ಜೇಕಸ್
ಜೆಕೋಸ್ಲೊವಾಕಿಯಾ
ಕಮ್ಯೂನಿಸ್ಟ್ ಪಕ್ಷ

ಸಿ.ಪಿ.ಐ.(ಎಂ) ನಿಮ್ಮ ಮುಖಂಡತ್ವದಲ್ಲಿ ಭಾರತದ ದುಡಿಯುವ ಜನತೆಯ ಹಕ್ಕುಗಳ ಭರವಸೆ ದೊರೆಸುವಲ್ಲಿ ಸಾಮಾಜಿಕ-ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಇನ್ನಷ್ಟು ಗೆಲುವು ಸಾಧಿಸುತ್ತದೆ ಎಂಬ ದೃಢ ವಿಶ್ವಾಸ ನನಗಿದೆ.

-ನಜೀಬುಲ್ಲಾ
ಅಫ್‌ಘಾನಿಸ್ತಾನ ಜನತಾ
ಪ್ರಜಾಪ್ರಭುತ್ವ ಪಕ್ಷ

ನಮ್ಮೆರಡು ಪಕ್ಷಗಳ ನಡುವೆ ಸಹಕಾರ ಇನ್ನಷ್ಟು ಹೆಚ್ಚಿಸಲು ನಾವು ಸಿದ್ಧ ಎಂದು ಈ ಸಂದರ್ಭದಲ್ಲಿ ವ್ಯಕ್ತಪಡಿಸಬಯಸುತ್ತೇವೆ.

-ಕೇಂದ್ರ ಸಮಿತಿ
ಬಲ್ಗೇರಿಯಾ ಕಮ್ಯೂನಿಸ್ಟ್ ಪಕ್ಷ

ನೀವು ಪ್ರಧಾನಕಾರ್ಯದರ್ಶಿಯಾಗಿ ಸಿ.ಪಿ.ಐ.(ಎಂ)ನ ಸ್ಪಷ್ಟ ದೃಷ್ಟಿಯ ಮುಖಂಡತ್ವದಲ್ಲಿ ಎಲ್ಲಾ ಸಂಗಾತಿಗಳು ಸ್ವಾತಂತ್ರ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಗತಿಯ, ಭಾರತೀಯ ಜನತೆಯ ಜೀವನ ಪರಿಸ್ಥಿತಿ ಉತ್ತಮ ಪಡಿಸುವ ಉದ್ದೇಶದ ನಿಮ್ಮ 13ನೇ ಮಹಾಧಿವೇಶನದ ನಿರ್ಣಯಗಳನ್ನು ಜ್ಯಾರಿಗೊಳಿಸುವಲ್ಲಿ ಹೆಚ್ಚೆಚ್ಚು ಯಶಸ್ಸು ಗಳಿಸುತ್ತಾರೆಂಬ ದೃಢ ವಿಶ್ವಾಸ ನಮಗಿದೆ.

-ಹೆಂಗ್ ಸಮ್ರಿನ್
ಕಂಪೂಚಿಯಾ ಜನತಾ ಕ್ರಾಂತಿಕಾರಿ ಪಕ್ಷ

ನಿಮ್ಮ ಮುಖಂಡತ್ವದಲ್ಲಿ ಸಿ.ಪಿ.ಐ.(ಎಂ) ಪಕ್ಷದೊಳಗೆ ಜನಸಮೂಹಗಳನ್ನು ಸೇರಿಸಿಕೊಳ್ಳುವಲ್ಲಿ, ಭಾರತದ ಕ್ರಾಂತಿಕಾರಿ ಮತ್ತು ಪ್ರಗತಿಪರ ಧೋರಣೆಗಳನ್ನು ಬಲಗೊಳಿಸುವಲ್ಲಿ ಇನ್ನಷ್ಟು ಯಶಸ್ಸುಗಳಿಸುತ್ತದೆ ಎಂಬ ಭರವಸೆ ನಮಗಿದೆ.

-ಇರಾನಿಯನ್ ಜನತಾ
ಫೆದಾಯೀಂ
(ಬಹು ಸಂಖ್ಯಾತ)-ಭಾರತ

ತ್ರಿಪುರಾ; ವಿಧಾನಸಭೆಗೆ ಜನತೆಯ ಲಗ್ಗೆ

ಅಗರ್ತಲಾ, ಜನವರಿ 6. ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಕೂಟದ ದುರಾಡಳಿತ, ದಮನ, ಅತ್ಯಾಚಾರಗಳ ವಿರುದ್ಧ ತ್ರಿಪುರಾ ಜನತೆಯ ಹೆಚ್ಚುತ್ತಿರುವ ಪ್ರತಿಭಟನೆ ದೊಡ್ಡ ಪ್ರಮಾಣದಲ್ಲಿ ಅಭಿವ್ಯಕ್ತಗೊಂಡಿತು. ಅಂದು ಯುವಕರು, ಮುದುಕರು, ಬುಡಕಟ್ಟು ಜನಗಳು, ಇತರರು, ಹಿಂದೀ ಭಾಷಿಕ ಕೂಲಿಕಾರರು, ಮಣಿಪುರಿಗಳು, ಮುಸ್ಲಿಮರು, ಬಡ ರೈತರು, ಝೂಮಿಯಾಗಳು ಎಲ್ಲಾ ಅಪಾರ ಸಂಖ್ಯೆಯಲ್ಲಿ ವಿಧಾನಸಭೆಯತ್ತ ಸಾಗರದಂತೆ ಹರಿದುಬಂದರು. ಕಾಂಗ್ರೆಸ್(ಐ)ನ ಎಲ್ಲಾ ಅಡ್ಡಿ-ಆತಂಕಗಳನ್ನು, ಕಲ್ಲು ತೂರಾಟ, ಪಟಾಕಿ ಸಿಡಿತ, ಸ್ಫೋಟಕಗಳ ಸಿಡಿತ ಯಾವುದನ್ನೂ ಲೆಕ್ಕಿಸದೆ ವಿಧಾನಸಭೆಗೆ ಮುತ್ತಿಗೆ ಹಾಕಿದರು. ಕಾಂಗ್ರೆ ಗೂಂಡಾಪಡೆಗಳ ಹಲ್ಲೆಗಳಿಂದ 60 ಮಂದಿ ಗಾಯಗೊಂಡರು. 5 0ವರ್ಷದ ಕಾಮ್ರೇಡ್ ಅಲ್ಲಾಸ್ ಮಿಯಾ ಕಾಂಗ್ರೆ ಗೂಂಡಾ ಆಕ್ರಮಣಕ್ಕೆ ಬಲಿಯಾದರು.

ನಂತರ ನಡೆದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ನೃಪೇನ್ ಚಕ್ರವರ್ತಿಯವರು ತ್ರಿಪುರಾದಲ್ಲಿ ಹೇಗೆ ಜೀವಿಸುವ ಹಕ್ಕಿನ ಮೇಲೆಯೇ ಆಕ್ರಮಣ ಆರಂಭವಾಗಿದೆ ಎಂದು ವಿವರಿಸಿದರು. ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಕೂಟ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು ತುಳಿದುಹಾಕುತ್ತಿರುವುದು ಮಾತ್ರವಲ್ಲ, ರಾಜ್ಯದ ಖಜಾನೆಯನ್ನು ಬರಿದುಮಾಡುತ್ತಿದೆಯೆಂದು ಅವರು ಹೇಳಿದರು. ಈ ಕೂಟ ಅಧಿಕಾರಕ್ಕೆ ಬರುವಾಗ ಖಜಾನೆಯಲ್ಲಿ 36 ಕೋಟಿ 72ಲಕ್ಷ ರೂ. ಇದ್ದದ್ದು ಹತ್ತು ತಿಂಗಳಲ್ಲಿ 10 ಲಕ್ಷ ರೂ.ಗೆ ಇಳಿದಿದೆ.

ತ್ರಿಪುರಾದ ಇತ್ತೀಚಿನ ಇನ್ನೊಂದು ಗಮನಾರ್ಹ ಬೆಳವಣಿಗೆಯೆಂದರೆ ತಮ್ಮ ವಿರೋಧಿಗಳು ಕಾಂಗ್ರೆಸ್(ಐ) ಥೂಬಿಟ್ಟ ಸಮಾಜ-ವಿರೋಧಿಶಕ್ತಿಗಳು ಈಗ ಕಾಂಗ್ರೆಸ್(ಐ)ನೊಳಗಿನ ಪ್ರತಿದ್ವಂದ್ವಿಗಳ ಮೇಲೆ ತಮ್ಮ ಲಾಠಿ ಬೀಸಲಾರಂಭಿಸಿದ್ದಾರೆ. ಈ ಅಂತರಿಕ ಕಚ್ಚಾಟಗಳು ಇತ್ತೀಚೆಗೆ ಗಂಭೀರ ಮಟ್ಟ ತಲುಪಿದೆ. ವ್ಯಕ್ತಿಗಳ ಅಪಹರಣ, ಘರ್ಷಣೆ ಹಾಗೂ ಕೊಲೆಗಳೂ ನಡೆಯುತ್ತಿವೆ.

ಅಗರ್ತಲಾದಿಂದ 30 ಕಿ.ಮೀ. ದೂರದ ಗೋಲಾಘಾಟಿ "ಅಭಿವೃದ್ಧಿ ಸಮಿತಿ"ಯ ಅಧ್ಯಕ್ಷ ಸುಮಂತರಾಯ್ ಕಾಂಗ್ರೆಸ್(ಐ)ನಲ್ಲಿ ಮುಖ್ಯಮಂತ್ರಿಗಳ ಬಣಕ್ಕೆ ಸೇರಿದವರು. ಗೃಹ ಮಂತ್ರಿಗಳ ಬಣಕ್ಕೆ ಸೇರಿದ ಗುಂಪೊಂದು ಸುಮಂತರಾಯ್ ಮನೆಗೆ ಹೋದಾಗ ಆತ ಇರದಿದ್ದುದನ್ನು ಕಂಡು ಕಲ್ಲುಗಳನ್ನು ತೂರಿ ಬಾಗಿಲು, ಕಿಟಕಿಗಳನ್ನು ಮುರಿದು ಹಳ್ಳಿಯಲ್ಲಿ ಭಯದ ವಾತಾವರಣ ಮೂಡಿಸಿದ್ದಾರೆ.

ಇನ್ನೊಂದು ಘಟನೆಯಲ್ಲಿ ಅರ್ಮಿತಾ ದಾಸ್ ಎಂಬ ಕಾಂಗ್ರೆ ಬೆಂಬಲಿಗರನ್ನು ಚಿತ್ರಹಿಂಸೆಗೊಳಪಡಿಸಿದ್ದಕ್ಕಾಗಿ ನಾಲ್ಕು ಕಾಂಗ್ರೆ ಬೆಂಬಲಿಗರನ್ನು ಪೊಲೀಸರು ಬಂಧಿಸಿದ್ದಾರೆ. ಬೆಲೋನಿಯಾ ದಲ್ಲಂತೂ ಒಂದು ಕಾಂಗ್ರೆ ಬಣದ ಬೆಂಬಲಿಗರು ಇನ್ನೊಂದು ಗುಂಪಿನವರನ್ನು ಅಪಹರಿಸುವುದು, ಕೊಲೆ ಮಾಡುವುದು ಸಾಮಾನ್ಯ ಸಂಗತಿಯಾಗುತ್ತಿದೆ.

ಪಂಜಾಬ್; ರಾಜ್ಯಪಾಲ ಆಡಳಿತದ ಅಡ್ಡಿ-ಆತಂಕಗಳನ್ನು ಮೀರಿ

ಖಲಿಸ್ತಾನಿಗಳು ನಡೆಸುವ ಅತ್ಯಾಚಾರಗಳನ್ನು ನಿಲ್ಲಿಸುವಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ಆಳ್ವಿಕೆ, ಸ್ವತಃ ರಾಜಕೀಯವಾಗಿ, ಆಡಳಿತಾತ್ಮಕವಾಗಿ ವಿಫಲಗೊಂಡಿವೆ ಮಾತ್ರವಲ್ಲ, ದೇಶದ ಐಕ್ಯತೆಗಾಗಿ ಹೋರಾಡುತ್ತಿರುವ ಜನ ಸಮೂಹಗಳು ಕೂಡಾ ಆ ಪ್ರಯತ್ನ ಮಾಡದಂತೆ ಅಡ್ಡಿ-ಆತಂಕಗಳನ್ನೊಡ್ಡುತ್ತಿದೆ. ರಾಜ್ಯಪಾಲರ ಆಡಳಿತವಂತೂ ಕದಡಿದ ಪರಿಸ್ಥಿತಿಯ ದುರ್ಲಾಭ ಪಡೆದು ಜನ ಸಮೂಹಗಳ ನ್ಯಾಯಪೂರ್ಣ ಬೇಡಿಕೆಗಳನ್ನು ನಿರಾಕರಿಸುತ್ತಿದೆ ಮಾತ್ರವಲ್ಲ, ಅವರ ಮೇಲೆ ಹೊಸ-ಹೊಸ ಹೊರೆಗಳನ್ನು ಹಾಕುತ್ತಿದೆ.

ಇಂತಹ [illegible] ಹೇರಿ ಪಂಜಾಬ್ ಶಾಲಾ ಶಿಕ್ಷಣ ಮಂಡಳಿ ಪರೀಕ್ಷೆ ಶುಲ್ಕ ಏರಿಸಿದುದರ ವಿರುದ್ಧ ಡಿಸೆಂಬರ್ 15 ರಂದು ರಾಜ್ಯಾದ್ಯಂತ ವಿದ್ಯಾರ್ಥಿಗಳು ಸಂಪೂರ್ಣ ಮುಷ್ಕರ ಆಚರಿಸಿದರು. ಎಸ್.ಎಫ್.ಐ. ಮತ್ತು ಎ.ಐ.ಎಸ್.ಎಫ್. ಮತ್ತು ಪಿ.ಎಸ್.ಯು.ನ ಜಂಟೀ ಕರೆಯ ಮೇರೆಗೆ ಈ ಮುಷ್ಕರ ನಡೆಯಿತು. ಹಲವೆಡೆ ರಾಜ್ಯಪಾಲರ ಆಡಳಿತ ಅನಗತ್ಯ ಲಾಠೀ ಪ್ರಹಾರ ನಡೆಸಿ ಮತ ಪ್ರದರ್ಶನ ಮುರಿಯಲು ವಿಫಲ ಪ್ರಯತ್ನ ನಡೆಸಿತು.

ಮರುದಿನ ಡಿಸೆಂಬರ್ 16ರಂದು ಪಂಜಾಬಿನ ಕಾರ್ಮಿಕ ವರ್ಗ ಬೆರೆಯೇ[illegible]ಗಿ, ಕನಿಷ್ಠಕೂಲಿ ಹೆಚ್ಚಳ, ನ್ಯಾಯಬೆಲೆ ಅಂಗಡಿಗಳಲ್ಲಿ ಜೀವನಾವಶ್ಯಕ ಸಾಮಗ್ರಿಗಳ ಪೂರೈಕೆ, ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರ, ಬೆಲೆ ಏರಿಕೆಗೆ ಪ್ರತಿಯಾಗಿ ನೂರಕ್ಕೆ ನೂರು ತುಟ್ಟಿಭತ್ಯೆ, ಕಾರ್ಮಿಕ ಸಂಘಗಳ ಚಟುವಟಿಕೆಗಳ ವಿರುದ್ಧ ಸಿ.ಆರ್.ಪಿ. ಪ್ರಯೋಗ ರದ್ದು ಇತ್ಯಾದಿ ಬೇಡಿಕೆಗಳ ಮೇಲೆ ರಾಜ್ಯಾದ್ಯಂತ ಒಂದು ದಿನ ಮುಷ್ಕರ ನಡೆಸಿತು. ಸಿ.ಐ.ಟಿ.ಯು. ಹಾಗೂ ಎ.ಐ.ಟಿ.ಯು.ಸಿ. ಕರೆಯ ಮೇರೆಗೆ ಈ ಮುಷ್ಕರ ನಡೆಯಿತು.

ಡಿಸೆಂಬರ್ 9ರಂದು ಇಟ್ಟಿಗೆಗೂಡು ಕಾರ್ಮಿಕರ ರಾಜ್ಯಮಟ್ಟದ ಸಮಾವೇಶ ನಡೆಯಿತು.

ಕ್ಯೂಬಾ ಕ್ರಾಂತಿಯ 30ನೇ ವಾರ್ಷಿಕೋತ್ಸವ

195 9ರಲ್ಲಿ ಸರ್ವಾಧಿಕಾರಿ ಬಾಟಿಸ್ಟಾ ಕ್ಯೂಬಾ ಬಿಟ್ಟೋಡಿದಾಗ ಫಿಡೆಲ್ ಕಾಸ್ಟ್ರೋ "ನಾವೀಗ ಹಸಿವು, ಬಡತನ, ಅಜ್ಞಾನ ಮತ್ತು ಅನಕ್ಷರತೆಯ ಸರ್ವಾಧಿಕಾರಿಯನ್ನು ಉರುಳಿಸುತ್ತೇವೆ" ಎಂದಿದ್ದರು. 1989ರಲ್ಲಿ ಕ್ಯೂಬಾ ಕ್ರಾಂತಿಯ 30ನೇ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಾ ಕ್ಯೂಬಾದಲ್ಲಿ ಈಗ ಅನಕ್ಷರತೆಯ ದರ 1.5 %ಕ್ಕಿಂತಲೂ ಕಡಿಮೆ ಎಂದು ಜಗತ್ತಿಗೆ ಸಾರಿದರು. ಈ 1.5 % ಎಂದರೆ ಕ್ರಾಂತಿಯ ನಂತರ ಅಕ್ಷರಾಭ್ಯಾಸ ಕಲಿಯುವುದಕ್ಕೆ ತುಂಬಾ ವಯಸ್ಸಾದವರದಷ್ಟೆ.

ಕ್ರಾಂತಿಯ ಮೂವತ್ತು ವರ್ಷಗಳಲ್ಲಿ ಮಕ್ಕಳ ಮರಣದ 1.19%ಕ್ಕಿಳಿದಿದೆ. (ಭಾರತದಲ್ಲಿ ಇದು 9.7%). 195 3ರಲ್ಲಿ 6000 ಡಾಕ್ಟರರಿದ್ದರೆ ಈಗ 35 ಸಾವಿರ ಡಾಕ್ಟರುಗಳಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆ ಎಂಟು ಪಾಲು, ಸಿಮೆಂಟ್ ಉತ್ಪಾದನೆ ಐದು ಪಟ್ಟು, ಗೊಬ್ಬರದ ಉತ್ಪಾದನೆ ಐದು ಪಟ್ಟು, ಹಣ್ಣುಗಳ ಉತ್ಪಾದನೆ 17 ಪಟ್ಟು ಹೆಚ್ಚಿದೆ.

ಇದು ಸಾಧ್ಯವಾದದ್ದು ಆಧುನಿಕ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಫಲಗಳನ್ನು ಸಂಪೂರ್ಣ ಸಮಾಜದ ಹಕ್ಕನ್ನಾಗಿ ಮಾಡುವ ಸಮಾಜವಾದೀ ವ್ಯವಸ್ಥೆಯಿಂದಾಗಿ ಎಂಬುದು ನಿರ್ವಿವಾದ. ಆದರೆ ಕ್ಯೂಬಾ ಕ್ರಾಂತಿಯ ಸಾಧನೆ ಇಷ್ಟೇ ಅಲ್ಲ. ವಿಶ್ವದ ಪ್ರತಿಗಾಮಿಗಳ ಬೇಟೆನಾಯಿಗಳಿಂದ, ಅಮೆರಿಕನ್ ಸಾಮ್ರಾಜ್ಯಶಾಹಿಯಿಂದ ಕೇವಲ 90 ಮೈಲು ದೂರದಿಂದ ಅದರ ಮಿಲಿಟರಿ ಬೆದರಿಕೆಗಳು ಬುಡಮೇಲು ಕೃತ್ಯಗಳು, ಆರ್ಥಿಕ ದಿಗ್ಬಂಧನೆಗಳಿಗೆ ಸವಾಲೆಸೆದು ಕ್ರಾಂತಿಯನ್ನು ಬಲಿಷ್ಠಗೊಳಿಸುತ್ತಾ ಬಂದ ಕ್ಯೂಬಾ ಲ್ಯಾಟಿನ್ ಅಮೆರಿಕಾ ಮತ್ತು ಮಧ್ಯ ಅಮೆರಿಕಾದಲ್ಲಿ ಕ್ರಾಂತಿಕಾರೀ ಆತಿ ಎಬ್ಬಿಸಿತು.

ಇಂತಹ ಕ್ರಾಂತಿಯ ಮೂವತ್ತನೇ ವಾರ್ಷಿಕೋತ್ಸವವನ್ನು ಸಹಜವಾಗಿಯೇ ಕ್ಯೂಬನ್ನರು ಮತ್ತು ವಿಶ್ವದ ಪ್ರಗತಿಪರ ಶಕ್ತಿಗಳು ಅತ್ಯಂತ ಹೆಮ್ಮೆಯಿಂದ, ಹರ್ಷೋಲ್ಲಾಸದಿಂದ ಆಚರಿಸಿದರು. ಕ್ಯೂಬನ್ನರು ಈ ಆಚರಣೆಗೆ 298 ಪಕ್ಷಗಳ, ಆಂದೋಲನಗಳ ಮತ್ತು 102 ಸರ್ಕಾರಗಳ 875 ಪ್ರತಿನಿಧಿಗಳನ್ನು ಆಹ್ವಾನಿಸಿದರು. ಸಿ.ಪಿ.ಐ.(ಎಂ) ಪರವಾಗಿ ಕೇಂದ್ರ ಸಮಿತಿ ಸದಸ್ಯ ಸೀತಾರಾಂ ಯೆಚೂರಿ ಇದರಲ್ಲಿ ಭಾಗವಹಿಸಿದ್ದರು. ಸಿ.ಪಿ.ಐ.ನಿಂದ ಚತುರಾನನ್‌ಮಿಶ್ರ, ಕಾಂಗ್ರೆಸ್(ಐ)ನಿಂದ ವಿ.ಎನ್.ಗಾಡ್ಗೀಳ್ ಮತ್ತು ಸರ್ಕಾರದ ಪತಿಯಿಂದ ಕೆ.ಕೆ.ತಿವಾರಿ ಹಾಜರಿದ್ದರು.

ಮತ್ತೆ ಸಾಮ್ರಾಜ್ಯಶಾಹಿಗಳು ಕಾಲು ಕೆದರುತ್ತಿದ್ದಾರೆ

ಉತ್ತರ ಕೋರಿಯಾ ಹಲವಾರು ಶಾಂತಿ ಪ್ರಸ್ತಾಪಗಳನ್ನು ಮಂಡಿಸಿದ್ದರೂ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಮತ್ತು ಅವರ ದಕ್ಷಿಣಕೋರಿಯಾ ಬಾಲಬಡುಕರು ಕೊರಿಯಾ ಪ್ರಾಯದ್ವೀಪದಲ್ಲಿ ಯುದ್ಧೋನ್ಮಾದ ಹಾಗೂ ಮಿಲಿಟರಿ ಸಂಘರ್ಷದ ವಾತಾವರಣವನ್ನು ಕಾದುಕೊಳ್ಳಲು ಸರ್ವಪ್ರಯತ್ನ ನಡೆಸುತ್ತಿದ್ದಾರೆ. ಮತ್ತೊಮ್ಮೆ ಅಲ್ಲಿ ತಮ್ಮ "ಟೀಮ್ ಸ್ಪಿರಿಟ್" ಮಿಲಿಟರಿ ಕವಾಯತುಗಳನ್ನು ನಡೆಸಲು ನಿರ್ಧರಿಸಿದ್ದಾರೆ. 20ಸಾವಿರ ಅಮೆರಿಕನ್ ಪಡೆಗಳೂ ಸೇರಿದಂತೆ 2ಲಕ್ಷ ಸೈನಿಕರು ಇದರಲ್ಲಿ ಭಾಗವಹಿಸುತ್ತಿದ್ದಾರೆ. ಜಪಾನಿನ ಉನ್ನತ ಸೈನ್ಯಾಧಿಕಾರಿಗಳೂ "ಭೇಟಿ"ಯ ನೆಪದಲ್ಲಿ ಇದರಲ್ಲಿ ಭಾಗವಹಿಸುತ್ತಿದ್ದಾರೆ.

ಉತ್ತರ ಮತ್ತು ದಕ್ಷಿಣ ಕೊರಿಯಾದಲ್ಲಿ ಹೆಚ್ಚುತ್ತಿರುವ ಜನತೆಯ ಶಾಂತಿಯ ಆಕಾಂಕ್ಷೆಗಳನ್ನು ಈ ಕದಡಿಸಲು ಪ್ರಯತ್ನ ಎಂದು ತಿಳಿದುಬಂದಿದೆ.

ದೆಹಲಿ; ಕನಿಷ್ಠ ವೇತನಕ್ಕಾಗಿ ಹೋರಾಟ ಮುಂದುವರಿಯುತ್ತಿದೆ

ಏಳು ದಿನಗಳ ಮುಷ್ಕರದ ನಂತರವೂ ಕನಿಷ್ಠ ವೇತನಕ್ಕಾಗಿ ದೆಹಲಿ ಹಾಗೂ ಘಾಝಿಯಾಬಾದ್ ಕಾರ್ಮಿಕರ ಹೋರಾಟ ಮುಂದುವರಿಯುತ್ತಿದೆ. ಇತ್ತೀಚೆಗೆ ದೆಹಲಿಯ ಕನಿಷ್ಠ ಕೂಲಿ ಸಲಹಾ ಮಂಡಳಿಯ ಸಭೆ ನಡೆಯುತ್ತಿದ್ದಾಗ ಸಾವಿರಾರು ಕಾರ್ಮಿಕರು ದೆಹಲಿ ಆಡಳಿತದ ನಿರ್ಲಕ್ಷ್ಯದ ವಿರುದ್ಧ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರು ಇತ್ತೀಚೆಗೆ ಹುತಾತ್ಮರಾದ ಸಫ್ದರ್ ಹಶ್ಮಿಯವರ ಭಾವಚಿತ್ರಗಳನ್ನು ಹಿಡಿದುಕೊಂಡಿದ್ದರು. ಹಶ್ಮಿಯವರ ಕೊನೆಯ ಬೀದಿ ನಾಟಕ 'ಹಲ್ಲಾ ಬೋಲ್' ಅವರ ಏಳಂಶದ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದ್ದ ನಾಟಕವಾಗಿತ್ತು. ಜನನಾಟ್ಯ ಮಂಚ್‌ನ ಕಲಾವಿದರು ಆ ನಾಟಕವನ್ನು ಮತ್ತೆ ಅಲ್ಲಿ ಪ್ರದರ್ಶಿಸಿದರು.

ದೆಹಲಿಯಲ್ಲಿ ಚುನಾವಣೆಗಳ ಮುಂದೂಡಿಕೆಯನ್ನೂ ವಿರೋಧಿಸಿ ಕೂಡಾ ಕಾರ್ಮಿಕರು ಘೋಷಣೆ ಕೂಗಿದರು.

ಮಾರ್ಚ್ 15 ರಂದು ದೆಹಲಿ ಮತ್ತು ಘಾಝಿಯಾಬಾದ್‌ನ ಲಕ್ಷಾಂತರ ಕಾರ್ಮಿಕರು 'ಸಂಸತ್ ಚಲೋ' ಕಾರ್ಯಾಚರಣೆಯನ್ನು ಹೋರಾಟದ ಮುಂದಿನ ಹಂತವಾಗಿ ನಡೆಸಲು ನಿರ್ಧರಿಸಿದ್ದಾರೆ.

ಒರಿಸ್ಸಾ; ಮಹಿಳೆಯರ ಮತ ಪ್ರದರ್ಶನ

ಡಿಸೆಂಬರ್ 20ರಂದು ಭುವನೇಶ್ವರದಲ್ಲಿ ಸಾವಿರಾರು ಮಹಿಳೆಯರು ಮಹಿಳೆಯರಿಗೆ ಸಮಾನ ಹಕ್ಕುಗಳು, ಸಮಾನ ವೇತನ, ವರದಕ್ಷಿಣೆ-ವಿರೋಧಿ ಕಾನೂನುಗಳ ಕಟ್ಟುನಿಟ್ಟಾದ ಜ್ಯಾರಿ, ವಧುಗಳ ಕೊಲೆ ಮಾಡುವವರಿಗೆ, ಮಾನಭಂಗ ನಡೆಸಿದವರಿಗೆ ಶಿಕ್ಷೆ ಹಾಗೂ ಮಹಿಳೆಯರ ಮೇಲೆ ಅತ್ಯಾಚಾರಗಳ ನಿಲುಗಡೆ ಒತ್ತಾಯಿಸಿ ದೊಡ್ಡ ಮೆರವಣಿಗೆ ನಡೆಸಿ ನಂತರ ಸೆಕ್ರೆಟಾರಿಯೇಟ್ ಕಟ್ಟಡದ ಎದುರು ಧರಣಿ ಮತ್ತು ಪ್ರದರ್ಶನ ನಡೆಸಿದರು. ಎ.ಐ.ಡಿ.ಡಬ್ಲ್ಯೂ.ಎ.ನ ರಾಜ್ಯ ಘಟಕದ ನೇತೃತ್ವದಲ್ಲಿ ಈ ಚಳುವಳಿ ನಡೆಯಿತು. ಮುಖ್ಯಮಂತ್ರಿಗಳಿಗೆ ಹನ್ನೆರಡು ಬೇಡಿಕೆಗಳ ಮನವಿ ಸಲ್ಲಿಸಲಾಯಿತು

ಸಂಘ ಕಟ್ಟಿಕೊಳ್ಳುವ ಹಕ್ಕಿಗಾಗಿ ಹೋರಾಟ

ಕಳೆದ ನಾಲ್ಕು ದಶಕಗಳಿಂದ ತಮ್ಮದೇ ಸಂಘ ಕಟ್ಟಿಕೊಳ್ಳುವ ಹಕ್ಕಿನಿಂದ ಸದರ್ನ್ ರೋಡ್‌ವೇಸ್ ಕಂಪೆನಿಯ ಕಾರ್ಮಿಕರನ್ನು ವಂಚಿತಗೊಳಿಸಲಾಗಿತ್ತು. ಅವರ ಮೇಲೆ ಆಡಳಿತವೇ ತನ್ನ ಸಂಘವನ್ನು ಹೇರಿತ್ತು. ಇತ್ತೀಚೆಗೆ ಕಾರ್ಮಿಕರು ತಮ್ಮದೇ ಸಂಘ ಕಟ್ಟಿಕೊಂಡಾಗ ಆಡಳಿತ ವರ್ಗ ಸಸ್ಪೆನ್ಷನ್, ವಜಾ, ಲಾಕ್‌ಔಟ್ ಮುಂತಾದ ಕ್ರಮಗಳನ್ನು ಪ್ರಯೋಗಿಸಿ ಬೆದರಿಸಲು ಪ್ರಯತ್ನಿಸಲಾರಂಭಿಸಿದೆ.

KRNW / BGS-312 MAG(2) PRB DECR 31

ವಿಕೇಂದ್ರೀಕರಣ ಲೇಶ ಮಾತ್ರವೂ ಇಲ್ಲ-ಪಾಲಿಟ್‌ಬ್ಯೂರೋ

ಪುಟ 1ರಿಂದ

ಮುರುಕಲು ಕಾಂಗ್ರೆಸ್(ಐ)

ತಮಿಳುನಾಡು ಚುನಾವಣೆ ಕಾಂಗ್ರೆಸ್(ಐ)ನ ಮುರುಕಲು ಮನೆಯನ್ನು ಇನ್ನಷ್ಟು ಶಿಥಿಲಗೊಳಿಸಿದೆ. ಮಧ್ಯಪ್ರದೇಶ, ಬಿಹಾರ, ಗುಜರಾತ್, ರಾಜಸ್ಥಾನ್ ಎಲ್ಲೆಡೆ ಕಾಂಗ್ರೆಸ್(ಐ) ಮುಖಂಡತ್ವದ ಅಧಿಕಾರವಾಣಿ ತ್ವರಿತವಾಗಿ ಕ್ಷೀಣಗೊಳ್ಳುತ್ತಿದೆ.

ಇವೆಲ್ಲ ಕಾಂಗ್ರೆಸ್(ಐ) ವಿರುದ್ಧ ಜಾತ್ಯಾತೀತ ಮತ್ತು ಎಡ ಶಕ್ತಿಗಳು ಶೀಘ್ರವಾಗಿ ಏಕೀಕರಣಗೊಳ್ಳಬೇಕಾದುದರ ಮಹತ್ವವನ್ನು ಸಾರಿ ಹೇಳುತ್ತಿದೆ. ಇದಕ್ಕಾಗಿ ತಕ್ಷಣ ಜನ ಸಮೂಹಗಳನ್ನು ಕಾರ್ಯಾಚರಣೆಗಿಳಿಸುವತ್ತ ಗಮನ ಕೇಂದ್ರೀಕರಿಸಬೇಕು. ಅವರ ಬೇಡಿಕೆಗಳನ್ನು ಪ್ರತಿಪಾದಿಸಬೇಕು. ಮತ್ತು ಅವರ ಅಸಂತೃಪ್ತಿಯನ್ನು ಹೆಚ್ಚೆಚ್ಚಾಗಿ ಕಾಂಗ್ರೆಸ್(ಐ)ನ್ನು ವಿರೋಧಿಸುವತ್ತ ಕೇಂದ್ರೀಕರಿಸಬೇಕೆಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ.

ದುರದೃಷ್ಟವಶಾತ್ ಈಗಲೂ ಪ್ರಮುಖ ವಿರೋಧಿ ಪಕ್ಷಗಳು ಜನಸಮೂಹಗಳಿಗೆ ಮುಖಂಡತ್ವ ನೀಡುವ ಪ್ರಯತ್ನ ನಡೆಸಲು ಅಸಮರ್ಥವಾಗಿದೆ. ಈ ನಡುವೆ ಕೋಮುವಾದಿ, ಜಾತಿವಾದಿ, ಕರಾಳ ಶಕ್ತಿಗಳು ಮುಖ್ಯವಾಗಿ ಹಿಂದಿ-ಭಾಷಿಕ ಪ್ರದೇಶಗಳಲ್ಲಿ ರಂಗ ಪ್ರವೇಶಿಸುತ್ತಿವೆ. ಕಾಂಗ್ರೆಸ್(ಐ)ಗೆ ಪ್ರಜಾಪ್ರಭುತ್ವವಾದಿ ವಿರೋಧವನ್ನು ಒಡೆಯುತ್ತಿವೆ. ಈ ಅಪಾಯವನ್ನು ಇನ್ನೂ ಅರಿತುಕೊಳ್ಳುತ್ತಿಲ್ಲ.

ಜನತೆಯ ಅಸಂತೃಪ್ತಿಯ ಅಭಿವ್ಯಕ್ತಿಯಲ್ಲಿ, ಮಧ್ಯಪ್ರವೇಶಿಸಿ, ಕೋಮು ಶಕ್ತಿಗಳನ್ನು ದೂರಸರಿಸಿ ಈ ಅಸಂತೃಪ್ತಿ ಪ್ರಜಾಸತ್ತಾತ್ಮಕ ಮತ್ತು ಕಾಂಗ್ರೆಸ್(ಐ) ದಾರಿಯಲ್ಲಿ ಸಾಗದಂತೆ ಸಿ.ಪಿ.ಐ.(ಎಂ) ಮತ್ತೊಮ್ಮೆ ಜಾತ್ಯಾತೀತ ಪಕ್ಷಗಳನ್ನು ಮನವಿ ಮಾಡಿಕೊಳ್ಳುತ್ತದೆ ಎಂದಿರುವ ಈ ಹೇಳಿಕೆ ಎಡ ಐಕ್ಯತೆಯು, ಎಡ ಶಕ್ತಿಗಳು ಮತ್ತು ರಾಷ್ಟ್ರೀಯ ರಂಗದಂತಹ ಜಾತ್ಯಾತೀತ ಶಕ್ತಿಗಳ ನಡುವೆ ಸಮಾನ ತಿಳುವಳಿಕೆಯ ಅಗತ್ಯವನ್ನು ಒತ್ತಿ ಹೇಳಿದೆ.

ವಿರೋಧ ಕೇಂದ್ರೀಕರಿಸುವ ಸಾಧನ

13ನೇ ಮಹಾಧಿವೇಶನ ರಾಷ್ಟ್ರೀಯ ರಂಗ ಹಾಗೂ ಜನತಾದಳದ ರಚನೆ ವಿರೋಧಿ ಜಾತ್ಯಾತೀತ ಪಕ್ಷಗಳ ಐಕ್ಯತೆಯನ್ನು ಬಲಪಡಿಸುವ ಕ್ರಮವೆಂದು ಸ್ವಾಗತಿಸಿದೆ. ಕಾಂಗ್ರೆಸ್(ಐ) ವಿರುದ್ಧ ಹೋರಾಟದಲ್ಲಿ ವಿರೋಧಿ ಜಾತ್ಯಾತೀತ ಶಕ್ತಿಗಳನ್ನು ಕೇಂದ್ರೀಕರಿಸುವ ಸಾಧನ ರಾಷ್ಟ್ರೀಯರಂಗ ಎಂದು ಸಿ.ಪಿ.ಐ.(ಎಂ) ಅದನ್ನು ಬೆಂಬಲಿಸಿದೆ. ಆದರೂ ರಾಷ್ಟ್ರೀಯ ಆಂದೋಲನ ಸಮಿತಿಯನ್ನು ಆರಂಭಿಸಿದವರು ಈ ಬಗ್ಗೆ ಮೊದಲೇ ಸ್ಪಷ್ಟೀಕರಣ ನೀಡಿದ್ದರು. ಅದೊಂದು 3ನೇ ರಂಗವೆಂಬ ತಪ್ಪು ಭಾವನೆ ಹರಡಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಪಾಲಿಟ್‌ಬ್ಯೂರೋ ಖೇದ ವ್ಯಕ್ತಪಡಿಸಿದೆ.

ಜಾತ್ಯಾತೀತ ಶಕ್ತಿಗಳ ನಡುವೆ ಸಮಾನ ತಿಳುವಳಿಕೆಯ ಅಗತ್ಯದ ಹಿನ್ನೆಲೆಯಲ್ಲಿ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್‌ಯೇತರ ಮುಖ್ಯಮಂತ್ರಿಗಳ ಸಭೆಯ ಬೇಡಿಕೆಗಳನ್ನು ಪಾಲಿಟ್‌ಬ್ಯೂರೋ ಹೇಳಿಕೆ ಬೆಂಬಲಿಸಿದೆ.

ಆಂಧ್ರ ಪ್ರದೇಶ ಮತ್ತು ಕೇರಳದ ರಾಜ್ಯಪಾಲರುಗಳು ಸಂವಿಧಾನಬಾಹಿರವಾಗಿ ಕಾಂಗ್ರೆಸ್(ಐ) ಪರವಾಗಿ ತಮ್ಮ ಹುದ್ದೆಯ ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ಪಾಲಿಟ್‌ಬ್ಯೂರೋ ತೀವ್ರವಾಗಿ ಗಮನಿಸಿ ಅದನ್ನು ಬಲವಾಗಿ ಪ್ರತಿಭಟಿಸಿದೆ. ಈ ನಿಯಮ ಬಾಹಿರ ರಾಜ್ಯಪಾಲರುಗಳನ್ನು ವಾಪಸ್ ಕರೆಸಿಕೊಂಡರೆ ರಾಜ್ಯಗಳಿಗೂ ಒಳಿತು ಪ್ರಜಾಪ್ರಭುತ್ವಕ್ಕೂ ಒಳಿತು ಎಂದು ಪಾಲಿಟ್‌ಬ್ಯೂರೋ ದೃಢ ಅಭಿಪ್ರಾಯ ವ್ಯಕ್ತಪಡಿಸಿದೆ.

ತ್ರಿಪುರಾದಲ್ಲಿ ಬರ್ಬರತೆ

ತ್ರಿಪುರಾದಲ್ಲಿ ಜನತೆಯ ಮೇಲೆ, ನಮ್ಮ ಪಕ್ಷದ ಮೇಲೆ ನಡೆಯುತ್ತಿರುವ ಅರೆ-ಫ್ಯಾಸಿಸ್ಟ್ ಬರ್ಬರ ಭಯೋತ್ಪಾದಕತೆಯನ್ನು ಪಾಲಿಟ್‌ಬ್ಯೂರೋ ಖಂಡಿಸಿ ಈ ಅಭೂತಪೂರ್ವ ದಬ್ಬಾಳಿಕೆಯನ್ನು ಸತತವಾಗಿ ಎದುರಿಸುತ್ತಿರುವ ಅಲ್ಲಿನ ಜನತೆ ಹಾಗೂ ನಮ್ಮ ಪಕ್ಷವನ್ನು ಅಭಿನಂದಿಸಿದೆ. ಈ ಅತ್ಯಾಚಾರಗಳು ಜನತೆಯ ಮೂಲಭೂತ ಹಕ್ಕುಗಳ ವಿರುದ್ಧ ಸರ್ವಾಧಿಕಾರಿ ಹಲ್ಲೆಗಳ ಆರಂಭ ಎಂಬುದನ್ನು ದೇಶಾದ್ಯಂತ ಎಡ, ಪ್ರಜಾಪ್ರಭುತ್ವ ಹಾಗೂ ಪ್ರಗತಿ ಪರ ಶಕ್ತಿಗಳು ಅರಿತಿಲ್ಲ ಎಂದೂ ಪಿ.ಬಿ. ಹೇಳಿದೆ. ಕಾಂಗ್ರೆಸ್(ಐ) ಬುಡ ಕಟ್ಟು ಜನಗಳ ಹಕ್ಕುಗಳ ವಿರುದ್ಧ ತನ್ನ ತೀವ್ರ ವೈರತ್ವವನ್ನು ತೋರ್ಪಡಿಸುತ್ತಿದೆ. ಇದನ್ನು ಆಳುವ ಕೂಟದ ಟಿ.ಯು. ಜೆ.ಎಸ್.ನ ಒಂದು ವಿಭಾಗ ಕೂಡಾ ಪ್ರತಿಭಟಿಸುತ್ತಿದೆ ಎಂದು ಪಿ.ಬಿ. ತಿಳಿಸಿದೆ.

ಪೊಳ್ಳು ವಿಕೇಂದ್ರೀಕರಣ

ಯೋಜನೆಯ ವಿಕೇಂದ್ರೀಕರಣದ ಬಗ್ಗೆ ಕಾಂಗ್ರೆಸ್(ಐ) ಪರಿಶೀಲಿಸುತ್ತಿರುವ ಪ್ರಸ್ತಾಪಗಳನ್ನು ವಿಶ್ಲೇಷಿಸಿದ ಪಾಲಿಟ್ ಬ್ಯೂರೋ ರಾಜೀವ್ ಸರ್ಕಾರದ ಪಂಚಾಯಿತಿ ರಾಜ್ಯದ ಗೋಸುಂಬೆ ಹೇಳಿಕೆಗಳ ಮರೆಯಲ್ಲಿ ರಾಜ್ಯಗಳ ಅಧಿಕಾರಗಳನ್ನು ವಂಚಿಸಿ ಪಂಚಾಯತ್‌ಗಳ ಮೇಲೆ ನೇರ ಆರ್ಥಿಕ ಹತೋಟಿ ಪಡೆದು ಚುನಾವಣಾ ಹೋರಾಟದಲ್ಲಿ ಅದನ್ನೊಂದು ಅಸ್ತ್ರವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆಯಷ್ಟೇ ಎಂದು ಜನತೆಯನ್ನು ಎಚ್ಚರಿಸಿದೆ.

ಈ ಪ್ರಸ್ತಾಪಗಳು ರಾಜ್ಯಗಳ ಹಕ್ಕುಗಳನ್ನು ಮೊಟಕು ಮಾಡಿ ಕೇಂದ್ರದಲ್ಲಿ ಮತ್ತಷ್ಟು ಅಧಿಕಾರಗಳನ್ನು ಕೇಂದ್ರೀಕರಿಸುವ ಕ್ರಮಗಳು. ಅವುಗಳಲ್ಲಿ ಪ್ರಜಾಪ್ರಭುತ್ವವಾಗಲಿ ವಿಕೇಂದ್ರೀಕರಣವಾಗಲಿ ಲೇಶ ಮಾತ್ರವೂ ಇಲ್ಲ. ರಾಜ್ಯ ಸರ್ಕಾರಗಳನ್ನೂ ವಿಧಾನ ಮಂಡಲಗಳನ್ನು ಕೇವಲ ಕಪಟ ನಾಟಕದ ಮಟ್ಟಕ್ಕಿಳಿಸುವ ತಂತ್ರಗಳು. ಇದು ಭಾರತದ ಸಂವಿಧಾನದ ಪೂರ್ಣ ಉಲ್ಲಂಘನೆ ಎಂದು ಬಲವಾಗಿ ಖಂಡಿಸಿರುವ ಪಾಲಿಟ್‌ಬ್ಯೂರೋ ಮಾನ ನಷ್ಟ ಮಸೂದೆಯನ್ನು ವಿಫಗೊಳಿಸಿದಂತೆ ಈ ಪ್ರಯತ್ನವನ್ನೂ ಸಾಮೂಹಿಕ ಚಳುವಳಿ ಮೂಲಕ ಸೋಲಿಸಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳಿಗೆ, ಪ್ರಗತಿಪರ ಶಕ್ತಿಗಳಿಗೆ ಕರೆ ನೀಡಿದೆ.

ಜಮ್ಮು-ಕಾಶ್ಮೀರದ ಜನತೆ ಕೋಮು ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಐಕ್ಯತೆಯಿಂದ ನಿಲ್ಲಬೇಕೆಂದು ಪಾಲಿಟ್ ಬ್ಯೂರೋ ಮನವಿ ಮಾಡಿಕೊಂಡಿದೆ.

ಶ್ರೀಲಂಕಾದಲ್ಲಿ ಒಪ್ಪಂದದ ಜಾರಿಗೆ ಕ್ರಮ ಕೈಗೊಳ್ಳಲಾಗಿದೆಯಾದರೂ ಪ್ರಾಂತೀಯ ಮಂಡಳಿಗೆ ಹಾಗೂ ಆಡಳಿತಕ್ಕೆ ಅಧಿಕಾರಗಳ ವಿಕೇಂದ್ರೀಕರಣ ಇನ್ನೂ ಪೂರ್ಣಗೊಂಡಿಲ್ಲ. ಇನ್ನೂ ತ್ವರಿತಗೊಳಿಸಿದರೆ ಶಾಂತಿ ಸ್ಥಾಪಿಸುವುದರಲ್ಲಿ ನೆರವಾಗುತ್ತದೆ ಎಂದು ಪಿ.ಬಿ. ಅಭಿಪ್ರಾಯಪಟ್ಟಿದೆ.

ಆಫಘಾನಿಸ್ತಾನದ ಬೆಳವಣಿಗೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ ಪಾಲಿಟ್ ಬ್ಯೂರೋ ಜಿನೇವಾ ಒಪ್ಪಂದದ ಪ್ರಕಾರ ಸೋವಿಯತ್ ಪಡೆಗಳು ವಾಪಸ್ಸಾಗುತ್ತಿದ್ದರು. ಅಮೆರಿಕಾ ಪಾಕಿಸ್ತಾನದ ಮೂಲಕ ಬಂಡುಕೋರರಿಗೆ ನೆರವು ನೀಡುವ ಆಕ್ರಾಮಕ ನೀತಿ ಮುಂದುವರಿಸುತ್ತಿದೆ.

ಆಫಘಾನಿಸ್ತಾನದ ಪ್ರಗತಿಪರ ಶಕ್ತಿಗಳೊಂದಿಗೆ ಸೌಹಾರ್ದತೆ ವ್ಯಕ್ತಪಡಿಸಿದ ಪಾಲಿಟ್‌ಬ್ಯೂರೋ ಹೇಳಿಕೆ ಪಾಕಿಸ್ತಾನದಲ್ಲೂ ಪ್ರಜಾಪ್ರಭುತ್ವ ಶಕ್ತಿಗಳು ಜಿನೇವಾ ಒಪ್ಪಂದ ಪಾಲಿಸುವಂತೆ ತಮ್ಮ ದನಿಯೆತ್ತುತ್ತಿರುವುದನ್ನು ಗಮನಿಸಿದೆ.

ಜಾತಿಯ ಅಸಮಾನತೆಗೆ ಮುಟ್ಟುಗೋಲು ಹಾಕಲೇಬೇಕು

ಪುಟ 1ರಿಂದ

ರಾಜ್ಯದ ಹಲವೆಡೆ ದಲಿತರ ಮೇಲೆ ಅಮಾನುಷ ರೀತಿಯ ದಬ್ಬಾಳಿಕೆ ನಡೆಯುತ್ತಿರುವುದನ್ನು ಕಾಣಬಹುದಾಗಿದೆ. ಅದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಬಿಹಾರ, ಗುಜರಾತ್, ಮತ್ತಿತರ ರಾಜ್ಯಗಳಲ್ಲೂ ದಿನನಿತ್ಯ ನಡೆಯುತ್ತಿವೆ. ಅಸ್ಪೃಶ್ಯತೆ-ಅಸ್ಪೃಶ್ಯರು, ಸಮಾಜದಲ್ಲಿ ಅವರು ಬಹಿಷ್ಕರಿಸಲ್ಪಟ್ಟವರು, ನಾಗರೀಕರಾಗಿ ಬಾಳುವ ಹಕ್ಕೇ ಅವರಿಗಿಲ್ಲ ಎಂಬ ಊಳಿಗಮಾನ್ಯ ಪದ್ಧತಿಯ ಕಾಲದಿಂದಲೂ ಬೆಳೆದುಬಂದ ಇಂದಿಗೂ ಅದು ಜೀವಂತವಾಗಿಯೇ ಉಳಿದುಕೊಂಡಿದೆ, ಹಲವಾರು ರೀತಿಯ ದುರಂತಕ್ಕೆ ಕಾರಣವಾಗುತ್ತಿದೆ.

ಸರ್ಕಾರದ ದಾಖಲೆಗಳಲ್ಲಿ ಲಭ್ಯವಾಗಿರುವ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ಕಳೆದ ವರ್ಷ ಸೆಪ್ಟೆಂಬರ್‌ವರೆಗೆ 297 ಪ್ರಕರಣಗಳು ದಾಖಲಾಗಿವೆ. 1987ರಲ್ಲಿ 5 21, 1981ರಲ್ಲಿ 426 ಆಗಿದ್ದವು. ಇವುಗಳಲ್ಲಿ ವಿಚಾರಣೆಯಾಗಿ ದಂಡನೆಗೆ ಒಳಗಾದವುಗಳು ಅತಿ ವಿರಳ. ಹರಿಜನರಿಗೆ ಸಾಮಾಜಿಕ ಸೇವೆ ನಿರಾಕರಿಸುವ ಪ್ರಸಂಗಗಳು 1986ರಲ್ಲಿ 769, 1987ರಲ್ಲಿ 672, 1988ರಲ್ಲಿ 85 8. ಈ ಅಂಕಿ ಅಂಶಗಳು ವಾಸ್ತವ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುವುದಿಲ್ಲ. ಗ್ರಾಮಾಂತರ ಪ್ರದೇಶದ ಬಹಳಷ್ಟು ಘಟನೆಗಳು ಬೆಳಕು ಕಾಣುವುದೇ ಇಲ್ಲ. ಹರಿಜನರಲ್ಲಿ, ಅವರ ಹಕ್ಕುಗಳ ಸಾಧನೆಗಾಗಿ ಹೆಚ್ಚಿನ ತಿಳುವಳಿಕೆ ಉಂಟಾಗುತ್ತಿದೆ. ಅವುಗಳನ್ನು ಪಡೆಯುವ ಸಲುವಾಗಿ ಹೋರಾಡುವ ಪ್ರವೃತ್ತಿ ಬೆಳೆಯುತ್ತಿದೆ. ಹೋರಾಟಗಳು ನಡೆಯುತ್ತಿವೆ. ಅವುಗಳ ವಿರುದ್ಧ ಸಂಘಟಿತ ಪ್ರತಿರೋಧವೂ ಬೆಳೆದು ಬರುತ್ತಿದೆ. ಅವುಗಳ ಸಂಘರ್ಷವೇ ನಾವು ಈಗ ಕಾಣುತ್ತಿರುವ ಘರ್ಷಣೆಗಳ ಸರಮಾಲೆ. ಸಮಾಜಕ್ಕೆ ಕಳಂಕ ಉಂಟು ಮಾಡುತ್ತಿರುವ ದೌರ್ಜನ್ಯಗಳು.

ಮಂಡ್ಯ ಜಿಲ್ಲೆಯ ಕರೆಗೊಡು, ಹಳ್ಳಿಗೆರೆಗಳಲ್ಲೂ, ಚಿಂಚೋಳಿ ಆಳಂದಗಳಲ್ಲೂ ರಾಜ್ಯದ ಇತರೆಡೆಗಳಲ್ಲೂ ನಡೆಯುತ್ತಿರುವ ದಬ್ಬಾಳಿಕೆಗಳಿಗೆಲ್ಲ ಇದೇ ಕಾರಣ. ಸಮಾನತೆಗಾಗಿ ಹೋರಾಟ ಒಂದೆಡೆ. ಅದಕ್ಕೆ ವಿರೋಧ ಮತ್ತೊಂದೆಡೆ.

ಪ್ರತಿವರ್ಷ ಸಂಕ್ರಮಣದ ದಿವಸ ಸಂಬಂಧಿಕರಿಗೆ, ಗೆಳೆಯರಿಗೆಲ್ಲ ಎಳ್ಳು ಬೆಲ್ಲ (ಕುಸುರೆಳ್ಳು) ಕೊಟ್ಟು, "ಹಿಂದಿನ ಕಹಿಯನ್ನೆಲ್ಲ ಮರೆಯೋಣ, ಮುಂದೆ ಎಳ್ಳು ಬೆಲ್ಲದಂತೆ ಸಿಹಿಯಾಗಿ ಬಾಳೋಣ"ವೆಂದು ಕೈ ಜೋಡಿಸಿ, ಅಪ್ಪಿಕೊಂಡು ಆನಂದದಿಂದಿರುವ ದಿನ. ಎಳ್ಳು ಬೆಲ್ಲ ಮಿಶ್ರಿತ ಕುಸುರೆಳ್ಳು ತರಲು ಹರಿಜನ ಯುವಕರು ಪೇಟೆಗೆ ಹೋದಾಗ ಅವರಲ್ಲೊಬ್ಬನಿಗೆ ಹೊಡೆದು ಅಟ್ಟಿಸಿಕೊಂಡು ಬಂದರೆಂದೂ, ಹರಿಜನರ ಓಣಿಯ ಹತ್ತಿರವೇ ಇರುವ ಚಮಿಣಿ ಎಣ್ಣೆ ಅಂಗಡಿಯವನನ್ನೂ ಕರೆದುಕೊಂಡು ಬಂದು, ಅಂಗಡಿಯಿಂದ ಚಮಿಣಿಎಣ್ಣೆ ಒಯ್ದು ಮನೆಗಳಿಗೆ ಉಗ್ಗಿ ಬೆಂಕಿ ಹಚ್ಚಿದರೆಂದೂ ನೊಂದವರ ಆರೋಪ. ಕೆಲವು ತಿಂಗಳ ಹಿಂದೆ ಕಾಲೇಜಿನಲ್ಲಿ ಪ್ರಧಾನ ಕಾರ್ಯದರ್ಶಿ ಚುನಾವಣೆಯಲ್ಲಿ ಹರಿಜನ ವಿದ್ಯಾರ್ಥಿಗಳನ್ನು ಸ್ಪರ್ಧಿಸಲಿಕ್ಕೆ ಬಿಡಲಿಲ್ಲ, ಅಂದಿನಿಂದಲೇ ವೈಮನಸ್ಸು ಬೆಳೆದು ಬಂದಿದೆಂಬ ಹೇಳಿಕೆ. ಸಂಕ್ರಮಣದ ಮೂರು ದಿವಸದ ಮುಂಚೆ ಸಿನೆಮಾ ಥಿಯೇಟರಿನಲ್ಲಿ ಹರಿಜನ ವಿದ್ಯಾರ್ಥಿ ಕುರುಬರ ಹುಡುಗಿ ಮೇಲೆ ಕಲ್ಲು ಎಸೆದಿದ್ದ. ಆವ ಕುಸುರೆಳ್ಳು ತರಲು ಪೇಟೆಗೆ ಬಂದಾಗ ಅವನಿಗೆ ಹೊಡೆದದ್ದು ನಿಜ. ಹರಿಜನ ಓಣಿಯವರಿಗೂ ಊರಿನವರಿಗೂ ಬಹು ದಿವಸಗಳಿಂದಲೂ ವೈಷಮ್ಯ ಬೆಳೆದು ಬಂದಿತ್ತು. ಹಿಂದೆ ಕೂಡ ಅದನ್ನು ಶಮನಗೊಳಿಸುವ ಪ್ರಯತ್ನ ನಡೆದಿತ್ತು. ಆದರದು ಬೆಳೆಯುತ್ತಾ ಬಂದಿದೆಂದು ಊರವರ ಹೇಳಿಕೆ. ಹೀಗಾಗಬಾರದಾಗಿತ್ತು ಎಂದು ಹೇಳುವವರೂ ಬಹಳ ಜನ.

ನೂರಾರು ಜನ ಹರಿಜನ ಓಣಿಗೆ ಬೆಂಕಿ ಹಚ್ಚಲು ಬಂದಾಗ ಆರ್.ಎಸ್.ಎಸ್. ಜಿಂದಾಬಾದ್, ಭಾರತೀಯ ಜನತಾ ಪಾರ್ಟಿ ಜಿಂದಾಬಾದ್ ಎಂದು ಘೋಷಣೆ ಕೂಗುತ್ತಿದ್ದರಂತೆ. ಹರಿಜನರ ಮನೆಗಳನ್ನಷ್ಟೇ ಸುಟ್ಟಿದ್ದಲ್ಲ, ದಾಸರು, ಕುಂಚಿಕೋರರ ಮನೆಗಳೂ ಸುಡಲ್ಪಟ್ಟಿವೆ. ಮುಸಲ್ಮಾನರ ಅಂಗಡಿಗಳು ಲೂಟಿಗೆ, ಬೆಂಕಿಗೆ ಬಲಿಯಾಗಿವೆ. ಇದು ಜಾತೀವಾದಿಗಳ ಕೈವಾಡವನ್ನು ಸ್ಪಷ್ಟವಾಗಿ ತೋರ್ಪಡಿಸುತ್ತದೆ.

ತಪ್ಪು ಮಾಡಿದ ಹರಿಜನ ಯುವಕರನ್ನು ಶಿಕ್ಷಿಸಬಹುದಿತ್ತಲ್ಲ ಎಂಬ ಪ್ರಶ್ನೆಗೆ ಊರವರಿಂದ ಉತ್ತರವಿಲ್ಲ. ವಿದ್ಯಾರ್ಥಿ ವಿದ್ಯಾರ್ಥಿನಿಯರು ದಿನನಿತ್ಯ ಎರಡೂ ಬದಿಗಿರುವ ಹರಿಜನರ ಮನೆಗಳ ಮಧ್ಯದಲ್ಲಿರುವ ರಸ್ತೆಯಲ್ಲೇ ಓಡಾಡುತ್ತಿರುವಾಗ ಹುಡುಗಿಯರನ್ನು ಚುಡಾಯಿಸುವ ಕೃತ್ಯ ಯಾಕೆ ನಡೆಯುತ್ತಿಲ್ಲ ಎಂಬುದಕ್ಕೂ ಉತ್ತರವಿಲ್ಲ. ಆದ ಕಾರಣ ಇದಕ್ಕೆಲ್ಲಾ ಆರ್.ಎಸ್.ಎಸ್.ನಂತ ಜಾತೀ ವಾದಿಗಳ ಪ್ರಚೋದನೆ ಮುಖ್ಯ ಕಾರಣವೆಂಬುದು ಸ್ಪಷ್ಟ. ಕೆಲವು ದಿವಸಗಳ ಹಿಂದೆ ಮುಸಲ್ಮಾನರನ್ನು ಪ್ರಚೋದಿಸುವ ಘಟನೆಯೂ ನಡೆದಿತ್ತಂತೆ.

ತಾ॥ 10ರಂದು ಹೆಡಗೆವಾರ ಜನ್ಮಶತಾಬ್ದಿ ದಿನಾಚರಣೆ ನಿಮಿತ್ತ ಆರ್.ಎಸ್.ಎಸ್. ಮೆರವಣಿಗೆ ಪ್ರಚೋದನಾಕಾರಿ ಘೋಷಣೆಗಳೊಂದಿಗೆ ಹರಿಜನ ಓಣಿಯಲ್ಲೂ ಸುತ್ತಾಡಿತ್ತು. 11ರಂದು ಹರಿಜನ ಯುವಕರನ್ನು ಒಬ್ಬ ಬಿ.ಜೆ.ಪಿ. ವಕೀಲ ಥಳಿಸಿದ್ದ. 14ರಂದು ಕುಸುರೆಳ್ಳಿನ ನೆವದಲ್ಲಿ ಹರಿಜನ ಮನೆಗಳನ್ನೆಲ್ಲ ಭಸ್ಮಗೊಳಿಸಲಾಯಿತು. ಹೀಗಿದ್ದರೂ ಕೂಡ ಗುಲ್ಬರ್ಗಾ ಡಿ.ಐ.ಜಿ. ಯವರು ಹರಿಜನ ಯುವಕರು ಮೇಲ್ಜಾತಿಯ ಹುಡುಗಿಯರನ್ನು ಚುಡಾಯಿಸಿದರಿಂದ ಈ ದೌರ್ಜನ್ಯ ನಡೆಯಿತೆಂದು ಪತ್ರಿಕಾ ಹೇಳಿಕೆ ನೀಡಿರುವುದು ಖಂಡನೀಯ.

ಯಾವುದೇ ಕಾರಣದಿಂದಾಗಲೀ ಈ ರೀತಿ ವೈಮನಸ್ಸು ಬೆಳೆಯುತ್ತಿದೆಂಬ ವಿಷಯ ಗೊತ್ತಿದ್ದರೂ ಕೂಡ ಪೊಲೀಸ್ ಅಧಿಕಾರಿಗಳಿಂದಾಗಲೀ, ಜನತಾದಳ-ಕಾಂಗ್ರೆ ಮುಖಂಡರಾಗಲೀ ಮಧ್ಯ ಪ್ರವೇಶಿಸಿ, ತಪ್ಪಿತಸ್ಥರನ್ನು ಶಿಕ್ಷಿಸಿ, ಸೌಹಾರ್ದತೆ ಉಂಟು ಮಾಡಿ, ಹರಿಜನ ದಲಿತರಿಗೆ ರಕ್ಷಣೆ ನೀಡುವ, ಆರ್.ಎಸ್.ಎಸ್. ಹಾಗೆಯೇ ಇತರ ಪಟ್ಟಭದ್ರ ಹಿತಾಸಕ್ತಿಗಳು ದೌರ್ಜನ್ಯ ನಡೆಸುವುದನ್ನು ತಡೆಗಟ್ಟುವ ಕೆಲಸ ಮಾಡದಿರುವುದು ಸರಿಯಲ್ಲ.

ಪ್ರತಿಬಂಧಕಾಜ್ಞೆ ರದ್ದಾದ ಮರು ದಿವಸವೇ 400 ಜನ ರೈತರೂ ವಿದ್ಯಾರ್ಥಿಗಳು ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹರಿಜನರ ಮೇಲಿನ ದಬ್ಬಾಳಿಕೆಯನ್ನು ಖಂಡಿಸಿ, ಆತ್ಮೀಯ ಸೌಹಾರ್ದತೆಯ ವಾತಾವರಣ ಉಂಟು ಮಾಡಿ, ಹಿಂದುಳಿದವರಿಗೆ ರಕ್ಷಣೆ ನೀಡಬೇಕೆಂದು ಘೋಷಿಸುತ್ತ ಊರಲ್ಲಿ ಮೆರವಣಿಗೆ ತೆಗೆದು, ಸಾರ್ವಜನಿಕ ಸಭೆ ಮಾಡಿದಾಗ ನಮ್ಮ ಕಾರ್ಯಕ್ರಮವನ್ನು ಪ್ರಶಂಸೆ ಮಾಡಿದವರು ಬಹಳ ಜನ.

ಇಂಥ ಘಟನೆಗಳು ನಡೆದಾಗ ಸಿ.ಪಿ.ಐ.(ಎಂ) ಪಕ್ಷದ, ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳ ನೇರ ಮಧ್ಯ ಪ್ರವೇಶ ಅತ್ಯಗತ್ಯ. ಅದು ದಲಿತರಲ್ಲಿ, ಅಲ್ಪಮತಸ್ಥರಲ್ಲಿ ವಿಶ್ವಾಸ ಮನೋಧೈರ್ಯ ಉಂಟು ಮಾಡುವುದಷ್ಟೇ ಅಲ್ಲ, ಜಾತೀವಾದಿಗಳನ್ನೂ, ಸಮಾಜದ್ರೋಹಿಗಳನ್ನೂ ಬಯಲಿಗೆಳೆಯುವುದರಲ್ಲಿ, ಅವರನ್ನು ಪ್ರತ್ಯೇಕಿಸುವುದರಲ್ಲಿ ಸಹಾಯ ಮಾಡುತ್ತದೆ.



ಎದೆಗಾರಿಕೆ ಉಳ್ಳವರು ಮಾತ್ರ....

ಕ್ಯೂಬಾದಲ್ಲಿ ಪ್ರಜಾಪ್ರಭುತ್ವವಿದೆಯೇ ಎಂಬ ಶಂಕೆಯಿರುವವರು ತಮ್ಮ ದೇಶಗಳ ರೈತರಿಗೆ, ಜನತೆಗೆ ಕ್ಯೂಬಾದಂತೆ ಶಸ್ತ್ರಗಳನ್ನು ಕೊಡಲಿ. ಅವರು ಶೋಷಿತರ ವಿರುದ್ಧ ಅಶ್ರುವಾಯು ಪ್ರಯೋಗಿಸುತ್ತಾರೋ ನೋಡಲಿ. ಶಸ್ತ್ರಾಸ್ತ್ರಗಳು ಜನಸಮೂಹಗಳ ಪ್ರಕೃತಿದತ್ತ ಹಕ್ಕು. ಅದನ್ನು ಅವರಿಗೆ ಕೊಡಬಲ್ಲ ಎದೆಗಾರಿಕೆ ಉಳ್ಳವರು ಮಾತ್ರವೇ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವ ಹಕ್ಕು ಹೊಂದಿದ್ದಾರೆ.

-ಫಿದೆಲ್ ಕಾಸ್ಟ್ರೋ

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053. Editor: P.Ramachandra Rao Managing Editor N.K.Upadhyaya
M~nagerial Office: Shobha Lodge Complex, 5th Main Road, Gandhinagar, Bangalore-560009